ಸಂಜೆವಾಣಿ

1982

ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ

www.sanjevani.com contact @sanjevani.com PH: 080 22868882

Excel
Refrigeration & Bakery Equipment
Bommasandra, Bangalore
ರೋಟ್ರಿ ರ್‍ಯಾಕ್ ಓವೆನ್‌ಗಳು
ಸ್ಪಿರಲ್ ಮಿಕ್ಸರ್ಸ್
ಪ್ಲಾನೆಟರಿ ಮಿಕ್ಸರ್ಸ್
ಇಂಪೋರ್ಟೆಡ್ ಓವೆನ್‌ಗಳು.
ಕಿಚನ್ ಫ್ರೀಜರ್‌ಗಳು
ಜ್ಯೂಸ್ ಮೆಷಿನ್‌ಗಳು
ವರ್ಟಿಕಲ್ ಕೇಕ್ ಡಿಸ್‌ಪ್ಲೇ.
Mob : 9902030007/9900021097

# ಕೈ-ಕಮಲ ಯಾತ್ರೆಗಳ ಭರಾಟೆ

## ಇಂದು ಭಾರತ್ ಜೋಡೋ-2 ಯಾತ್ರೆ ಆರಂಭಿಸಿದ ಕಾಂಗ್ರೆಸ್- ನಾಳೆಯಿಂದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ

**ಬೆಂಗಳೂರು, ಸೆ. 30-** ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಲ್ಲಿ ಈಗ ಯಾತ್ರೆಗಳ ಭರಾಟೆ. ಕಾಂಗ್ರೆಸ್ ಪಕ್ಷ ಇಂದಿನಿಂದ ಭಾರತ್ ಜೋಡೋ-2 ಯಾತ್ರೆ ಆರಂಭಿಸಿದ್ದರೇ, ಬಿಜೆಪಿ ನಾಳೆಯಿಂದ ಸೇವಾ ಸಂಕಲ್ಪ-ವಿಜಯ ಸಂಕಲ್ಪ ಯಾತ್ರೆಯನ್ನು ಸಂಘಟಿಸಿದೆ. ಮುಂಬರುವ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯ್ತಿ ಚುನಾವಣೆ ಹಾಗೂ ವಿಧಾನಸಭಾ ಚುನಾವಣೆಗಳ ಮೇಲೆ ಕಣ್ಣಿಟ್ಟು ಈ ಎರಡೂ ಪಕ್ಷಗಳು ಈಗ ಯಾತ್ರಾ ರಾಜಕಾರಣಕ್ಕೆ ನಾಂದಿ ಹಾಡಿವೆ. ಈ ಯಾತ್ರೆಗಳ ಮೂಲಕ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಬೂತ್ ಮಟ್ಟದಲ್ಲಿ ಪಕ್ಷ ಬಲಪಡಿಸುವ ಜತೆಗೆ ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಗುರಿ ಹಾಕಿಕೊಂಡಿವೆ.

### ಶಿಕಾರಿಪುರದಿಂದ ಭಾರತ್ ಜೋಡೋ-2 ಆರಂಭ

ಕಾಂಗ್ರೆಸ್ ಪಕ್ಷ ಇಂದಿನಿಂದ ಭಾರತ್ ಜೋಡೋ ಯಾತ್ರೆ-2 ನ್ನು ಆರಂಭಿಸಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ವಕ್ಷೇತ್ರವಾದ ಶಿಕಾರಿಪುರದಿಂದಲೇ ಈ ಯಾತ್ರೆ ಆರಂಭಗೊಂಡಿದೆ.

ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಅವರು 2022ರ ಸೆಪ್ಟೆಂಬರ್ 7ರಂದು ಕನ್ಯಾಕುಮಾರಿಯಿಂದ ಭಾರತ್ ಜೋಡೋ ಪಾದಯಾತ್ರೆ ಆರಂಭಿಸಿದ್ದರು. ಈ ಪಾದಯಾತ್ರೆ ಕರ್ನಾಟಕವನ್ನು 2022 ಸೆಪ್ಟೆಂಬರ್ 30 ರಂದು ಗುಂಡ್ಲುಪೇಟೆ ಮೂಲಕ ಪ್ರವೇಶಿಸಿತ್ತು. ಇದೇ ನೆನಪಿನಲ್ಲಿ ಪುಟ 2

### ನಾಳೆ ಬಿಜೆಪಿಯಿಂದ ಸೇವಾ ಸಂಕಲ್ಪ - ವಿಜಯ ಸಂಕಲ್ಪ ಯಾತ್ರೆ

ಪ್ರಧಾನಿ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ಸಾರ್ಥಕ 25 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯ ಬಿಜೆಪಿ ನಾಳೆಯಿಂದ ಎಲ್ಲ ವಿಧಾನಸಭಾ ಕ್ಷೇತ್ರಗಲ್ಲಿ ಸೇವಾ ಸಂಕಲ್ಪ ಅಭಿಯಾನ ಹಾಗೆಯೇ ಮುಂದಿನ ಸ್ಥಳೀಯ ಸಂಸ್ಥೆ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸಲು ವಿಜಯಸಂಕಲ್ಪ ಯಾತ್ರೆಯನ್ನು ಒಟ್ಟೊಟ್ಟಿಗೆ ನಡೆಸಲಿದೆ. ಕೇಂದ್ರ ಸರ್ಕಾರದ ಯೋಜನೆಗಳನ್ನು ಜನರ ಮನೆ ಮನೆಗೆ ತಲುಪಿಸಲು ಹಾಗೂ ಪುಟ 2

### ಜನ ಜಾಗೃತಿಗೆ ಯಾತ್ರೆ: ಬಿ.ಕೆ. ಹರಿಪ್ರಸಾದ್

**ಶಿವಮೊಗ್ಗ, ಸೆ. 30-** ಈಸೂರು ಗ್ರಾಮವನ್ನು ಸ್ವಾತಂತ್ರ್ಯ ಗ್ರಾಮವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಇಲ್ಲಿಂದಲೇ ಜನಜಾಗೃತಿ ಯಾತ್ರೆ ಆರಂಭಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಈಸೂರಿನಲ್ಲಿ ಭರತ್ ಜೋಡೋ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಹೆಸರುಗಳನ್ನು ಕೈಬಿಟ್ಟಿರುವ ಕುರಿತು ಜನರಲ್ಲಿ ಜಾಗೃತಿ ಮೂಡಿಸಲಾಗುವುದು. 69 ಕ್ಷೇತ್ರಗಳಲ್ಲಿ ಕಡಿಮೆ ಅಂತರದಲ್ಲಿ ಕಾಂಗ್ರೆಸ್ ಸೋತಿದ್ದು, ಈ ಕ್ಷೇತ್ರಗಳಲ್ಲಿಯೂ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಪುಟ 2



The Best Jewellery
•GOLD •SILVER •DIAMOND
BIS 916 HALLMARKED GOLD JEWELLERY
ಚಿನ್ನ ಮತ್ತು ಬೆಳ್ಳಿ ಖರೀದಿಸಲು ಪ್ರತಿಷ್ಠಿತ ಆಭರಣ ಶೋರೂಮ್.
T & C Apply
ನಿಮ್ಮ ಹಳೆಯ ಚಿನ್ನವನ್ನು ನಾವು ಆನ್‌ಲೈನ್ ದರದಲ್ಲಿ ಖರೀದಿಸುತ್ತೇವೆ.
Making Charges Starting from 3%
Benefits
*Pay flexible amounts for 10 months and purchase on 11th month. *50% off on making charges on all gold ornaments.
*This offer will be valid only on the total amount accumulated for 10 months.
#6, 1/1, 11th Main Road Gokula 1st Stage, Bombay Dyeing Road, Opp Comfort Inn Hotel, Yeshwanthpur, Bengaluru- 560 054. Call: 080-41146916 / +91-9686062916

## ಹಾಲು ದರ ಏರಿಕೆ ನಾಳಿನ ಸಂಪುಟ ಸಭೆಯಲ್ಲಿ ನಿರ್ಧಾರ



**ಬೆಂಗಳೂರು, ಸೆ.30-** ಹಾಲು ಉತ್ಪಾದಕರ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಲಿದ್ದು, ಹಾಲಿನ ದರ ಏರಿಕೆಯಾಗುವುದು ಬಹುತೇಕ ಖಚಿತವಾಗಿದೆ.

ಹಾಲಿನ ಖರೀದಿ ದರ ಅಥವಾ ಉತ್ಪಾದಕರಿಗೆ ನೀಡುವ ಪ್ರೋತ್ಸಾಹ ಧನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಈಗಾಗಲೇ 16 ಹಾಲು ಒಕ್ಕೂಟಗಳ ಪ್ರತಿನಿಧಿಗಳು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ಚರ್ಚೆ ನಡೆಸಿದ್ದಾರೆ.

ಕ್ಯಾಬಿನೆಟ್‌ನಲ್ಲಿ ಚರ್ಚಿಸಿದ ಬಳಿಕ ದರ ಏರಿಕೆ ಕುರಿತು ನಿರ್ಧಾರ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದರು, ಹೀಗಾಗಿ ನಾಳಿನ ಸಚಿವ ಸಂಪುಟ ಸಭೆಯತ್ತ ಹಾಲು ಉತ್ಪಾದಕರು ಹಾಗೂ ಹೈನುಗಾರರ ಗಮನ ನೆಟ್ಟಿದೆ.

**10 ಏರಿಕೆಗೆ ಉತ್ಪಾದಕರ ಒತ್ತಾಯ:**

ಪ್ರಸ್ತುತ ಹಾಲು ಉತ್ಪಾದಕರು ಪ್ರತಿ ಲೀಟ-ರ್‌ಗೆ 10ರಷ್ಟು ದರ ಹೆಚ್ಚಳ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಆದರೆ ಉತ್ಪಾದಕರ ಬೇಡಿ-ಕೆಯಂತೆ ಪೂರ್ಣ 10ರಷ್ಟು ಏರಿಕೆ ಮಾಡುವ ಸಾಧ್ಯತೆ ಕಡಿಮೆ ಎನ್ನಲಾಗುತ್ತಿದೆ.

ಸರ್ಕಾರ, ಹಾಲು ಒಕ್ಕೂಟಗಳು ಹಾಗೂ ಗ್ರಾಹಕರ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇದೆ, ಪ್ರತಿ ಲೀಟರ್‌ಗೆ ಸುಮಾರು 3ರಿಂದ 5ರಷ್ಟು ಹೆಚ್ಚಳ ಮಾಡುವ ಸಾಧ್ಯತೆಯ ಬಗ್ಗೆ ಚರ್ಚೆ ನಡೆಯುತ್ತಿದೆ. 10ರಷ್ಟು ಏರಿಕೆ ಮಾಡಿದರೆ ಸರ್ಕಾರದ ಮೇಲೆಯೂ ಹೆಚ್ಚಿನ ಆರ್ಥಿಕ ಹೊರೆ ಬೀಳುವ ಪುಟ 2

## ಸಿಇಸಿ ಭಿನ್ನಾಭಿಪ್ರಾಯ ಬೆನ್ನಲ್ಲೇ ಫಾರಂ-6 ಬದಲಾವಣೆ ವಾಪಸ್

**ನವದೆಹಲಿ, ಸೆ. 30-** ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗದೊಳಗಿನ




ಭಿನ್ನಾಭಿಪ್ರಾಯದ ಚರ್ಚೆ ತೀವ್ರಗೊಂಡಿರುವ ಬೆನ್ನಲ್ಲೇ, ಹೊಸ ಮತದಾರರ ನೋಂದಣಿಗೆ ಬಳಸುವ ಫಾರ್ಮ್-6ನಲ್ಲಿನ ಎಸ್‌ಐಆರ್ ಸಂಬಂಧಿತ ಹೆಚ್ಚುವರಿ ಘೋಷಣೆಯನ್ನು ಆಯೋಗ ಹಿಂಪಡೆದಿದೆ.

ಸೆ.29ರ ರಾತ್ರಿ ಪೋರ್ಟಲ್‌ನಲ್ಲಿ ಈ ಬದಲಾವಣೆ ಜಾರಿಗೆ ಬಂದಿದೆ. ಆದರೆ ಇದು ಎಲ್ಲ ರಾಜ್ಯಗಳಿಗೂ ಏಕಕಾಲದಲ್ಲಿ ಅನ್ವಯಿಸುವುದಿಲ್ಲ. ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿರುವ ರಾಜ್ಯಗಳಲ್ಲಿ ಮಾತ್ರ ಹೆಚ್ಚುವರಿ ಘೋಷಣೆಯನ್ನು ತೆಗೆದುಹಾಕಲಾಗಿದೆ. SIR ಇನ್ನೂ ಪುಟ 2

## ಭೂಸುಧಾರಣಾ ಕಾಯ್ದೆ ವಾಪಸ್ಸಿಗೆ ಆಗ್ರಹಿಸಿ ರಾಹುಲ್‌ಗೆ ಬಿಆರ್‌ಪಿ ಪತ್ರ

**ಬೆಂಗಳೂರು, ಸೆ. 30-** ಭೂಸುಧಾರಣಾ ಕಾಯ್ದೆ ತಿದ್ದುಪಡಿ ವಾಪಸ್‌ಗೆ ಆಗ್ರಹಿಸಿ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ್ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿಯವರಿಗೆ ಪತ್ರ ಬರೆದಿದ್ದಾರೆ.

ಕರ್ನಾಟಕ ಭೂಸುಧಾರಣಾ ಕಾಯ್ದೆಯ 79ಎ, 79ಬಿ ಮತ್ತು 79ಸಿ ಸೆಕ್ಷನ್‌ಗಳನ್ನು ಮರುಸ್ಥಾಪಿಸುವಂತೆ ಅವರು ಪತ್ರದಲ್ಲಿ ಒತ್ತಾಯಿಸಿದ್ದಾರೆ

ಚುನಾವಣಾ ಸಂದರ್ಭದಲ್ಲಿ ಕಾಂಗ್ರೆಸ್ ನೀಡಿದ್ದ ಭರವಸೆಯನ್ನು ಉಲ್ಲೇಖಿಸಿರುವ ಅವರು, ಪಕ್ಷದ ಪ್ರಣಾಳಿಕೆಯ ಪ್ರತಿಯನ್ನೂ ಪತ್ರದೊಂದಿಗೆ ಲಗತ್ತಿಸಿ ಈ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ಮನವಿ ಮಾಡಿದ್ದಾರೆ.

ಸ್ವಪಕ್ಷದ ಸರ್ಕಾರವೇ ಭೂಸುಧಾರಣಾ ಕಾಯ್ದೆಯ ತಿದ್ದುಪಡಿಯನ್ನು ಹಿಂಪಡೆಯಲು ವಿಫಲವಾಗಿರುವ ಬಗ್ಗೆ ಪಾಟೀಲ್ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿದ್ದರು. ಇದೀಗ ವಿಚಾರವನ್ನು ಪಕ್ಷದ ಕೇಂದ್ರ ನಾಯಕತ್ವದ ಗಮನಕ್ಕೆ ತಂದಿರುವುದು ರಾಜ್ಯ ಕಾಂಗ್ರೆಸ್‌ನೊಳಗೆ ಈ ವಿಷಯ ಮತ್ತೆ ಚರ್ಚೆಗೆ ಬರುವಂತೆ ಮಾಡಿದೆ.

ಕರ್ನಾಟಕ ಭೂಸುಧಾರಣಾ ಕಾಯ್ದೆ, 1961ರ 79ಎ ಮತ್ತು 79ಬಿ ಸೆಕ್ಷನ್‌ಗಳು ಕೃಷಿ ಭೂಮಿ ಹೊಂದುವಿಕೆ ಮತ್ತು ಖರೀದಿಗೆ ನಿರ್ಬಂಧಗಳನ್ನು ವಿಧಿಸುವ ಉದ್ದೇಶ ಹೊಂದಿದ್ದವು. 79ಸಿ ಸೆಕ್ಷನ್, ಸಂಬಂಧಿತ ಘೋಷಣೆ ಸಲ್ಲಿಕೆಯಲ್ಲಿ ಉಲ್ಲಂಘನೆಗಳಾದರೆ ಕ್ರಮ ಮತ್ತು ದಂಡಕ್ಕೆ ಸಂಬಂಧಿಸಿತ್ತು.

2020ರಲ್ಲಿ ಅಂದಿನ ಬಿಜೆಪಿ ಸರ್ಕಾರ ತಂದ ಭೂಸುಧಾರಣಾ ಕಾಯ್ದೆ ತಿದ್ದುಪಡಿಯ ಮೂಲಕ 79ಎ, 79ಬಿ ಮತ್ತು 79ಸಿ ಪುಟ 2




## 100 ಕೋಟಿ ಮೌಲ್ಯದ ಜಿಬಿಎ ಜಮೀನು ಒತ್ತುವರಿ ತೆರವು

**ಬೆಂಗಳೂರು, ಸೆ.30-** ಬನಶಂಕರಿ ದೇವಸ್ಥಾನ ಮುಂಭಾಗದಲ್ಲಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೇರಿದ ಸುಮಾರು 100 ಕೋಟಿ ಮೌಲ್ಯದ ಸರ್ಕಾರಿ ಜಮೀನಿನಲ್ಲಿದ್ದ ಅಕ್ರಮ ಒತ್ತುವರಿಯನ್ನು ಬೆಂಗಳೂರು ದಕ್ಷಿಣ ನಗರ ಪಾಲಿಕೆ ತೆರವುಗೊಳಿಸಿದೆ.

ಸಾರಕ್ಕಿ ಗ್ರಾಮದ ಸರ್ವೆ ನಂಬರ್ 73ರಲ್ಲಿ ಇರುವ 3 ಎಕರೆ 13 ಗುಂಟೆ ಜಮೀನನ್ನು ಪಾಲಿಕೆ ಕೇಂದ್ರ ಕಚೇರಿ ನಿರ್ಮಾಣಕ್ಕಾಗಿ ಸರ್ಕಾರ ಮಂಜೂರು ಮಾಡಿದ್ದು, ಈ ಹಿನ್ನೆಲೆಯಲ್ಲಿ ಜಾಗವನ್ನು ಒತ್ತುವರಿದಾರರಿಂದ ಮುಕ್ತಗೊಳಿಸಿ ಪಾಲಿಕೆ ತನ್ನ ವಶಕ್ಕೆ ಪಡೆದುಕೊಂಡಿದೆ.

**ಕೇಂದ್ರ ಕಚೇರಿ ನಿರ್ಮಾಣಕ್ಕೆ ಜಾಗ:**

ಈ ಜಮೀನನ್ನು ಈ ಹಿಂದೆ ಸರ್ಕಾರವು ಕರ್ನಾಟಕ ಕೃಷಿ ಮಾರುಕಟ್ಟೆ ಇಲಾಖೆಯ ಹಣ್ಣು ಮತ್ತು ತರಕಾರಿ ವಿಭಾಗಕ್ಕೆ (ಎಪಿಎಂಸಿ) ಮಂಜೂರು ಮಾಡಿತ್ತು. ಆದರೆ ಮಂಜೂರಾತಿಯ ಉದ್ದೇಶಕ್ಕೆ ಜಮೀನು ಬಳಕೆಯಾಗದ ಹಿನ್ನೆಲೆಯಲ್ಲಿ ಸರ್ಕಾರ ಮಂಜೂರಾತಿಯನ್ನು ರದ್ದುಪಡಿಸಿದೆ.




ಬಳಿಕ ಸೆ.3, 2026ರಂದು ಜಮೀನನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪಾಲಿಕೆಯ ಕೇಂದ್ರ ಕಚೇರಿ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿದೆ.

**ಜೆಸಿಬಿ ಮೂಲಕ ತೆರವು ಕಾರ್ಯಾಚರಣೆ**

ಜಮೀನು ಮಂಜೂರಾದ ಬಳಿಕ ಇಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರ ನಿರ್ದೇಶನದಂತೆ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಹಾಂತೇಶ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಸ್ಥಳ ಪರಿಶೀಲನೆ ನಡೆಸಿತು.

ಈ ವೇಳೆ ಪಾಲಿಕೆ ಜಾಗದಲ್ಲಿ ನಿರ್ಮಿಸಲಾಗಿದ್ದ ಅನಧಿಕೃತ ಶೆಡ್‌ಗಳು ಹಾಗೂ ಇತರ ಅಕ್ರಮ ಒತ್ತುವರಿಗಳನ್ನು ಜೆಸಿಬಿ ಯಂತ್ರಗಳ ಪುಟ 2

ಚಿನಿವಾರಪೇಟೆ - ಮುಂಬೈ, ಸೆಪ್ಟೆಂಬರ್ 30: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ I 1,54,420 I 22 ಕ್ಯಾರೆಟ್ - 10 ಗ್ರಾಂ 1,41,550 I ಬೆಳ್ಳಿ: 1 ಕೆ.ಜಿ. - 3,20,000

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)

## ಶಿಕಾರಿಪುರದಿಂದ ಭಾರತ್ ಜೋಡೋ–2 ಆರಂಭ

ಪ್ರದೇಶ ಕಾಂಗ್ರೆಸ್ ಈಗ ಭಾರತ್ ಜೋಡೋ–2 ಯಾತ್ರೆಯನ್ನು ಆರಂಭಿಸಿದೆ.

ರಾಹುಲ್‌ಗಾಂಧಿ ಅವರು ಭಾರತ್ ಜೋಡೋ ಯಾತ್ರೆ ಮಾಡಿದ್ದ 11 ಜಿಲ್ಲೆಗಳನ್ನು ಹೊರತುಪಡಿಸಿ 29 ಜಿಲ್ಲೆಗಳಲ್ಲಿ ಈ ಯಾತ್ರೆ ನಡೆಯುತ್ತಿದ್ದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿರುವ 84 ಕ್ಷೇತ್ರಗಳಲ್ಲಿ ಈ ಯಾತ್ರೆ ನಡೆಯಲಿದೆ.

ಶಿಕಾರಿಪುರದಲ್ಲಿಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ಭಾರತ್ ಜೋಡೋ–2 ಯಾತ್ರೆ ಆರಂಭವಾಗಿದ್ದು, ಸಚಿವರಾದ ಯತೀಂದ್ರ ಸಿದ್ದರಾಮಯ್ಯ, ಬಸಂತಪ್ಪ, ಮಧು ಬಂಗಾರಪ್ಪ, ಸೇರಿದಂತೆ ಹಲವು ನಾಯಕರು ಹಾಗೂ ಶಿವಮೊಗ್ಗ ಜಿಲ್ಲೆಯ ಎಲ್ಲ ಕಾಂಗ್ರೆಸ್ ಶಾಸಕರು, ಮುಖಂಡರು ಈ ಯಾತ್ರೆಯಲ್ಲಿ ಭಾಗಿಯಾಗಿದ್ದಾರೆ.

ಭಾರತ್ ಜೋಡೋ–2 ಯಾತ್ರೆ 84 ವಿಧಾನಸಭಾ ಕ್ಷೇತ್ರಗಳಲ್ಲಿ ನಡೆಯಲಿದ್ದು, 10 ಕಿ.ಮಿ. ಪಾದಯಾತ್ರೆ ಹಾಗೂ ಸಮಾವೇಶವನ್ನು ಕಾಂಗ್ರೆಸ್ ನಡೆಸಲಿದೆ. ಒಟ್ಟು 84 ಕ್ಷೇತ್ರಗಳಲ್ಲಿ 84 ದಿನ ಈ ಪಾದಯಾತ್ರೆ ನಡೆಯಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ತಿಳಿಸಿದ್ದಾರೆ.

## ಜನ ಜಾಗೃತಿಗೆ ಯಾತ್ರೆ: ಬಿ.ಕೆ. ಹರಿಪ್ರಸಾದ್

ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಜನರಿಗೆ ಮಾಹಿತಿ ನೀಡುವುದರ ಜತೆಗೆ ಬರ ಪರಿಸ್ಥಿತಿ ಹಾಗೂ ರೈತರ ಸಮಸ್ಯೆಗಳ ಬಗ್ಗೆಯೂ ಯಾತ್ರೆಯಲ್ಲಿ ಗಮನ ಸೆಳೆಯಲಾಗುವುದು ಎಂದರು.

ಕೇಂದ್ರ ಸರ್ಕಾರದಿಂದ ರಾಜ್ಯ–ಕ್ಕೆ ಬರಬೇಕಿರುವ ಅನುದಾನ ಬಿಡುಗಡೆಗೆ ಒತ್ತಾಯಿಸಿ ಮನವಿ ಸಲ್ಲಿಸಲು ಸಿದ್ಧವಿದ್ದರೂ ಬಿಜೆಪಿ ನಾಯಕರು ಸಹಕಾರ ನೀಡುತ್ತಿಲ್ಲ. ರೈತರ ಸಾಲಮನ್ನಾ ಹಾಗೂ ಬರ ಪರಿಹಾರ ವಿಚಾರದಲ್ಲಿಯೂ ಕೇಂದ್ರ ಸರ್ಕಾರ ರಾಜ್ಯದ ಬೇಡಿಕೆಗಳಿಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧವೂ ಹರಿಪ್ರಸಾದ್ ವಾಗ್ದಾಳಿ ನಡೆಸಿದರು. ಭ್ರಷ್ಟಾಚಾರದ ಕುರಿತು ವಿಜಯೇಂದ್ರಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಆರೋಪಿಸಿದರು. ಕಾಂಗ್ರೆಸ್ ಕಾರ್ಯಕರ್ತರ ಧ್ವಜ ಹಾಗೂ ಫ್ಲೆಕ್ಸ್‌ಗಳನ್ನು ಕೆಲವರು ಕಿತ್ತು ಹಾಕಿರುವುದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಗೆ ಎಲ್ಲರಿಗೂ ಹಕ್ಕಿದೆ ಎಂದು ಹೇಳಿದರು.

**ಗಮನ ಸೆಳೆದ ಟಗರುಗಳ ಎತ್ತಿನಗಾಡಿ:**

ಪಾದಯಾತ್ರೆಯಲ್ಲಿ ಎರಡು ಟಗರುಗಳಿಂದ ಸಣ್ಣ ಎತ್ತಿನಗಾಡಿ ಎಳೆಯುವ ವ್ಯವಸ್ಥೆ ಗಮನ ಸೆಳೆಯಿತು. ಟಗರುಗಳೊಂದಿಗೆ ಕಾಂಗ್ರೆಸ್ ಕಾರ್ಯಕರ್ತರು ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಪಾದಯಾತ್ರೆಯಲ್ಲಿ ಬಿ.ಕೆ.ಹರಿಪ್ರಸಾದ್, ಕೆ.ಎಸ್. ಬಸವಂತಪ್ಪ, ಡಾ. ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಪಾದಯಾತ್ರೆಯಲ್ಲಿ ಗೈರಾಗಿದ್ದು, ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಭೂಸುಧಾರಣಾ ಕಾಯ್ದೆ ವಾಪಸ್ಸಿಗೆ

ಸೆಕ್ಷನ್‌ಗಳನ್ನು ಕಾಯ್ದೆಯಿಂದ ತೆಗೆದುಹಾಕಲಾಯಿತು. ಈ ಬದಲಾವಣೆಯಿಂದ ಕೃಷಿಯೇತರ ಆದಾಯ ಹೊಂದಿರುವವರು ಹಾಗೂ ವಿವಿಧ ಸಂಸ್ಥೆಗಳು ಕೃಷಿ ಭೂಮಿ ಖರೀದಿಸುವುದಕ್ಕೆ ಇದ್ದ ಹಿಂದಿನ ನಿರ್ಬಂಧಗಳು ಸಡಿಲವಾದವು.

ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನ ಭೂಸುಧಾರಣಾ ಕಾಯ್ದೆಯಲ್ಲಿನ ಬದಲಾವಣೆಗಳನ್ನು ಮರುಪರಿಶೀಲಿಸುವ ಬಗ್ಗೆ ಭರವಸೆ ನೀಡಲಾಗಿತ್ತು ಎಂದು ಪತ್ರದಲ್ಲಿ ಹೇಳಿರುವ ಬಿ ಆರ್ ಪಾಟೀಲ್ ಅವರು ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಿಗೂ ಹೆಚ್ಚು ಕಾಲ ಕಳೆದರೂ 79ಎ, 79ಬಿ ಮತ್ತು 79ಸಿ ಸೆಕ್ಷನ್‌ಗಳನ್ನು ಮರುಸ್ಥಾಪಿಸುವ ಕ್ರಮ ಕೈಗೊಂಡಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಚುನಾವಣೆಯಲ್ಲಿ ನೀಡಿದ ಭರವಸೆಯಂತೆ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವನೆ ಆರಂಭಿಕ ಬಜೆಟ್ ಕರಡಿನಲ್ಲಿ ಇತ್ತು. ಆದರೆ ಅಂತಿಮ ಬಜೆಟ್ ಮಂಡಿಸುವ ವೇಳೆಗೆ ಅದನ್ನು ಕೈಬಿಡಲಾಗಿದೆ ಪಾಟೀಲ್ ಅಸಮಾಧಾನ ಹೊರಹಾಕಿದ್ದಾರೆ.

2021ರಿಂದ ಇದುವರೆಗೆ ರಾಜ್ಯದಲ್ಲಿ 19.92 ಲಕ್ಷ ಎಕರೆ ಕೃಷಿ ಭೂಮಿ ಮಾರಾಟವಾಗಿದೆ ಎಂದು ಪಾಟೀಲ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿರುವುದಾಗಿ ವರದಿಯಾಗಿದೆ. ಇದರಲ್ಲಿ ಸುಮಾರು 60ರಷ್ಟು ಭಾಗ ಉತ್ತರ ಕರ್ನಾಟಕದಲ್ಲೇ ಮಾರಾಟವಾಗಿದೆ ವಿಜಯಪುರ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕೃಷಿ ಭೂಮಿ ಮಾರಾಟ ಪ್ರಮಾಣ ಹೆಚ್ಚಾಗಿದೆ ಎಂದು ಅವರು ಹೇಳಿದ್ದಾರೆ.

## ಫಾರಂ–6 ಬದಲಾವಣೆ ವಾಪಸ್

SIR ಇನ್ನೂ ನಡೆಯುತ್ತಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅದು ಮುಂದುವರಿಯಲಿದೆ.

**ಏನಿತ್ತು ಹೆಚ್ಚುವರಿ ಘೋಷಣೆಯಲ್ಲಿ**

ಹೊಸ ಮತದಾರರು ಫಾರ್ಮ್–6 ಸಲ್ಲಿಸುವಾಗ ತಮ್ಮ ಹೆಸರು ಅಥವಾ ತಮ್ಮ ತಂದೆ–ತಾಯಿ, ಅಜ್ಜ–ಅಜ್ಜಿಯರ ಹೆಸರು ಹಿಂದಿನ ಮತಪಟ್ಟಿಯಲ್ಲಿ ಇತ್ತೇ ಎಂಬುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಬೇಕಾಗಿತ್ತು. ಈ ಹೆಚ್ಚುವರಿ ಅಂಶವನ್ನು ಎಸ್‌ಐಆರ್ ಪ್ರಕ್ರಿಯೆಯ ಭಾಗವಾಗಿ ಆನ್‌ಲೈನ್ ಫಾರ್ಮ್‌ನಲ್ಲಿ ಸೇರಿಸಲಾಗಿತ್ತು. ಇದರ ಉದ್ದೇಶ ಅರ್ಜಿದಾರರ ಹಿಂದಿನ ಮತದಾರರ ಪಟ್ಟಿಯ ಸಂಪರ್ಕವನ್ನು ಪರಿಶೀಲಿಸುವುದಾಗಿತ್ತು.

ಆದರೆ ಫಾರ್ಮ್–6 ಕಾನೂನಿನಡಿ ನಿಗದಿಪಡಿಸಿರುವ ನಮೂನೆಯಾಗಿರುವುದರಿಂದ, ಅದಕ್ಕೆ ಹೆಚ್ಚುವರಿ ಅಂಶ ಸೇರಿಸಲು ಕಾನೂನುಬದ್ಧ ಪ್ರಕ್ರಿಯೆ ಅನುಸರಿಸಬೇಕೇ ಎಂಬ ಪ್ರಶ್ನೆ ಉದ್ಭವಿಸಿತು.

**ಇಬ್ಬರು ಆಯುಕ್ತರ ಆಕ್ಷೇಪ**

'ದಿ ಇಂಡಿಯನ್ ಎಕ್ಸ್‌ಪ್ರೆಸ್' ತನಿಖಾ ವರದಿ ಪ್ರಕಾರ, ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ** ಅವರು ಫಾರ್ಮ್–6 ಬದಲಾವಣೆ ಸೇರಿದಂತೆ É SIRಗೆ ಸಂಬಂಧಿಸಿದ ಹಲವು ಕ್ರಮಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

ಕಳೆದ ಸುಮಾರು 10 ತಿಂಗಳಲ್ಲಿ ಇಬ್ಬರೂ ಆಯುಕ್ತರು ವಿವಿಧ ನಿರ್ಧಾರಗಳು ಮತ್ತು ಪ್ರಕ್ರಿಯೆಗಳ ಕುರಿತು ಕನಿಷ್ಠ 14 ಬಾರಿ ಆಕ್ಷೇಪ ದಾಖಲಿಸಿದ್ದರು ಎಂದು ವರದಿ ಹೇಳಿದೆ. ಇದರಲ್ಲಿ ಫಾರ್ಮ್–6 ಬದಲಾವಣೆ, ಮತದಾರರ ಪಟ್ಟಿಯ ನಿರ್ವಹಣೆ, ಸಾಫ್ಟ್‌ವೇರ್ ವ್ಯವಸ್ಥೆ ಹಾಗೂ ಚುನಾವಣಾ ಮಾಹಿತಿಯ ಪ್ರವೇಶಕ್ಕೆ ಸಂಬಂಧಿಸಿದ ವಿಷಯಗಳೂ ಸೇರಿವೆ.

ಫಾರ್ಮ್–6 1960 ಅಡಿಯಲ್ಲಿ ನಿಗದಿಪಡಿಸಿರುವುದರಿಂದ, ನಿಯಮಗಳಿಗೆ ತಿದ್ದುಪಡಿ ಮಾಡದೆ ಅದರಲ್ಲಿ ಹೆಚ್ಚುವರಿ ಅಂಶ ಸೇರಿಸುವುದು ಸರಿಯಲ್ಲ ಎಂಬ ಆಕ್ಷೇಪ ಇಬ್ಬರು ಆಯುಕ್ತರಿಂದ ವ್ಯಕ್ತವಾಗಿತ್ತು ಎಂದು ವರದಿಯಾಗಿದೆ.

**ಸೆ.26ರ ಸಭೆ ಬಳಿಕ ನಿರ್ಧಾರ**

ಈ ಬೆಳವಣಿಗೆಗಳ ನಡುವೆ ಸೆ.26ರಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹಾಗೂ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಸಭೆ ನಡೆಸಿದರು.

ಸಭೆಯ ಬಳಿಕ ಆಯೋಗವು ಎಸ್‌ಐಆರ್ ಸಂಬಂಧಿತ ಹೆಚ್ಚುವರಿ ಘೋಷಣೆಯು ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿರುವ ಅವಧಿಗೆ ಮಾತ್ರ ಅನ್ವಯಿಸಬೇಕು ಎಂದು ನಿರ್ಧರಿಸಿತು. ಎಸ್‌ಐಆರ್ ಪೂರ್ಣಗೊಂಡ ಬಳಿಕ ಸಾಮಾನ್ಯ ಮತದಾರರ ನೋಂದಣಿ ಪ್ರಕ್ರಿಯೆಯಲ್ಲಿ ಅದನ್ನು ಮುಂದುವರಿಸಬಾರದು ಎಂಬ ನಿರ್ಧಾರ ಕೈಗೊಳ್ಳಲಾಯಿತು. ಇದರ ಪರಿಣಾಮವಾಗಿ ಸೆ.29ರ ರಾತ್ರಿ ಖಖಖ ಪೂರ್ಣಗೊಂಡಿರುವ ರಾಜ್ಯಗಳ ECI-NET ಪೋರ್ಟಲ್‌ನಿಂದ ಹೆಚ್ಚುವರಿ ಘೋಷಣೆ ತೆಗೆದುಹಾಕಲಾಯಿತು.

**ಈಗ ಹೊಸ ಮತದಾರರು ಏನು ಮಾಡಬೇಕು**

SIR ಪೂರ್ಣಗೊಂಡ ರಾಜ್ಯಗಳಲ್ಲಿ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ ಮಾಡಿಕೊಳ್ಳುವ ಅರ್ಜಿದಾರರು ಇನ್ನು ಮುಂದೆ, 1960 ಅಡಿಯಲ್ಲಿ ನಿಗದಿಪಡಿಸಿರುವ ಸಾಮಾನ್ಯ ಫಾರ್ಮ್–6 ಸಲ್ಲಿಸಬೇಕು. ಹಿಂದಿನ ಮತಪಟ್ಟಿಯಲ್ಲಿ ತಮ್ಮ ಅಥವಾ ಕುಟುಂಬದ ಹಿರಿಯರ ಹೆಸರು ಇದ್ದುದಕ್ಕೆ ಸಂಬಂಧಿಸಿದ ಹೆಚ್ಚುವರಿ ವಿವರವನ್ನು ನೀಡಬೇಕಾಗಿಲ್ಲ.

ಆದರೆ ಪ್ರಕ್ರಿಯೆ ಇನ್ನೂ ನಡೆಯುತಿರುವ ರಾಜ್ಯಗಳಲ್ಲಿ SIRಗೆ ಸಂಬಂಧಿಸಿದ ಹೆಚ್ಚುವರಿ ಘೋಷಣೆ ಮುಂದುವರಿಯುತ್ತದೆ. 'ಅನ್ ಮ್ಯಾಪ್ಡ್' ಮತದಾರರಿಗೆ ಮನೆ ಬಾಗಿಲಲ್ಲೇ ಪರಿಶೀಲನೆ ಕೆಲವು ಮತದಾರರ ದಾಖಲೆಗಳು ಹಿಂದಿನ ಮತಪಟ್ಟಿಯೊಂದಿಗೆ ಹೊಂದಿಕೆಯಾಗದಿದ್ದರೆ ಅವರನ್ನು 'ಅನ್‌ಮ್ಯಾಪ್ಡ್' ಅಥವಾ 'ಲಾಜಿಕಲ್ ಡಿಸ್ಕ್ರೆಪನ್ಸಿ' ಪ್ರಕರಣವೆಂದು ಗುರುತಿಸಲಾಗುತ್ತದೆ. ಇಂತಹ ಪ್ರಕರಣಗಳಲ್ಲಿ ಮತದಾರರು ಕಚೇರಿಗೆ ಪದೇಪದೇ ಅಲೆದಾಡಬೇಕಾಗದಂತೆ ಬೂತ್ ಮಟ್ಟದ ಅಧಿಕಾರಿ ಮನೆಗೆ ತೆರಳಿ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವ ವ್ಯವಸ್ಥೆ ಮಾಡಲಾಗಿದೆ.

## ಜಿಬಿಎ ಜಮೀನು ಒತ್ತುವರಿ ತೆರವು

ಮೂಲಕ ತೆರವುಗೊಳಿಸಲಾಯಿತು.

ಇದೇ ಸರ್ವೆ ನಂಬರ್‌ನ ಮತ್ತೊಂದು ಭಾಗದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸಿಕೊಂಡಿರುವವರಿಗೆ ಕೂಡ ಜಾಗವನ್ನು ತಕ್ಷಣ ಖಾಲಿ ಮಾಡುವಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

**ಒತ್ತುವರಿ ಮಾಡಿದರೆ ಕಾನೂನು ಕ್ರಮ:**

ಕಾರ್ಯಾಚರಣೆ ಬಳಿಕ ಸುಮಾರು 100 ಕೋಟಿ ಮೌಲ್ಯದ 3 ಎಕರೆ 13 ಗುಂಟೆ ಜಮೀನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಶಕ್ಕೆ ಬಂದಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಜಿಬಿಎಗೆ ಸೇರಿದ ಈ ಜಮೀನಿನಲ್ಲಿ ಮತ್ತೆ ಒತ್ತುವರಿ ಅಥವಾ ಅಕ್ರಮ ನಿರ್ಮಾಣಕ್ಕೆ ಮುಂದಾದರೆ ಅಂತಹವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

## ನಾಳೆ ಬಿಜೆಪಿಯಿಂದ ಸೇವಾ ಸಂಕಲ್ಪ

ರಾಜ್ಯ ಸರ್ಕಾರದ ವೈಫಲ್ಯಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಲು ಈ ವಿಜಯ ಸಂಕಲ್ಪ ಯಾತ್ರೆ ನಡೆಸಲಾಗುತ್ತಿದೆ.

ನಾಳೆ ಕೋಲಾರ ಜಿಲ್ಲೆಯ ಕುರುಡುಮಲೆಯ ಗಣೇಶ ದೇವಾಲಯದಿಂದ ಈ ಯಾತ್ರೆಗೆ ಬಿಜೆಪಿ ಚಾಲನೆ ನೀಡಲಿದೆ.

ರಾಜ್ಯದಲ್ಲಿನ ಭ್ರಷ್ಟ, ದುಷ್ಟ,ರೈತ, ಬಡವರ, ಮಹಿಳಾ ವಿರೋಧ ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿ, ಬೂತ್ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸಲು ವಿಜಯ ಸಂಕಲ್ಪ ಯಾತ್ರೆಯನ್ನು ಬಿಜೆಪಿ ಹಮ್ಮಿಕೊಂಡಿದೆ.

ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಸೇವಾ ಸಂಕಲ್ಪ ಅಭಿಯಾನದಡಿ ರಕ್ತದಾನ ಶಿಬಿರ, ಆರೋಗ್ಯ ತಪಾಸಣಾ ಶಿಬಿರದಂತಹ ಕಾರ್ಯಕ್ರಮಗಳ ಜತೆಗೆ ರೈತರು, ಮಹಿಳೆಯರು, ಕಾರ್ಮಿಕರ ಜತೆ ಸಂವಾದ ಕಾರ್ಯಕ್ರಮ ಹಮ್ಮಿಕೊ1ಳ್ಳಲಾಗಿದೆ. ಹಾಗೆಯೇ ಪ್ರತಿ ಬೂತ್ ಮಟ್ಟದಲ್ಲಿ ಪ್ರಮುಖ ಮುಖಂಡರುಗಳ ಸಭೆ, ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಬಿಜೆಪಿ ನಡೆಸುತ್ತಿದೆ.

ಬಿಜೆಪಿಯ ಈ ಸೇವಾ ಸಂಕಲ್ಪ ವಿಜ ಯಾತ್ರೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ್, ಚಲವಾದಿ ನಾರಾಯಣಸ್ವಾಮಿ, ಕೇಂದ್ರ ಸಚಿವರುಗಳಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಸೇರಿದಂತೆ ಪಕ್ಷದ ಎಲ್ಲ ಮುಖಂಡರು, ಶಾಸಕರು, ಸಂಸದರುಗಳು ಪಾಲ್ಗೊಳ್ಳುವರು.

## ಹಾಲು ದರ ಏರಿಕೆ

ಸಾಧ್ಯತೆ ಇದೆ. ಮತ್ತೊಂದೆಡೆ, ಗ್ರಾಹಕರಿಂದ ಹೆಚ್ಚುವರಿ ಮೊತ್ತವನ್ನು ವಸೂಲಿ ಮಾಡಿದರೆ ಹಾಲಿನ ಬೆಲೆ ಏರಿಕೆಯಾಗಿ ಜನರ ಮೇಲೂ ಹೊರೆ ಬೀಳಲಿದೆ. ಹೀಗಾಗಿ ಉತ್ಪಾದಕರು, ಹಾಲು ಒಕ್ಕೂಟಗಳು, ಸರ್ಕಾರ ಮತ್ತು ಗ್ರಾಹಕರು ಎಲ್ಲರ ಹಿತವನ್ನು ಗಮನದಲ್ಲಿಟ್ಟುಕೊಂಡು ದರ ಪರಿಷ್ಕರಣೆ ಮಾಡುವ ಸಾಧ್ಯತೆ ಇದೆ.

ನಾಳಿನ ಸಚಿವ ಸಂಪುಟ ಸಭೆಯ ಬಳಿಕ ನಡೆಯಲಿರುವ ಸುದ್ದಿಗೋಷ್ಠಿಯಲ್ಲಿ ಹಾಲಿನ ದರ ಅಥವಾ ಪ್ರೋತ್ಸಾಹ ಧನ ಹೆಚ್ಚಳದ ಕುರಿತು ಸರ್ಕಾರ ಅಧಿಕೃತವಾಗಿ ಪ್ರಕಟಿಸುವ ನಿರೀಕ್ಷೆ ಇದೆ.

## ಕಾರ್ಮಿಕರ ಹೆಸರಲ್ಲಿ ವಂಚನೆ: ತನಿಖೆಗೆ ಖಂಡ್ರೆ ಆದೇಶ

ಬೆಂಗಳೂರು, ಸೆ. 30– ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ಕಾರ್ಮಿಕರ ನಕಲಿ ಜಿಪಿಎಸ್ ಫೋಟೋ ತೆಗೆದು ವಂಚಿಸಲಾಗುತ್ತಿದೆ ಎಂಬ ವರದಿ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ತನಿಖೆಗೆ ಆದೇಶ ನೀಡಿದ್ದಾರೆ.

ಇಲಾಖೆಯ ಕಾರ್ಯದರ್ಶಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಅವರು, ಕೊಪ್ಪಳ ಜಿಲ್ಲೆಯಲ್ಲಿ ಮೇಟಿಗಳು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಕೆಲಸಗಾರರು ಹೋಗದಿದ್ದರೂ ವಿಡಿಯೋ ಚಿತ್ರೀಕರಣ ಮಾಡಿಸಿ ಆ ವಿಡಿಯೋ ಪ್ಲೇ ಆಗುತ್ತಿರುವಾಗ ಮತ್ತೊಂದು ಮೊಬೈಲ್ ನಲ್ಲಿ ಜಿಪಿಎಸ್ ಫೋಟೋ ತೆಗೆಸಿ ವಂಚಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿದ್ದು, ಈ ಬಗ್ಗೆ ಜಂಟಿ ನಿರ್ದೇಶಕರ ದರ್ಜೆಯ ಅಧಿಕಾರಿಯಿಂದ ತನಿಖೆ ನಡೆಸಿ 4 ದಿನಗಳ ಒಳಗಾಗಿ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ಈ ರೀತಿ ನಕಲಿ ಜಿಪಿಎಸ್ ಫೋಟೋ ತೆಗೆದು ಪ್ರತಿನಿತ್ಯ 20–30 ಸಾವಿರ ರೂ. ವಂಚನೆ ಮಾಡುತ್ತಿದ್ದಾರೆ, ಕೆಲಸ ಮಾಡದೆಯೇ ಹಾಜರಾತಿ ಹಾಕಿಸುತ್ತಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಈಶ್ವರ ಖಂಡ್ರೆ, ವರದಿಯಲ್ಲಿ ಅಂಶ ಸತ್ಯವಾಗಿದ್ದಲ್ಲಿ, ತಪ್ಪಿತಸ್ಥರ ವಿರುದ್ಧ ಕೈಗೊಳ್ಳಬೇಕಾದ ಶಿಫಾರಸಿನೊಂದಿಗೆ ವಾಸ್ತವಾಂಶದ ವರದಿಯನ್ನು ಸಲ್ಲಿಸುವಂತೆ ಮತ್ತು ಈ ರೀತಿ ತಂತ್ರಜ್ಞಾನವನ್ನೇ ವಂಚಿಸಿ ಹಾಜರಾತಿ ಹಾಕದಂತೆ ತಡೆಯಲು ಏನು ಕ್ರಮ ಕೈಗೊಳ್ಳಬಹುದು ಎಂಬ ಬಗ್ಗೆ ತಜ್ಞರೊಂದಿಗೆ ಸಮಾಲೋಚಿಸಿ ಉಪಕ್ರಮ ಕೈಗೊಳ್ಳುವಂತೆಯೂ ಸೂಚಿಸಿದ್ದಾರೆ.

ಯಂತ್ರಗಳ ಮೂಲಕ ಕಾಮಗಾರಿ ನಡೆಸಿ, ಕೂಲಿ ಕಾರ್ಮಿಕರ ಅಕ್ರಮ ಹಾಜರಾತಿ ಹಾಕಿಸುವುದನ್ನು ತಪ್ಪಿಸಲು ವಿಬಿಜಿ ರಾಮ್ ಜಿಯಡಿ ಕೂಲಿಗೆ ಬರುವವರು ಕಾಮಗಾರಿ ನಡೆಯುವ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಜಿಪಿಎಸ್ ಫೋಟೋ ತೆಗೆದು ಎನ್.ಎಂ.ಎಂ.ಎಸ್. ಅಪ್ ನಲ್ಲಿ ಅಪ್ ಲೋಡ್ ಮಾಡುವುದನ್ನು ಕಡ್ಡಾಯ ಮಾಡಿಲಾಗಿದೆ. ಆದರೆ ಕೆಲವರು ಈ ತಂತ್ರಜ್ಞಾನಕ್ಕೆ ಸವಾಲು ಹಾಕಿದ್ದು, ಸರ್ಕಾರ ಈ ಬಗ್ಗೆ ಕ್ರಮಕ್ಕೆ ಮುಂದಾಗಿದೆ.

## ಬೆಂಬಲ ಬೆಲೆಯಡಿ ಹೆಸರು ಕಾಳು ಖರೀದಿಗೆ ಕೇಂದ್ರ ಅಸ್ತು

ನವದೆಹಲಿ,ಸೆ.30: ರಾಜ್ಯದ ಕೃಷಿಕರಿಗೆ ಕೇಂದ್ರ ಸರ್ಕಾರದಿಂದ ಭರ್ಜರಿ ಶುಭಸುದ್ದಿ ಸಿಕ್ಕಿದೆ.

2026–27ನೇ ಸಾಲಿನ ಮುಂಗಾರು (ಖರೀಫ್) ಋತುವಿನಲ್ಲಿ ಕರ್ನಾಟಕದ ಪ್ರಮುಖ ಬೆಳೆಗಳಾದ ಹೆಸರುಕಾಳು, ಸೋಯಾಬೀನ್ ಹಾಗೂ ಸೂರ್ಯಕಾಂತಿ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನೇರವಾಗಿ ರೈತರಿಂದ ಖರೀದಿಸಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಈ ಮಹತ್ವದ ಪ್ರಸ್ತಾವನೆಗೆ ತಕ್ಷಣವೇ ಒಪ್ಪಿಗೆ ಸೂಚಿಸಿದ್ದು, ರಾಜ್ಯದ ಲಕ್ಷಾಂತರ ರೈತರಿಗೆ ಇದರಿಂದ ಭಾರಿ ಅನುಕೂಲವಾಗಲಿದೆ.ಬೆಲೆ ಬೆಂಬಲ ಯೋಜನೆ ಅಡಿಯಲ್ಲಿ ರಾಜ್ಯದಿಂದ ನಿಗದಿತ ಪ್ರಮಾಣದ ಧಾನ್ಯಗಳನ್ನು ಸರ್ಕಾರವೇ ನೇರವಾಗಿ ಖರೀದಿಸಲಿದೆ.

## ಬುಲೆಟ್ ಪ್ರೂಫ್ ಪೂನಾವಾಲ ಮೈಸೂರು 2000 ಗಿನೀಸ್ ಗೆಲ್ಲುವ ನಿರೀಕ್ಷೆ

ಮೈಸೂರು, ಸೆ. 30– ಎಸ್. ಎಸ್ . ಅತ್ತಲೋಹಿ ರವರಿಂದ ತರಬೇತಿ ಪಡೆದು ಚಾಂಪಿಯನ್ ಜಾಕಿ ಪಟೇಲ್ ಟ್ರೇವರ್ ಸವಾರಿ ಮಾಡಲಿರುವ 'ಬುಲೆಟ್ ಪ್ರೂಫ್' ಕುದುರೆಯು ನಾಳೆ ಗುರುವಾರ ನಡೆಯಲಿರುವ ಜೆಡ್ ಎಸ್ ಪೂನಾವಾಲ ಮೈಸೂರು 2000 ಗಿನೀಸ್ 2026 (ಗ್ರೇಡ್ 3) ಟ್ರೋಫಿಯನ್ನು ಗೆಲ್ಲುವ ಸಾಧ್ಯತೆ ಇದೆ.

ಮೆಸರ್ಸ್ ಮಾರ್ತಾಂಡ ಸಿಂಗ್ ಮಹೇಂದ್ರ ತಂಡದವರ ಜಂಟಿ ಮಾಲೀಕತ್ವದ ಈ ಕುದುರೆಯು ತನ್ನ ಕಳೆದ ಮೂರು ಓಟಗಳಲ್ಲಿ ಮೈಸೂರು, ಹೈದರಾಬಾದ್ ಮತ್ತು ಕಲ್ಕತ್ತಾ ಕೇಂದ್ರಗಳಲ್ಲಿ ಸತತವಾಗಿ ಗೆಲುವು ಸಾಧಿಸಿ ಪುನಃ ಮೈಸೂರಿಗೆ ಬಂದು ನಾಳೆ ನಡೆಯುವ ಪ್ರತಿಷ್ಠಿತ 2000 ಗಿನೀಸ್ ನಲ್ಲಿ 23.26 ಲಕ್ಷ ನಗದು ಮತ್ತು 75 ಸಾವಿರ ಬೆಲೆ ಬಾಳುವ ಟ್ರೋಫಿಯನ್ನು ತನ್ನ ಮಾಲೀಕರಿಗೆ ದೊರಕಿಸಿಕೊಡುವ ಭರವಸೆ ಇದೆ.

ನಾಳೆ ಏಳು ಓಟಗಳನ್ನು ಏರ್ಪಡಿಸಿದ್ದು ಮೊದಲನೇ ಓಟವು ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿದೆ.

**1. ಒರಿಜಿನಲ್ ವೆಲ್ ರೇಸಿಂಗ್ ಟ್ರೋಫಿ**
**(ಡಿ –2) 1400 ಮೀ**
**ಒಸಾಕ 1 ಯುವರ್ ಶ್ರೀ ಶಕ್ತಿ 2 ರೂಟಿಂಗ್ ರನ್ 3**
**(8–10–2)**

**2. ನೈನಿತಾಲ್ ಪ್ಲೇಟ್**
**(ಡಿ –2) 1200 ಮೀ**
**ಜೈಲರ್ 1 ಸ್ಟಾರ್ ಸಿಂಫೋನಿ 2 ಮೈ ಸಾಲಿಟೇರ್ 3 (7–8–5)**

**3. ಒರಿಜಿನಲ್ ವೆಲ್ ರೇಸಿಂಗ್ ಟ್ರೋಫಿ**
**(ಡಿ –1) 1400 ಮೀ**
**ಮೂನ್ ಒರಾಕಲ್ 1 ಸೆನ್ಸ್ಯುಅಸ್ 2 ಎಡಿಷನ್ 3**
**(7–8–1)**

**4. ಹೋಟೆಲ್ ಅರ್ ಆರ್ ಆರ್ ಟ್ರೋಫಿ 1400 ಮೀ**
**ಫಾಲ್ಕನ್ ಫ್ಯೂರಿ 1 ಕ್ಲೌಡಿ ಹಿಲ್ಸ್ 2 ಜೆಫಿರೈನ್ (2–5–11)**

**5. ಜೇಡ್ ಎಸ್ ಪೂನಾವಾಲ ಮೈಸೂರು 2000 ಗಿನೀಸ್ 2026 (ಗ್ರೇಡ್ 3) 1600 ಮೀ**
**ಬುಲೆಟ್ ಪ್ರೂಫ್ 1 ಸ್ಟಡ್ ಪೋಕರ್ 2 ಆರ್ಕ್ ಆಫ್ ಲೈಫ್ 3 (3–5–1)**

**6. ನೈನಿತಾಲ್ ಪ್ಲೇಟ್ (ಡಿ –1) 1200 ಮೀ**
**ಆಗೇರ 1 ಇಂಟರ್ ಸೆಪ್ಟರ್ 2 ಮಾರ್ಟಿನೋ 3 (1–3–10)**

**7. ಕೂರ್ಗ್ ಪ್ಲೇಟ್**
**1600 ಮೀ**
**ಅಲ್ಲೂರಿಂಗ್ ಬ್ಯೂಟಿ 1 ಮೈಟಿ ಹೀರೋ 2 ಇಕೋ ಸಿಸ್ಟಮ್ (11–7–12)**

**ದಿನದ ಅತ್ಯುತ್ತಮ ಬೆಟ್: ಮೂನ್ ಒರಾಕಲ್**

**ಜಾಕ್ಪಾಟ್ ರೇಸ್‌ಗಳು: 3 4 5 6 ಮತ್ತು 7**

**ಮಿನಿ ಜಾಕ್ಪಾಟ್ : 4 5 6 ಮತ್ತು 7**

**1ನೇ ಟ್ರಿಬಲ್: 2 3 ಮತ್ತು 4**

**2ನೇ ಟ್ರಿಬಲ್: 5 6 ಮತ್ತು 7**

## 13 ಜಿಲ್ಲೆಗಳಲ್ಲಿ ಭಾರೀ ಮಳೆ ನಿರೀಕ್ಷೆ




ಬೆಂಗಳೂರು,ಸೆ.30–ರಾಜ್ಯದಲ್ಲಿ ನೈಋತ್ಯ ಮುಂಗಾರು ಮಳೆ ಹಿಮ್ಮೆಟ್ಟುವ ಪ್ರಕ್ರಿಯೆ ಆರಂಭವಾಗಿದ್ದರೂ, ತೇವಾಂಶಭರಿತ ಗಾಳಿಯ ಪ್ರಭಾವದಿಂದಾಗಿ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆ ಮತ್ತು ಬಿರುಗಾಳಿಯ ಆರ್ಭಟ ಮುಂದುವರಿದಿದೆ. ಇಂದು ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ 13 ಜಿಲ್ಲೆಗಳಲ್ಲಿ ಗಾಳಿ ಸಹಿತ ಭಾರಿ ಮಳೆಯಾಗುವ ಮುನ್ಸೂಚನೆ ಇದ್ದು, ಹವಾಮಾನ ಇಲಾಖೆಯು ಹಳದಿ ಸೂಚನೆ (ಯೆಲ್ಲೋ ಅಲರ್ಟ್) ಘೋಷಿಸಿದೆ.

**ಬೆಳಗಿನಿಂದಲೇ ಮಳೆಯ ಆರ್ಭಟ:**

ರಾಜಧಾನಿ ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿನ್ನೆ ರಾತ್ರಿಯಿಂದಲೇ ಗುಡುಗು–ಮಿಂಚಿನ ಅಬ್ಬರ ಶುರುವಾಗಿದ್ದು, ಇಂದು ಮುಂಜಾನೆಯಿಂದಲೇ ಮಳೆ ಪ್ರಾರಂಭವಾಗಿದೆ. ನಗರದ ಹಲವೆಡೆ ಜೋರು ಮಳೆಯಾಗಿದ್ದರೆ, ಇನ್ನು ಕೆಲವು ಭಾಗಗಳಲ್ಲಿ ಹಗುರ ಮಳೆಯಾಗಿದೆ. ನಿನ್ನೆ ರಾಜ್ಯದಲ್ಲೇ ಅತಿ ಹೆಚ್ಚು ಮಳೆ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದ (ಎಂ ಎಂ ಹಿಲ್ಸ್) ಪ್ರದೇಶದಲ್ಲಿ ದಾಖಲಾಗಿದೆ. ಉಳಿದಂತೆ ಚಿತ್ರದುರ್ಗ, ತುಮಕೂರು, ದಾವಣಗೆರೆ, ಮಂಡ್ಯ, ರಾಮನಗರ, ಹಾಸನ, ರಾಯಚೂರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ನಿನ್ನೆ ಸಾಧಾರಣ ಮಳೆಯಾಗಿದೆ.

**ಇಂದಿನ ಹವಾಮಾನ ಮುನ್ಸೂಚನೆ:**

ಉತ್ತರ ಒಳನಾಡು: ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಾಗಲಕೋಟೆ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗಲಿದೆ.

ದಕ್ಷಿಣ ಒಳನಾಡು: ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಚಿತ್ರದುರ್ಗ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗಲಿದೆ. ಬಳ್ಳಾರಿ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ಕೋಲಾರ, ಮೈಸೂರು ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ.

ಕರಾವಳಿ ಹಾಗೂ ಮಲೆನಾಡು: ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಕಾಸರಗೋಡು ಭಾಗಗಳಲ್ಲಿ ಹಗಲಿನಲ್ಲಿ ಬಿಸಿಲು ಹಾಗೂ ಒಣ ಹವೆ ಇರಲಿದ್ದು, ಸಂಜೆಯ ವೇಳೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಕೊಡಗು, ಸಕಲೇಶಪುರ, ಚಿಕ್ಕಮಗಳೂರು ಮತ್ತು ಶಿವಮೊಗ್ಗದಂತಹ ಮಲೆನಾಡು ಭಾಗಗಳಲ್ಲೂ ಸಂಜೆ ವೇಳೆ ಗುಡುಗು ಸಹಿತ ಮಳೆಯಾಗಬಹುದು.

ಹಳದಿ ಸೂಚನೆ (ಯೆಲ್ಲೋ ಅಲರ್ಟ್) ಪಡೆದ ಜಿಲ್ಲೆಗಳು:

ಬೆಳಗಾವಿ, ಧಾರವಾಡ, ಗದಗ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಮಂಡ್ಯ, ರಾಮನಗರ, ಚಾಮರಾಜನಗರ, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಹಳದಿ ಸೂಚನೆ ನೀಡಿದೆ.

**ಮಳೆಗೆ ಕಾರಣ ಹಾಗೂ ಮುಂಗಾರು ನಿರ್ಗಮನ:**

ಬಂಗಾಳ ಕೊಲ್ಲಿಯಲ್ಲಿ ಸೃಷ್ಟಿಯಾಗಿದ್ದ ವಾಯುಭಾರ ಕುಸಿತವು ದುರ್ಬಲಗೊಂಡಿದ್ದರೂ, ಶ್ರೀಲಂಕಾ ಮತ್ತು ತಮಿಳುನಾಡು ಕರಾವಳಿಯ ಮೂಲಕ ಅರೇಬಿಯನ್ ಸಮುದ್ರದಿಂದ ಬೀಸುತ್ತಿರುವ ತೇವಾಂಶಭರಿತ ಗಾಳಿಯು ರಾಜ್ಯದತ್ತ ಹರಿಯುತ್ತಿದೆ. ಇದರ ಪರಿಣಾಮವಾಗಿ ಅಕ್ಟೋಬರ್ 6ರವರೆಗೆ ಕರಾವಳಿ, ಮಲೆನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆ ಮುಂದುವರಿಯಲಿದೆ.

ಇನ್ನೂ 15 ದಿನಗಳಲ್ಲಿ, ಅಂದರೆ ಅಕ್ಟೋಬರ್ 15ರ ವೇಳೆಗೆ ನೈಋತ್ಯ ಮುಂಗಾರು ಮಳೆಯು ರಾಜ್ಯದಿಂದ ಸಂಪೂರ್ಣವಾಗಿ ನಿರ್ಗಮಿಸಲಿದೆ ಎಂದು ಹವಾಮಾನ ಇಲಾಖೆ ಸ್ಪಷ್ಟಪಡಿಸಿದೆ.

## ಉದ್ಯಮಿಗಳ ಹಿತ ಕಾಪಾಡಲು ರಾಜ್ಯ ಸರ್ಕಾರ ಬದ್ಧ



ಬೆಂಗಳೂರು,ಸೆ.30– ಏಷ್ಯಾ ಖಂಡದಲ್ಲೆ ಅತ್ಯಂತ ದೊಡ್ಡ ಕೈಗಾರಿಕಾ ಪ್ರದೇಶವಾದ ಪೀಣ್ಯಾ ಕೈಗಾರಿಕಾ ಸಂಘದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ಸಂಬಂಧ ಅಂ–ದಾಜು ವೆಚ್ಚ ಸಿದ್ದಪಡಿಸಿ ವಿಸ್ತೃತ ವರದಿ ನೀಡಬೇಕೆಂದು ಸಣ್ಣ ಮತ್ತು ಸಾರ್ವಜನಿಕ ಉದ್ಯಮಗಳ ಸಚಿವ ವಿಜಯಾನಂದ ಕಾಶ್ಯಪ್ಪನವರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿರುವ ಪೀಣ್ಯಾದ ನೇತಾಜಿ ನಗರದಲ್ಲಿ ಪೀಣ್ಯ ಕೈಗಾರಿಕಾ ಸಂಘಕ್ಕೆ ದಿಢೀರನೇ ಭೇಟಿ ನೀಡಿ ಮೂಲಭೂತ ಸೌಕರ್ಯಗಳು, ಕಾರ್ಮಿಕರ ಸ್ಥಿತಿಗತಿ ನಿರ್ವಹಣೆ ಸೇರಿದಂತೆ ಮತ್ತಿತರ ವಿಷಯಗಳ ಬಗ್ಗೆ ಖುದ್ದು ಪರಿಶೀಲನೆ ನಡೆಸಿದರು.

ನಂತರ ಮಾತನಾಡಿದ ಕಾಶ್ಯಪ್ಪನವರ್, ಈ ಪ್ರದೇಶದಲ್ಲಿ ಸಣ್ಣ ಕೈಗಾರಿಕೆಗಳಿಗೆ ರಸ್ತೆ, ಚರಂಡಿ, ವಿದ್ಯುತ್, ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳ ಕೊರತೆ ಇರುವುದನ್ನು ಸ್ವತಃ ಸಚಿವರೇ ಒಪ್ಪಿಕೊಂಡರು.

ಪೀಣ್ಯ ಕೈಗಾರಿಕಾ ಪ್ರದೇಶವು ಏಷ್ಯಾ ಖಂಡದಲ್ಲೆ ಅತ್ಯಂತ ದೊಡ್ಡ ಕೈಗಾರಿಕಾ ಪ್ರದೇಶ. ಇಲ್ಲಿ 800 ಎಕರೆ ಪ್ರದೇಶದಲ್ಲಿ ಕೈಗಾರಿಕೆಗಳು ಕಾರ್ಯ ನಿರ್ವಹಣೆ ಮಾಡುತ್ತಿವೆ. 13 ಲಕ್ಷ ಕಾರ್ಮಿಕರು ಇದ್ದಾರೆ. ಅದರಲ್ಲಿ 5ಲಕ್ಷ ಮಹಿಳಾ ಕಾರ್ಮಿಕರು ಇದ್ದಾರೆ. ದೇಶದ ಜಿಡಿಪಿ ಬೆಳವಣಿಗೆಯಲ್ಲಿ ಬಹುದೊಡ್ಡ ಕೊಡುಗೆಯನ್ನು ನೀಡುತ್ತದೆ ಎಂದು ಪ್ರಶಂಸಿಸಿದರು.

ನಾನು ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿರುವುದರಿಂದ ನನ್ನ ಗಮನಕ್ಕೆ ಮೂಲಭೂತ ಸೌಕರ್ಯಗಳ ಕೊರತೆ ಇರುವುದನ್ನು ಗಮನಿಸಿದ್ದೇನೆ ಮುಖ್ಯವಾಗಿ ರಸ್ತೆ, ಚರಂಡಿ, ನೀರು, ವಿದ್ಯುತ್ ಸೇರಿದಂತೆ ಹಲವು ಸೌಕರ್ಯಗಳು ಬೇಕು ಇದನ್ನು ಕಲ್ಪಿಸಿಕೊಡುವ ಸಂಬಂಧ ಅಧಿಕಾರಿಗಳು ಅಂದಾಜು ವೆಚ್ಚವನ್ನು ಸಿದ್ದಪಡಿಸಿ ವರದಿ ನೀಡಬೇಕೆಂದು ಸೂಚಿಸಿದರು.

ಜಿಬಿಎ, ಬಿಡಬ್ಲ್ಯೂಎಸ್ ಎಸ್ ಬಿ ಬೆಸ್ಕಾಂ, ಸೇರಿದಂತೆ ಮತ್ತಿತರ ಇಲಾಖೆಗಳ ಕೆಲಸಗಳು ನಡೆಯುತ್ತಿರುವ ಕಾರಣ ಕಾಮಗಾರಿಗಳು ವಿಳಂಬವಾಗಿವೆ. ಅಧಿಕಾರಿಗಳಿಗೆ ಹಲವು ಬಾರಿ ಸೂಚನೆ ಕೊಟ್ಟರೂ ಪ್ರಯೋಜನವಾಗಿಲ್ಲ. ಇನ್ನು ಮುಂದೆ ಯಾವುದೇ ಕಾರಣ–ಕ್ಕೂ ವಿಳಂಬ ನೀತಿ ಸಹಿಸುವುದಿಲ್ಲ. ಕಾಲಮಿತಿಯೊಳಗೆ ಗುಣಮಟ್ಟದ ಕಾಮಗಾರಿಯನ್ನು ಮುಗಿಸಬೇಕೆಂದು ಎಚ್ಚರಿಕೆ ಕೊಟ್ಟರು.

ಶೀಘ್ರದಲ್ಲೆ ಜಿಬಿಎ ಬಿಡ್ಲ್ಯೂಎಸ್ ಎಸ್ ಬಿ, ಬೆಸ್ಕಾಂ, ಸಣ್ಣ ಕೈಗಾರಿಕೆ ಸೇರಿದಂತೆ ಮತ್ತಿತರ ಇಲಾಖೆಯ ಅಧಿಕಾರಿಗಳ ವಿಶೇಷ ಸಭೆಯನ್ನು ಕರೆಯಲಾಗುವುದು. ಯಾವ ಯಾವ ಸಮಸ್ಯೆಗಳು ಇವೆಯೋ ಅದನ್ನು ಪಟ್ಟಿ ಮಾಡಿಕೊಡಿ. ವಿಶೇಷ ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಚರ್ಚಿಸಿ ಇತ್ಯರ್ಥಪಡಿಸುತ್ತೇವೆ ಎಂದು ಹೇಳಿದರು.

ಇದಕ್ಕೂ ಮುನ್ನ ವಿವಿಧ ಕೈಗಾರಿಕೆಗಳಿಗೆ ಸಚಿವರು ದಿಢೀರ್ ಭೇಟಿಕೊಟ್ಟು ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು. ಅಲ್ಲದೆ ಕಾರ್ಮಿಕರಿಂದ ತಯಾರಾಗುವ ಉತ್ಪನ್ನಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು. ಈ ವೇಳೆ ಸಣ್ಣ ಮತ್ತು ಸಾರ್ವಜನಿಕ ಉದ್ಯಮಿಗಳ ಇಲಾಖೆಯ ಅಧಿಕಾರಿಗಳು ಮತ್ತಿತರರು ಹಾಜರಿದ್ದರು.

## ಚುನಾವಣೆಯಲ್ಲಿ ಮತ ಪತ್ರ ಬಳಕೆಗೆ ಖರ್ಗೆ ಆಗ್ರಹ

ನವದೆಹಲಿ, ಸೆ. 30– ಚುನಾವಣಾ ಆಯೋಗದ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ( ಪ್ರಕ್ರಿಯೆ ಹಾಗೂ ಚುನಾವಣಾ ವ್ಯವಸ್ಥೆ ಕುರಿತು ಕಾಂಗ್ರೆಸ್ ತನ್ನ ಆಕ್ರೋಶವನ್ನು ಮತ್ತಷ್ಟು ತೀವ್ರಗೊಳಿಸಿದೆ. ವಿದ್ಯುನ್ಮಾನ ಮತಯಂತ್ರಗಳ ಬಳಕೆಯನ್ನು ಪ್ರಶ್ನಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ದೇಶದಲ್ಲಿ ಮತ್ತೆ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಇವಿಎಂಗಳು ಬಿಜೆಪಿ ಪರವಾಗಿರುವ ಸಾಧನಗಳಾಗಿವೆ ಎಂದು ಆರೋಪಿಸಿರುವ ಖರ್ಗೆ, ಚುನಾವಣಾ ಆಯೋಗದ ಕಾರ್ಯವೈಖರಿಯ ಬಗ್ಗೆಯೂ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರು ಕೇಂದ್ರ ಸರ್ಕಾರದ ಪರವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಅರ್ಥದಲ್ಲಿ ಅವರನ್ನು 'ರಬ್ಬರ್ ಸ್ಟಾಂಪ್' ಎಂದು ಕಾಂಗ್ರೆಸ್ ಟೀಕಿಸಿದೆ.

ಎಸ್ ಐ ಆರ್ ವಿಚಾರದಲ್ಲಿ ಚುನಾವಣಾ ಆಯೋಗದ ನಿರ್ಧಾರಗಳು ಮತ್ತು ಕಾರ್ಯವಿಧಾನಗಳ ಕುರಿತು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ನಿರಂತರವಾಗಿ ಆಕ್ಷೇಪ ವ್ಯಕ್ತಪಡಿಸುತ್ತಿವೆ. ಮತದಾರರ ಪಟ್ಟಿಯ ಪರಿಷ್ಕರಣೆ ಹೆಸರಿನಲ್ಲಿ ಅರ್ಹ ಮತದಾರರ ಹೆಸರುಗಳಿಗೆ ತೊಂದರೆಯಾಗಬಾರದು ಹಾಗೂ ಮತದಾನದ ಹಕ್ಕು ಯಾವುದೇ ಕಾರಣಕ್ಕೂ ದುರ್ಬಲಗೊಳ್ಳಬಾರದು ಎಂಬುದು ಕಾಂಗ್ರೆಸ್‌ನ ಪ್ರಮುಖ ವಾದವಾಗಿದೆ.

ಇವಿಎಂ ಬದಲು ಬ್ಯಾಲೆಟ್ ಪೇಪರ್‌ಗೆ ಒತ್ತಾಯ

ಚುನಾವಣಾ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಮತದಾರರ ವಿಶ್ವಾಸವನ್ನು ಖಚಿತಪಡಿಸಿಕೊಳ್ಳಲು ಬ್ಯಾಲೆಟ್ ಪೇಪರ್ ಪದ್ಧತಿಗೆ ಮರಳಬೇಕು ಎಂದು ಕಾಂಗ್ರೆಸ್ ನಾಯಕರು ಒತ್ತಾಯಿಸುತ್ತಿದ್ದಾರೆ.

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# 100 ದಿನ ಪೂರೈಸಿದ ಜಿಬಿಎ ಸಚಿವರು: ಸಾರ್ವಜನಿಕ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆ

**ಮಹೇಶ. ಸಿ**

ಬೆಂಗಳೂರು,ಸೆ.30–ಬೆಂಗಳೂರು ಉಸ್ತುವಾರಿ ಹಾಗೂ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರು ಉಸ್ತುವಾರಿ ವಹಿಸಿಕೊಂಡ ಬಳಿಕ ನಗರದ ಅಭಿವೃದ್ಧಿ ಹಾಗೂ ಮೂಲಸೌಕರ್ಯ ಸುಧಾರಣೆಗೆ ಹಲವು ಯೋಜನೆಗಳಿಗೆ ಚಾಲನೆ ನೀಡಿದ್ದು, ನೂರು ದಿನಗಳ ಅವಧಿಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಸಾರ್ವಜನಿಕ ವಲಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೆಲವು ಯೋಜನೆಗಳು ಜನರ ಗಮನ ಸೆಳೆದರೆ, ಆರಂಭದಲ್ಲಿ ಭರವಸೆ ಮೂಡಿಸಿದ್ದ ಹಲವು ಕ್ರಮಗಳು ನಿರಂತರವಾಗಿ ಜಾರಿಯಾಗದೆ ಹಿನ್ನಡೆ ಕಂಡಿವೆ ಎಂಬ ಅಭಿಪ್ರಾಯವೂ ಕೇಳಿಬರುತ್ತಿದೆ.

ನಗರದ ರಸ್ತೆಬದಿ ಬಿಸಾಡಲಾಗಿದ್ದ ತ್ಯಾಜ್ಯ, ಕಟ್ಟಡಗಳ ಭಗ್ನಾವಶೇಷ ಹಾಗೂ ಬೆಳೆದಿದ್ದ ಕಳೆ–ಗಿಡಗಂಟೆಗಳನ್ನು ತೆರವುಗೊಳಿಸಲು ವಿಶೇಷ ಅಭಿಯಾನ, ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ವಾರಸುದಾರರಿಲ್ಲದ ವಾಹನಗಳ ತೆರವು ಹಾಗೂ 'ಬೆಂಗಳೂರು ಹಸಿರೂರು' ಅಭಿಯಾನ ಸೇರಿದಂತೆ ಹಲವು ಕ್ರಮಗಳಿಗೆ ಸಚಿವರು ಒತ್ತು ನೀಡಿದರು. ಇದರಿಂದ ಆರಂಭದಲ್ಲಿ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿತ್ತು.

ನಗರದ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸುಮಾರು 3,000 ಕೋಟಿ ವೆಚ್ಚದಲ್ಲಿ 450 ಕಿ.ಮೀ. ಉದ್ದದ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳಲು ಸೂಚನೆ ನೀಡಿರುವುದು ಪ್ರಮುಖ ಘೋಷಣೆಗಳಲ್ಲಿ ಒಂದಾಗಿದೆ. ಜುಲೈ 1ರಿಂದ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ' ಆರಂಭಿಸಿ ಆರ್ಟಿರಿಯಲ್ ಮತ್ತು ಸಬ್‌ಆರ್ಟಿರಿಯಲ್ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳ ಮೇಲೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ಕ್ರಮಕ್ಕೆ ಸೂಚಿಸಲಾಯಿತು.

ಜುಲೈ 10ರಿಂದ ವಾರಸುದಾರರಿಲ್ಲದ ವಾಹನಗಳ ತೆರವು ಕಾರ್ಯಾಚರಣೆಗೂ ಚಾಲನೆ ನೀಡಲಾಯಿತು. ಆದರೆ, ನೂರು ದಿನಗಳ ಬಳಿಕವೂ ನಗರದ ಹಲವು ರಸ್ತೆ ಬದಿಗಳಲ್ಲಿ ಹಾಗೂ ಫುಟ್‌ಪಾತ್‌ಗಳ ಮೇಲೆ ಅನಾಥ ವಾಹನಗಳು ಕಾಣಿಸುತ್ತಿವೆ ಎಂಬುದು ಸಾರ್ವಜನಿಕರ ಆಕ್ಷೇಪವಾಗಿದೆ.

**ಫುಟ್‌ಪಾತ್ ತೆರವು ಮತ್ತೆ ಪ್ರಶ್ನೆ:**

ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆ ಆರಂಭವಾದಾಗ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆದರೆ ತೆರವುಗೊಳಿಸಿದ್ದ ಹಲವು ಕಡೆಗಳಲ್ಲಿ ಮತ್ತೆ ಒತ್ತುವರಿ ಕಾಣಿಸಿಕೊಂಡಿರುವುದು ಯೋಜನೆಯ ನಿರಂತರತೆಯ ಬಗ್ಗೆ ಪ್ರಶ್ನೆ ಮೂಡಿಸಿದೆ. ಪಾದಚಾರಿಗಳಿಗೆ ಮುಕ್ತವಾಗಬೇಕಿದ್ದ ಫುಟ್‌ಪಾತ್‌ಗಳು ಮತ್ತೆ ವ್ಯಾಪಾರ, ಪಾರ್ಕಿಂಗ್ ಸೇರಿದಂತೆ ವಿವಿಧ ಉದ್ದೇಶಗಳಿಗೆ ಬಳಕೆಯಾಗುತ್ತಿವೆ ಎಂಬ ದೂರುಗಳು ಕೇಳಿಬರುತ್ತಿವೆ.

ಬೀದಿ ನಾಯಿಗಳ ನಿಯಂತ್ರಣಕ್ಕೂ ಮೂರು ವರ್ಷಗಳಲ್ಲಿ ಶೇ.100 ಎಬಿಸಿ ಗುರಿ ಸಾಧಿಸುವ ಕಾರ್ಯಸೂಚಿ ರೂಪಿಸಿ, ವರ್ಷಕ್ಕೆ 90 ಸಾವಿರ ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಲು ಸೂಚಿಸಲಾಗಿದೆ. 'ಸಹಾಯ' ತಂತ್ರಾಂಶದ ಮೂಲಕ ಸಾರ್ವಜನಿಕರ ದೂರುಗಳನ್ನು ಕಾಲಮಿತಿಯಲ್ಲಿ ಪರಿಹರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಆಗಸ್ಟ್ 15ರಿಂದ ಸೆಪ್ಟೆಂಬರ್ 15ರವರೆಗೆ 'ಬೆಂಗಳೂರು ಹಸಿರೂರು ಅಭಿಯಾನ' ನಡೆಸಲು ಸೂಚಿಸಲಾಗಿದ್ದು, ನಗರದಲ್ಲಿ ಹಸಿರು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ.

**ಸಂಚಾರ, ರಸ್ತೆ ಅಭಿವೃದ್ಧಿಗೂ ಒತ್ತು**

ಜುಲೈ 22ರಂದು ಟ್ರಾಫಿಕ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಪಾದಚಾರಿ ಮಾರ್ಗದಲ್ಲಿ ಬೈಕ್ ಚಲಾಯಿಸುವವರಿಗೆ 5 ಸಾವಿರ ದಂಡ ವಿಧಿಸುವಂತೆ ಸಾರಿಗೆ ಸಚಿವರಿಗೆ ಪತ್ರ ಬರೆದಿದ್ದರು. ಜುಲೈ 25ರಂದು ಕೆ.ಆರ್.ಪುರಂನಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗಿನ ಹೊರವರ್ತುಲ ರಸ್ತೆ ಅಭಿವೃದ್ಧಿ ಹಾಗೂ ಸಂಚಾರ ದಟ್ಟಣೆ ನಿವಾರಣೆಗೆ 450 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ತಿಳಿಸಿದ್ದರು.

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆಗಸ್ಟ್ 15ರಂದು 'ಫ್ರೀಡಂ ಹಬ್ಬ' ಆಯೋಜಿಸಿದ್ದು, ಆಗಸ್ಟ್ 29ರಂದು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿದ 181 ಪ್ರತಿಭಾವಂತ ವಿದ್ಯಾರ್ಥಿಗಳನ್ನು 'ನಮ್ಮೂರು ಹೆಮ್ಮೆ' ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಸೆಪ್ಟೆಂಬರ್ 1ರಂದು ಪಾಲಿಕೆ ಶಾಲೆಗಳ ವಿದ್ಯಾರ್ಥಿಗಳಿಗೆ ಮುಖಚರ್ಯೆ ಆಧಾರಿತ ಹಾಜರಾತಿ ವ್ಯವಸ್ಥೆ ಜಾರಿಗೆ ತರಲಾಗಿದ್ದು, ಸೆಪ್ಟೆಂಬರ್ 19ರಂದು 50ಥ80 ಅಡಿ ನಿವೇಶನಗಳಲ್ಲಿ ಗರಿಷ್ಠ ನಾಲ್ಕು ವಸತಿ ಘಟಕಗಳ ನಿರ್ಮಾಣಕ್ಕೆ ಸ್ವಯಂಚಾಲಿತ ನಕ್ಷೆ ಮಂಜೂರಾತಿ ವ್ಯವಸ್ಥೆ ಒಳಗೊಂಡ 'ನಂಬಿಕೆ ನಕ್ಷೆ 2.0'ಗೆ ಚಾಲನೆ ನೀಡಲಾಯಿತು.

**ಸಾಧನೆಗೆ 50 ಅಂಕ.. ವಿಫಲತೆಗೆ 50 ಅಂಕ?;**

ಹೀಗೆ ನೂರು ದಿನಗಳ ಅವಧಿಯಲ್ಲಿ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಹಲವು ಘೋಷಣೆಗಳು, ಸಭೆಗಳು ಮತ್ತು ಯೋಜನೆಗಳು ನಡೆದಿವೆ. ಆದರೆ, ಯೋಜನೆ ಘೋಷಣೆಯಾಗುವುದು ಮಾತ್ರವಲ್ಲ, ಅದರ ಫಲಿತಾಂಶ ನೆಲಮಟ್ಟದಲ್ಲಿ ಕಾಣಿಸಿಕೊಳ್ಳಬೇಕು ಎಂಬುದು ಸಾರ್ವಜನಿಕರ ನಿರೀಕ್ಷೆಯಾಗಿದೆ.

ಫುಟ್‌ಪಾತ್ ಒತ್ತುವರಿ, ಅನಾಥ ವಾಹನಗಳು, ತ್ಯಾಜ್ಯ ನಿರ್ವಹಣೆ ಹಾಗೂ ಖಾಲಿ ನಿವೇಶನಗಳ ಸ್ವಚ್ಛತೆ ವಿಚಾರದಲ್ಲಿ ಇನ್ನೂ ಸಮಸ್ಯೆಗಳು ಮುಂದುವರಿದಿವೆ ಎಂಬ ದೂರುಗಳಿವೆ. ಖಾಲಿ ನಿವೇಶನಗಳಲ್ಲಿ ಕಸ ಹಾಕಿದರೆ ದಂಡ ವಿಧಿಸುವ ಕ್ರಮಕ್ಕೂ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

ಹೀಗಾಗಿ ಸಚಿವರ ನೂರು ದಿನಗಳ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರ ಅಭಿಪ್ರಾಯ 50–50 ಎಂಬಂತಾಗಿದೆ. ಕೆಲವರು ಆರಂಭಿಸಿರುವ ಯೋಜನೆಗಳನ್ನು ಮೆಚ್ಚಿಕೊಂಡರೆ, ಮತ್ತೊಂದೆಡೆ ಘೋಷಣೆಗಳಷ್ಟೇ ಸಾಲದು, ಅವು ನಿರಂತರವಾಗಿ ಜಾರಿಯಾಗಿ ಶಾಶ್ವತ ಪರಿಹಾರ ನೀಡಬೇಕು ಎಂದು ನಾಗರಿಕರು ಒತ್ತಾಯಿಸುತ್ತಿದ್ದಾರೆ.

ನೂರು ದಿನಗಳ ಲೆಕ್ಕಾಚಾರದಲ್ಲಿ ಸಚಿವರಿಗೆ ಸಾರ್ವಜನಿಕರಿಂದ ಸದ್ಯಕ್ಕೆ 100ಕ್ಕೆ 50 ಅಂಕಗಳು ಸಿಕ್ಕಿವೆ ಎನ್ನಬಹುದೇ? ಮುಂದಿನ ದಿನಗಳಲ್ಲಿ ಯೋಜನೆಗಳ ಅನುಷ್ಠಾನವೇ ಅಂತಿಮ ಫಲಿತಾಂಶ ನಿರ್ಧರಿಸಲಿದೆ.

# ಬಾಕಿ ಹಣ ಪಾವತಿಗೆ ಸರ್ಕಾರಕ್ಕೆ ಗುತ್ತಿಗೆದಾರರ ಗಡುವು

ಬೆಂಗಳೂರು, ಸೆ.30– ರಾಜ್ಯದ ವಿವಿಧ ಇಲಾಖೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ವರ್ಷಗಳೇ ಕಳೆದರೂ ಬಾಕಿ ಬಿಲ್ ಪಾವತಿಯಾಗಿಲ್ಲ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದೆ. ಸುಮಾರು 38 ಸಾವಿರ ಕೋಟಿ ಬಾಕಿ ಮೊತ್ತವನ್ನು ಕಾಲಮಿತಿಯೊಳಗೆ ಬಿಡುಗಡೆ ಮಾಡಬೇಕು, ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಸಂಘ ಎಚ್ಚರಿಕೆ ನೀಡಿದೆ.

ಈ ಕುರಿತು ಬೆಂಗಳೂರಿನಲ್ಲಿ ಇಂದು ಸುದ್ದಿಗೋಷ್ಠಿ ನಡೆಸಿದ ಸಂಘದ ಅಧ್ಯಕ್ಷ ಆರ್. ಮಂಜುನಾಥ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹತ್ತು ದಿನಗಳ ಹಿಂದೆ ಮನವಿ ಪತ್ರ ನೀಡಿದ್ದರೂ ಇದುವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಹೇಳಿದರು. ಸುಮಾರು 1.5 ಲಕ್ಷ ಗುತ್ತಿಗೆದಾರರು ಕಳೆದ ಹಲವು ವರ್ಷಗಳಿಂದ ಬಾಕಿ ಹಣಕ್ಕಾಗಿ ಪರದಾಡುತ್ತಿದ್ದಾರೆ ಎಂದು ಅವರು ತಿಳಿಸಿದರು.

**ಯಾವ ಇಲಾಖೆಯಲ್ಲಿ ಎಷ್ಟು ಬಾಕಿ**

ಗುತ್ತಿಗೆದಾರರ ಸಂಘ ನೀಡಿರುವ ಅಂಕಿ–ಅಂಶಗಳ ಪ್ರಕಾರ,

ಲೋಕೋಪಯೋಗಿ ಇಲಾಖೆ – 8,370 ಕೋಟಿ

ಜಲಸಂಪನ್ಮೂಲ ಇಲಾಖೆ – 14,000 ಕೋಟಿ

ಆರ್‌ಡಿಪಿಆರ್ – 3,000 ಕೋಟಿ

ಸಣ್ಣ ನೀರಾವರಿ – 3,600 ಕೋಟಿ

ನಗರಾಭಿವೃದ್ಧಿ ಇಲಾಖೆ – 1,800 ಕೋಟಿ

ವಸತಿ ಮತ್ತು ವಕ್ಫ್ – 2,600 ಕೋಟಿ

ಕಾರ್ಮಿಕ ಇಲಾಖೆ – 2,000 ಕೋಟಿ

ಬಿಬಿಎಂಪಿ – 2,600 ಕೋಟಿ

ಒಟ್ಟಾರೆ ಸುಮಾರು 37,980 ಕೋಟಿ ಬಾಕಿ ಇದೆ ಎಂದು ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

**ಜೂನ್ 30ರ ಭರವಸೆ ಎಲ್ಲಿ ಹೋಯ್ತು?**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜೂನ್ 30ರಂದು ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಬಾಕಿ ಮೊತ್ತ ಬಿಡುಗಡೆಗೆ ಎರಡು ತಿಂಗಳೊಳಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು ಎಂದು ಸಂಘ ಹೇಳಿದೆ.

ಆದರೆ, ಭರವಸೆ ನೀಡಿದ ಅವಧಿ ಕಳೆದರೂ ಬಾಕಿ ಹಣ ಬಿಡುಗಡೆಯಾಗಿಲ್ಲ. ಕಾಮಗಾರಿ ಪೂರ್ಣಗೊಳಿಸಿ ಎರಡು ವರ್ಷ ಕಳೆದಿರುವ ಪ್ರಕರಣಗಳಲ್ಲಿಯೂ ಬಿಲ್ ಪಾವತಿಯಾಗಿಲ್ಲ ಎಂದು ಮಂಜುನಾಥ್ ಆರೋಪಿಸಿದರು.

**ಕಮಿಷನ್ ಆರೋಪ; ದಾಖಲೆ ಬಿಡುಗಡೆ ಎಚ್ಚರಿಕೆ:**

ಬಿಲ್ ಪಾವತಿ ಮತ್ತು ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲ ಎಂದು ಗುತ್ತಿಗೆದಾರರ ಸಂಘ ಆರೋಪಿಸಿದೆ. ಕೆಲವು ಕಡೆ ಅಧಿಕಾರಿಗಳು ಮತ್ತು ರಾಜಕಾರಣಿಗಳಿಗೆ ಕಮಿಷನ್ ನೀಡಿದರೆ ಮಾತ್ರ ಬಿಲ್ ಮಾಡಲಾಗುತ್ತಿದೆ ಎಂಬ ಗಂಭೀರ ಆರೋಪವನ್ನೂ ಮಂಜುನಾಥ್ ಮಾಡಿದ್ದಾರೆ.

"ಮುಖ್ಯಮಂತ್ರಿಗಳು ಸಭೆ ಕರೆದರೆ ಯಾವ ಇಲಾಖೆಯಲ್ಲಿ ಎಷ್ಟು ಪರ್ಸೆಂಟೇಜ್ ಕೇಳಲಾಗುತ್ತಿದೆ ಎಂಬುದನ್ನು ಬಹಿರಂಗಪಡಿಸುತ್ತೇವೆ. ಅಗತ್ಯವಿದ್ದರೆ ದಾಖಲೆಗಳನ್ನೂ ಬಿಡುಗಡೆ ಮಾಡುತ್ತೇವೆ" ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

**31 ಜಿಲ್ಲೆಗಳಲ್ಲಿ ಪಾದಯಾತ್ರೆ:**

ಸರ್ಕಾರ ಬಾಕಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ಹಂತದಲ್ಲಿ ರಾಜ್ಯದ 31 ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿಗಳವರೆಗೆ ಪಾದಯಾತ್ರೆ ನಡೆಸಲು ಸಂಘ ನಿರ್ಧರಿಸಿದೆ ಎಂದು ಮಂಜುನಾಥ್ ಹೇಳಿದರು.

"ಡಿಸೆಂಬರ್ ಅಂತ್ಯದೊಳಗೆ ಬಾಕಿ ಹಣ ಬಿಡುಗಡೆ ಮಾಡಬೇಕು. ಇಲ್ಲವಾದರೆ ಉಗ್ರ ಹೋರಾಟ ನಡೆಸುತ್ತೇವೆ" ಎಂದು ಅವರು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸರ್ಕಾರ ತಮ್ಮ ಹಣವನ್ನು ಪಡೆದುಕೊಂಡು ಬೇರೆ ಯೋಜನೆಗಳಿಗೆ ಬಳಸುತ್ತಿದೆ ಎಂಬ ಆರೋಪ ಮಾಡಿದ ಅವರು, "ಸರ್ಕಾರವೇ ನಮ್ಮ ಸಾಲಗಾರ. ಮೊದಲು ಗುತ್ತಿಗೆದಾರರ ಬಾಕಿ ಹಣ ಬಿಡುಗಡೆ ಮಾಡಲಿ, ನಂತರ ಬೇರೆ ಯೋಜನೆಗಳಿಗೆ ಹಣ ನೀಡಲಿ" ಎಂದು ಆಗ್ರಹಿಸಿದರು.

ಹಿಂದೆಯೂ ಮಾರ್ಚ್‌ನಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಗುತ್ತಿಗೆದಾರರ ಪ್ರತಿಭಟನೆಯ ಸಂದರ್ಭದಲ್ಲಿ ಬಾಕಿ ಬಿಲ್‌ಗಳ ವಿಚಾರದಲ್ಲಿ ಸಭೆ ನಡೆಸಿ ಪರಿಹಾರ ಕಂಡುಕೊಳ್ಳುವ ಭರವಸೆ ನೀಡಲಾಗಿತ್ತು.

ಬಾಕಿ ಬಿಲ್ ಪಾವತಿಗೆ ಗುತ್ತಿಗೆದಾರರ ಸಂಘದ ಒತ್ತಾಯ ಮುಂದುವರಿದಿದ್ದು, ಸರ್ಕಾರದ ಮುಂದಿನ ಕ್ರಮದತ್ತ ಇದೀಗ ಗುತ್ತಿಗೆ ವಲಯದ ಗಮನ ನೆಟ್ಟಿದೆ.

# ಪಿಜಿಗಳಲ್ಲಿ ಲ್ಯಾಪ್ ಟಾಪ್ ಕಳವು ಖದೀಮನ ಸೆರೆ

ಬೆಂಗಳೂರು,ಸೆ.30–ಲ್ಯಾಪ್ ಟಾಪ್ , ಮೊಬೈಲ್ ಹಾಗೂ ದ್ವಿ ಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ತಮಿಳುನಾಡು ಮೂಲದ ಖದೀಮನನ್ನು ಮಡಿವಾಳ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ತಮಿಳುನಾಡಿನ ವೆಲ್ಲೂರು ಜಿಲ್ಲೆಯ ಹರಿಹರನ್ ಪಿ(20) ಬಂಧಿತ ಆರೋಪಿಯಾಗಿದ್ದು, ಆತನಿಂದ 3.25 ಲಕ್ಷ ಮೌಲ್ಯದ 3 ಲ್ಯಾಪ್‌ಟಾಪ್, 4 ಮೊಬೈಲ್ ಫೋನ್, ಹಾಗೂ 1 ದ್ವಿ ಚಕ್ರವಾಹನ ವಶಪಡಿಸಿಕೊಳ್ಳಲಾಗಿದೆ.

ಮಡಿವಾಳದ ಆಂಜನೇಯ ದೇವಸ್ಥಾನದ ಬಳಿಯಿರುವ ಪಿಜಿಯಲ್ಲಿ 5 ಲ್ಯಾಪ್ ಟಾಪ್ ಮೊಬೈಲ್ ಫೋನ್ ಕಳೆದ ಸೆ. 17 ರಂದು ಮುಂಜಾನೆ 3 ರಿಂದ ಬೆಳಗ್ಗೆ 7–30 ರ ಅವಧಿಯಲ್ಲಿ ಕಳವು ಮಾಡಿದ್ದ ಪ್ರಕರಣವು ಮಡಿವಾಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು.

ಪ್ರಕರಣದ ತನಿಖೆಯನ್ನು ವಿವಿಧ ಆಯಾಮಗಳಲ್ಲಿ ಕೈಗೊಂಡು ಖಚಿತ ಮಾಹಿತಿಯನ್ನು ಕಲೆಹಾಕಿ ಸೆ.22 ರಂದು ಓರ್ವ ಆರೋಪಿಯನ್ನು ಬೊಮ್ಮಸಂದ್ರ ಬಸ್ ನಿಲ್ದಾಣದ ಬಳಿ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯವೆಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, 7 ದಿನಗಳ ಕಾಲ ಪೊಲೀಸ್ ಅಭಿರಕ್ಷೆಗೆ ಪಡೆದು ಸುದೀರ್ಘವಾಗಿ ವಿಚಾರಿಸಲಾಗಿ, ಕಳವು ಮಾಡಿದ ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳನ್ನು ಹಾಗೂ 1 ದ್ವಿ ಚಕ್ರವಾಹನವನ್ನು ಠಾಣಾ ಸರಹದ್ದಿನ ಡಾಲರ್ಸ್ ಕಾಲೋನಿಯ ಮೋರಿ ಬಳಿಯ ಜಾಗದಲ್ಲಿ ಇರಿಸಿರುವುದಾಗಿ ತಿಳಿಸಿರುತ್ತಾನೆ.

ಆರೋಪಿಯು ನೀಡಿದ ಮಾಹಿತಿ ಮೇರೆಗೆ ಠಾಣಾ ಸರಹದ್ದಿನ ಡಾಲರ್ಸ್ ಕಾಲೋನಿಯ ಮೋರಿ ಬಳಿಯ ಜಾಗದಿಂದ 1 ದ್ವಿ–ಚಕ್ರ ವಾಹನ 4 ಮೊಬೈಲ್ ಫೋನ್‌ಗಳು ಹಾಗೂ 03 ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ

ಆರೋಪಿಯ ಬಂಧನದಿಂದ ಮಡಿವಾಳದ 2, ಜಿಗಣಿ 1 ಕಳವು ಪ್ರಕರಣ ಸೇರಿ 3 ಕಳವು ಪ್ರಕರಣಗಳು ಪತ್ತೆಯಾಗಿವೆ. ಮಡಿವಾಳ ಪೊಲೀಸ್ ಇನ್ಸ್ ಪೆಕ್ಟರ್ ಸತೀಶ್ ಬಿ.ಎಸ್. ಮತ್ತವರ ಸಿಬ್ಬಂದಿಗಳ ತಂಡವು ಪ್ರಕರಣ ಬೇಧಿಸುವಲ್ಲಿ ಯಶಸ್ವಿಯಾಗಿದೆ

# ರಸ್ತೆ ಅಪಘಾತಕ್ಕೆ ವಿದ್ಯಾರ್ಥಿನಿ ಸಾವು

ಹಾಸನ,ಸೆ.30–ನಗರದ ವಿಶ್ವಕರ್ಮ ವೃತ್ತದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯೊಬ್ಬರು ಮೃತಪಟ್ಟಿದ್ದು, ಮತ್ತೋರ್ವ ವಿದ್ಯಾರ್ಥಿನಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಅಪಘಾತದಲ್ಲಿ ಲಿಖಿತಾ (18) ಮೃತಪಟ್ಟಿದ್ದು, ಅವರ ಗೆಳತಿ ಚಿನ್ಮಯಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳು ಚಿನ್ಮಯಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಲೇಜು ಮುಗಿಸಿ ಮನೆಗೆ ತೆರಳಿದ್ದ ಲಿಖಿತಾ ಬಳಿಕ ಗೆಳತಿ ಚಿನ್ಮಯಿಯ ಸ್ಕೂಟರ್‌ನಲ್ಲಿ ನಗರದತ್ತ ತೆರಳಿದ್ದರು. ಹಾಸನ ಬಸ್ ನಿಲ್ದಾಣದ ಕಡೆಯಿಂದ ಡೈರಿ ಕಡೆಗೆ ಸ್ಕೂಟರ್ ತಿರುಗಿಸುತ್ತಿದ್ದ ವೇಳೆ, ಅತಿ ವೇಗವಾಗಿ ಬಂದ ಲಾರಿ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ಡಿಕ್ಕಿಯ ರಭಸಕ್ಕೆ ಲಿಖಿತಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಲಾರಿ ಚಾಲಕ ಪಾನಮತ್ತನಾಗಿ ವಾಹನ ಚಲಾಯಿಸಿದ್ದರಿಂದಲೇ ಅಪಘಾತ ಸಂಭವಿಸಿದೆ ಎಂದು ಆರೋಪಿಸಿರುವ ಸ್ಥಳೀಯರು, ಚಾಲಕನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದೊಳಗೆ ಭಾರಿ ಗಾತ್ರದ ಲಾರಿಗಳಿಗೆ ಸಂಚಾರಕ್ಕೆ ಅವಕಾಶ ನೀಡಿರುವುದು ಏಕೆ? ವಿಶ್ವಕರ್ಮ ವೃತ್ತದಲ್ಲಿ ಸಮರ್ಪಕ ಸಂಚಾರ ಫಲಕಗಳು ಹಾಗೂ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆ ಏಕೆ ಮಾಡಿಲ್ಲ ಎಂದು ಸಾರ್ವಜನಿಕರು ಪೊಲೀಸರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಪಘಾತದ ಕುರಿತು ತನಿಖೆ ಮುಂದುವರಿಸಿದ್ದಾರೆ.

# ಸೌಜನ್ಯ ಪ್ರಕರಣ: ಎಸ್‌ಐಟಿಗೆ 16 ಪೊಲೀಸ್ ಅಧಿಕಾರಿಗಳ ನೇಮಕ

ಮಂಗಳೂರು,ಸೆ.30–ತೀವ್ರಸಂಚಲನ ಮೂಡಿಸಿದ್ದ ಬೆಳ್ತಂಗಡಿ ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಮರು ತನಿಖೆಗೆ ರಚಿಸಲಾಗಿರುವ ವಿಶೇಷ ತನಿಖಾ ತಂಡಕ್ಕೆ (ಎಸ್ ಐಟಿ) 16 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ತನಿಖಾ ಸಹಾಯಕರಾಗಿ ನೇಮಕ ಮಾಡಲಾಗಿದೆ.

ಸುಪ್ರೀಂ ಕೋರ್ಟ್‌ನ ಮರುತನಿಖೆ ಆದೇಶದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಸೆಪ್ಟೆಂಬರ್ 24ರಂದು ಐವರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ಎಸ್ ಐಟಿ ರಚಿಸಿತ್ತು. ಪೊಲೀಸ್ ಮಹಾನಿರೀಕ್ಷಕ ಎನ್. ಶಶಿಕುಮಾರ್ ಅವರು ಎಸ್ ಐಟಿ ಮುಖ್ಯಸ್ಥರಾಗಿದ್ದು, ಮಂಗಳೂರು ನಗರ ಪೊಲೀಸ್ ಆಯುಕ್ತ ಸಿ.ಎಚ್. ಸುಧೀರ್ ಕುಮಾರ್ ರೆಡ್ಡಿ, ರಾಜ್ಯ ಗುಪ್ತವಾರ್ತೆಯ ನಿಶಾ ಜೇಮ್ಸ್, ಬೆಂಗಳೂರು ಸಿಐಡಿ ಪೊಲೀಸ್ ಅಧೀಕ್ಷಕ ಲೋಕೇಶ್ ಜಗಲಸಾರ್ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವೆಂಕಟೇಶ್ ಪ್ರಸನ್ನ ಅವರು ಸದಸ್ಯರಾಗಿದ್ದಾರೆ.

ತನಿಖೆಗೆ ಅಗತ್ಯ ಸಹಕಾರ ನೀಡಲು ಮಂಗಳೂರು ನಗರ ಸಿಸಿಬಿಯ ಎಸಿಪಿ ಮನೋಜ್ ಕುಮಾರ್ ನಾಯಕ್, ಬೆಂಗಳೂರು ಸಿಸಿಬಿ ಎಸಿಪಿ ರಾಮಚಂದ್ರ ಬಿ., ಸಿಐಡಿ ಇನ್ಸ್‌ಪೆಕ್ಟರ್‌ಗಳಾದ ದೀಪಕ್ ಹಾಗೂ ಮೋಹನ್ ಡಿ. ಪಾಟೀಲ್, ಮಡಿವಾಳ ಸಂಚಾರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಈಶ್ವರಿ, ಕೋಣಾಜೆ ಠಾಣೆಯ ಪಿಎಸ್‌ಐ ಪುನೀತ್ ಗಾವಂಕರ್, ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಪ್ರದೀಪ್, ಕಂಕನಾಡಿ ಠಾಣೆಯ ಮಹಿಳಾ ಪಿಎಸ್‌ಐ ಅನಿತಾ ನಿಕಂ ಹಾಗೂ ಮಂಗಳೂರು ಸಿಸಿಬಿಯ ಎಎಸ್‌ಐ ಮೋಹನ್ ಸೇರಿದಂತೆ

**16 ಮಂದಿಯನ್ನು ನೇಮಕ ಮಾಡಲಾಗಿದೆ.**

ಇದರೊಂದಿಗೆ ಕಂಕನಾಡಿ ಪೊಲೀಸ್ ಠಾಣೆಯ ಸಿಬ್ಬಂದಿಗಳಾದ ಪ್ರದೀಪ್ ಕುಮಾರ್ ರೈ, ಗೋವರ್ಧನ್, ದಿನೇಶ್ ಎನ್., ಉಳ್ಳಾಲ ಠಾಣೆಯ ರಾಧಾಕೃಷ್ಣ ಕೆ.ಕೆ., ಕಾವೂರು ಠಾಣೆಯ ರೆಜಿ ವಿ.ಎಂ., ಸುರತ್ಕಲ್ ಠಾಣೆಯ ರಾಜೇಂದ್ರಪ್ರಸಾದ್ ವಿ.ಪಿ. ಹಾಗೂ ಕಂಕನಾಡಿ ಠಾಣೆಯ ಮಹಿಳಾ ಸಿಬ್ಬಂದಿ ಪ್ರಮೀಳಾ ಅವರನ್ನೂ ತನಿಖಾ ಸಹಾಯಕರಾಗಿ ತಂಡಕ್ಕೆ ಸೇರಿಸಲಾಗಿದೆ.

**ಹಾಜರಾಗುವಂತೆ ಸೂಚನೆ:**

ಎಸ್ ಐಟಿಗೆ ನೇಮಕಗೊಂಡಿರುವ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ಕರ್ತವ್ಯ ನಿರ್ವಹಿಸುತ್ತಿರುವ ಠಾಣೆಗಳಿಂದ ತಕ್ಷಣವೇ ಬಿಡುಗಡೆಗೊಂಡು ಬೆಂಗಳೂರಿನಲ್ಲಿರುವ ವಿಶೇಷ ತನಿಖಾ ತಂಡದ ಮುಂದೆ ವರದಿ ಮಾಡಿಕೊಳ್ಳುವಂತೆ ಡಿಜಿ ಮತ್ತು ಐಜಿಪಿ ಡಾ. ಎಂ.ಎ. ಸಲೀಂ ಅವರು ತಿಳಿಸಿದ್ದಾರೆ.

16 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರ್ಪಡೆಯೊಂದಿಗೆ ಬೆಳ್ತಂಗಡಿ ಬಾಲಕಿ ಪ್ರಕರಣದ ಮರುತನಿಖೆಗೆ ರಚಿಸಲಾಗಿರುವ ಎಸ್ ಐಟಿಗೆ ಅಗತ್ಯ ಸಿಬ್ಬಂದಿ ವ್ಯವಸ್ಥೆ ಮತ್ತಷ್ಟು ಬಲಗೊಂಡಿದ್ದು, ತನಿಖಾ ಕಾರ್ಯ ಚುರುಕುಗೊಳ್ಳುವ ನಿರೀಕ್ಷೆ ಇದೆ.




ರಾಜ್ಯದ 6 ಸಾವಿರ ಸಿಎಚ್‌ಒಗಳಿಗೆ ಉದ್ಯೋಗ ಭದ್ರತೆ ನೀಡುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ ಎನ್‌ಎಚ್‌ಎಂ ಗುತ್ತಿಗೆ ನೌಕರರ ಸಂಘದ ನೌಕರರು ಮತ್ತು ಪದಾಧಿಕಾರಿಗಳು ಇಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

## ನಾಲ್ವರು ಕೊಲೆ ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು,ಸೆ.30– ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ವ್ಯಕ್ತಿಯೊಬ್ಬನನ್ನು ಸಂಚು ರೂಪಿಸಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ನಾಲ್ವರು ಆರೋಪಿಗಳಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ಹಾಗೂ ದಂಡ ವಿಧಿಸಿದೆ.

ಕಳೆದ 2013ರ ಡಿಸೆಂಬರ್ 9ರಂದು ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಾಗೇಶ ಎಂಬ ವ್ಯಕ್ತಿ ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿತ್ತು. ತನಿಖೆ ಮುಂದುವರಿಸಿದ ಪೊಲೀಸರು ಮಂಡೂರು ಗ್ರಾಮದ ನೀರಿನ ಕುಂಟೆಯಲ್ಲಿ ಮೃತದೇಹವೊಂದನ್ನು ಪತ್ತೆಹಚ್ಚಿದ್ದರು. ಬಳಿಕ ಅದು ಕಾಣೆಯಾಗಿದ್ದ ನಾಗೇಶನ ಮೃತದೇಹ ಎಂಬುದು ದೃಢಪಟ್ಟಿತ್ತು.

# ಕಾರು ಡಿಕ್ಕಿ: ದಂಪತಿ ಸಾವು

ದೊಡ್ಡಬಳ್ಳಾಪುರ.ಸೆ.30– ದ್ವಿಚಕ್ರ ವಾಹನಕ್ಕೆ ಕಾರೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ದಂಪತಿ ಮೃತಪಟ್ಟಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಕೂಗೇನಹಳ್ಳಿ ಗೇಟ್ ಬಳಿ ನಡೆದಿದೆ.

ಮೃತರನ್ನು ಕತ್ತಿಹೊಸಗಳ್ಳಿ ಮೂಲದ ಲಕ್ಷ್ಮಯ್ಯ (55) ಹಾಗೂ ಅವರ ಪತ್ನಿ ಅನಿತಾ (45) ಎಂದು ಗುರುತಿಸಲಾಗಿದೆ.

ಪಿತೃಪಕ್ಷದ ಅಂಗವಾಗಿ ಮನೆಯಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಸಂಬಂಧಿಕರ ಮನೆಗೆ ತೆರಳಿದ್ದ ದಂಪತಿ, ಬಳಿಕ ಸಂಬಂಧಿಕರೊಂದಿಗೆ ಹರಿಕಥೆಗೆ ತೆರಳಿದ್ದರು. ಹರಿಕಥೆ ಮುಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಮನೆಗೆ ವಾಪಸ್ ತೆರಳುತ್ತಿದ್ದ ವೇಳೆ, ಕೂಗೇನಹಳ್ಳಿ ಗೇಟ್ ಬಳಿ ಹಿಂಬದಿಯಿಂದ ಬಂದ ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದ ದಂಪತಿ ಮೃತಪಟ್ಟಿದ್ದಾರೆ.

ಘಟನೆ ದೊಡ್ಡಬೆಳವಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಮಹಿಳೆ ಹತ್ಯೆ: ಇಬ್ಬರಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು, ಸೆ. 30: ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ 47 ವರ್ಷದ ಸೀತಾ ಎಂಬ ಮಹಿಳೆಯನ್ನು ಅಪಹರಿಸಿ, ಸೈನೇಡ್ ನೀಡಿ ಕೊಲೆ ಮಾಡಿದ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ಬೆಂಗಳೂರಿನ 60ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಗರಿಷ್ಠ ಶಿಕ್ಷೆ ಹಾಗೂ ತಲಾ 30,000 ದಂಡ ವಿಧಿಸಿ ತೀರ್ಪು ನೀಡಿದೆ.

ಆಂಧ್ರಪ್ರದೇಶದ ಆಂಧ್ರ ಮೂಲದ ಎಸ್. ನೂರ್ ಅಹ್ಮದ್ ಹಾಗೂ ಸತ್ಯನಾರಾಯಣ (ಸತ್ಯ) ಶಿಕ್ಷೆಗೆ ಗುರಿಯಾದ ಅಪರಾಧಿಗಳು. ಪ್ರಕರಣದ ಮತ್ತಿಬ್ಬರು ಆರೋಪಿಗಳಾದ ಮೆಂಟಲ್ ರಘು ಮತ್ತು ಬೆಸ್ತನಾಕುಮಾರ್ ವಿಚಾರಣೆ ಹಂತದಲ್ಲೇ ಮೃತಪಟ್ಟಿದ್ದಾರೆ.

ಮಂತ್ರಾಲಯ ಬಳಿ ಇರುವ 2 ಎಕರೆ ಜಮೀನಿನ ಮಾರಾಟ ಪ್ರಕ್ರಿಯೆಗೆ ಸೀತಾ ಅವರು ಸಹಿ ಹಾಕಲು ಒಪ್ಪಿರಲಿಲ್ಲ. ಇದೇ ದ್ವೇಷದಿಂದ 2021ರ ಮಾರ್ಚ್ 26 ರಂದು ಆಭರಣ ಕೊಡಿಸುವುದಾಗಿ ನಂಬಿಸಿ ಸೀತಾ ಅವರನ್ನು ಕಾರಿನಲ್ಲಿ ಕರೆದೊಯ್ದ ಆರೋಪಿಗಳು, ಮಾರ್ಗಮಧ್ಯೆ ಸೈನೇಡ್ ಮಿಶ್ರಿತ ಮಾತ್ರೆ ನೀಡಿ ಕೊಲೆ ಮಾಡಿದ್ದರು. ಬಳಿಕ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಮೃತದೇಹವನ್ನು ಬಳ್ಳಾರಿ/ಹೊಸಪೇಟೆ ಭಾಗದ ಕಾಲುವೆಗೆ ಎಸೆದಿದ್ದರು.

ಶವ ಸಿಗದಿದ್ದರೂ ಸಾಬೀತಾದ ಅಪರಾಧ:ಪ್ರಕರಣದ ತನಿಖೆ ನಡೆಸಿದ ಸುಬ್ರಹ್ಮಣ್ಯನಗರ ಪೊಲೀಸರು ಟೋಲ್ ಪ್ಲಾಜಾ ಸಿಸಿಟಿವಿ ದೃಶ್ಯಾವಳಿ, ಮೊಬೈಲ್ ಸಿಡಿಆರ್ ಮತ್ತು ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಆಧರಿಸಿ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಸಂತ್ರಸ್ತೆಯ ಮೃತದೇಹ ಪತ್ತೆಯಾಗದಿದ್ದರೂ, ಸರ್ಕಾರಿ ಅಭಿಯೋಜಕಿ ಶೈಲಜಾ ಕೃಷ್ಣನಾಯಕ್ ಮಂಡಿಸಿದ ಬಲವಾದ ತಾಂತ್ರಿಕ ಹಾಗೂ ಪಾರಂಪರಿಕ ಸಾಕ್ಷ್ಯಗಳನ್ನು ಪರಿಗಣಿಸಿದ ನ್ಯಾಯಾಧೀಶ ಮಲ್ಲಿಕಾರ್ಜುನ ಸ್ವಾಮಿ ಎಚ್.ಎಸ್. ಅವರು ಸುದೀರ್ಘ ತೀರ್ಪು ಪ್ರಕಟಿಸಿ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

# ಅಡುಗೆ ಎಣ್ಣೆ ಮರುಬಳಕೆಗೆ ಹೊಸ ಮಾರ್ಗಸೂಚಿ ಪ್ರಕಟಕ್ಕೆ ಚಿಂತನೆ

ಬೆಂಗಳೂರು, ಸೆ. 30– ಉಪ್ಪು ಮತ್ತು ಸಕ್ಕರೆ ಬಳಕೆಗೆ ಸಂಬಂಧಿಸಿದಂತೆ ಜಾಗೃತಿ ಹಾಗೂ ಮಾರ್ಗಸೂಚಿ ರೂಪಿಸಲು ಮುಂದಾಗಿರುವ ಆರೋಗ್ಯ ಇಲಾಖೆ ಇದೀಗ ಅಡುಗೆ ಎಣ್ಣೆ ಬಳಕೆಯ ಮೇಲೂ ಕಣ್ಣಿಟ್ಟಿದೆ. ಒಂದೇ ಅಡುಗೆ ಎಣ್ಣೆಯನ್ನು ಪದೇಪದೇ ಬಿಸಿ ಮಾಡಿ ಮರುಬಳಕೆ ಮಾಡುವುದರಿಂದ ಉಂಟಾಗಬಹುದಾದ ಆರೋಗ್ಯ ಅಪಾಯಗಳನ್ನು ತಡೆಗಟ್ಟಲು ಸಾರ್ವಜನಿಕರು ಹಾಗೂ ಹೋಟೆಲ್‌ಗಳಿಗಾಗಿ ಹೊಸ ಮಾರ್ಗಸೂಚಿ ರೂಪಿಸುವ ಕುರಿತು ಇಲಾಖೆ ಚಿಂತನೆ ನಡೆಸಿದೆ.

ಹೋಟೆಲ್,ರೆಸ್ಟೋರೆಂಟ್,ಬೇಕರಿ ಸೇರಿದಂತೆ ಆಹಾರ ತಯಾರಿಕಾ ಘಟಕಗಳಲ್ಲಿ ಬಳಸಿದ ಎಣ್ಣೆಯನ್ನು ಹೇಗೆ ಸಂಗ್ರಹಿಸಬೇಕು, ಎಷ್ಟು ಬಾರಿ ಎಣ್ಣೆಯನ್ನು ಮರುಬಳಕೆ ಮಾಡಬಹುದು ಹಾಗೂ ಬಳಕೆಗೆ ಯೋಗ್ಯವಲ್ಲದ ಎಣ್ಣೆಯನ್ನು ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಬಗ್ಗೆ ಸ್ಪಷ್ಟ ನಿಯಮ ರೂಪಿಸುವ ಸಾಧ್ಯತೆ ಇದೆ.

**3 ಬಾರಿಗಿಂತ ಹೆಚ್ಚು ಬಳಕೆ ಬೇಡ :**

ಅಡುಗೆ ಎಣ್ಣೆಯನ್ನು ಪದೇಪದೇ ಬಿಸಿ ಮಾಡುವುದರಿಂದ ಅದರಲ್ಲಿ Total Polar Compounds (TPC) ಪ್ರಮಾಣ ಹೆಚ್ಚಾಗುತ್ತದೆ. TPC ಪ್ರಮಾಣ ಶೇ.25ಕ್ಕಿಂತ ಹೆಚ್ಚಾದ ಎಣ್ಣೆ ಮಾನವ ಬಳಕೆಗೆ ಅಸುರಕ್ಷಿತ ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಒಂದೇ ಎಣ್ಣೆಯನ್ನು ಮೂರು ಬಾರಿಗಿಂತ ಹೆಚ್ಚು ಮರುಬಳಕೆ ಮಾಡದಂತೆ ಮಾರ್ಗಸೂಚಿಯಲ್ಲಿ ಸೂಚಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ.

ಎಣ್ಣೆಯಲ್ಲಿ ನೊರೆ ಕಾಣಿಸಿಕೊಂಡರೆ, ನೀಲಿ ಅಥವಾ ಬೂದು ಬಣ್ಣದ ಹೊಗೆ ಕಾಣಿಸಿಕೊಂಡರೆ ಬಳಕೆ ನಿಲ್ಲಿಸಬೇಕು. ಎಣ್ಣೆ ಕಪ್ಪಾಗುವುದು, ಮಸುಕಾಗುವುದು, ಅದರ ವಾಸನೆ, ಗುಣಮಟ್ಟ ಅಥವಾ ಗಾಢತೆ ಬದಲಾಗುವುದು ಕಂಡುಬಂದರೂ ಅದನ್ನು ತ್ಯಜಿಸುವಂತೆ ಸಾರ್ವಜನಿಕರಿಗೆ ಸೂಚಿಸುವ ಸಾಧ್ಯತೆ ಇದೆ.

**ಮನೆಗಳಲ್ಲೂ ಸಂಗ್ರಹ ವ್ಯವಸ್ಥೆ:**

ಇದುವರೆಗೆ ಹೋಟೆಲ್‌ಗಳು ಹಾಗೂ ಆಹಾರ ಉದ್ಯಮಗಳಿಂದ ಬಳಸಿದ ಅಡುಗೆ ಎಣ್ಣೆ ಸಂಗ್ರಹಿಸುವ ವ್ಯವಸ್ಥೆ ಹೆಚ್ಚು ಗಮನದಲ್ಲಿತ್ತು. ಇದೀಗ ಮನೆಗಳಲ್ಲೂ ಉಳಿಯುವ ಬಳಸಿದ ಅಡುಗೆ ಎಣ್ಣೆಯನ್ನು ಸಂಗ್ರಹಿಸುವ ವ್ಯವಸ್ಥೆ ರೂಪಿಸುವ ಬಗ್ಗೆ ಆರೋಗ್ಯ ಇಲಾಖೆ ಚಿಂತನೆ ನಡೆಸಿದೆ.

ವಾರ್ಡ್ ಅಥವಾ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಬಳಸಿದ ಎಣ್ಣೆ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಿ, ಮನೆಗಳಿಂದ ಸಂಗ್ರಹಿಸಿದ ಎಣ್ಣೆಯನ್ನು ಅಧಿಕೃತ ಏಜೆನ್ಸಿಗಳಿಗೆ ನೀಡುವ ಯೋಜನೆ ರೂಪಿಸುವ ಸಾಧ್ಯತೆ ಇದೆ.

ಬಳಸಿದ ಎಣ್ಣೆಯನ್ನು ಚರಂಡಿ, ಒಳಚರಂಡಿ ಅಥವಾ ಕಸದೊಂದಿಗೆ ಹಾಕದಂತೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶವೂ ಇದೆ. ದೊಡ್ಡಪ್ರಮಾಣದಲ್ಲಿ ಸಂಗ್ರಹವಾಗುವ ಬಳಸಿದ ಅಡುಗೆ ಎಣ್ಣೆಯನ್ನು RUCO (Repurpose Used Cooking Oil) ವ್ಯವಸ್ಥೆಯಡಿ ಅಧಿಕೃತ ಸಂಗ್ರಹ ಏಜೆನ್ಸಿ ಅಥವಾ ಅಗ್ರಿಗೇಟರ್‌ಗಳಿಗೆ ನೀಡುವ ಬಗ್ಗೆ ಮಾರ್ಗಸೂಚಿ ರೂಪಿಸುವ ಚಿಂತನೆ ನಡೆದಿದೆ.

**ಬಯೋಡೀಸೆಲ್‌ಗೆ ಬಳಕೆ**

ಬಳಕೆಗೆ ಯೋಗ್ಯವಲ್ಲದ ಅಡುಗೆ ಎಣ್ಣೆಯನ್ನು ಮತ್ತೆ ಆಹಾರ ತಯಾರಿಕೆಯಲ್ಲಿ ಬಳಸುವ ಬದಲು ಪರ್ಯಾಯ ಬಳಕೆಗೆ ಒತ್ತು ನೀಡಲು ಇಲಾಖೆ ಮುಂದಾಗಿದೆ. ಸಂಗ್ರಹಿಸಿದ ಬಳಸಿದ ಎಣ್ಣೆಯನ್ನು ಬಯೋಫ್ಯುಯೆಲ್ ಅಥವಾ ಬಯೋಡೀಸೆಲ್ ಉತ್ಪಾದನೆಗೆ ಬಳಸುವ ಕುರಿತು ಸಂಬಂಧಿತ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುವ ಉದ್ದೇಶವಿದೆ.

ರಾಜ್ಯದಲ್ಲಿ 2024–25 ಮತ್ತು 2025–26ನೇ ಸಾಲಿನಲ್ಲಿ ಒಟ್ಟು 32.68 ಲಕ್ಷ ಲೀಟರ್ ಬಳಸಿದ ಅಡುಗೆ ಎಣ್ಣೆ ಸಂಗ್ರಹವಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವುದು ಹಾಗೂ ಎಣ್ಣೆ ಮರುಬಳಕೆಯನ್ನು ನಿಯಂತ್ರಿಸುವುದು ಇಲಾಖೆಯ ಉದ್ದೇಶವಾಗಿದೆ.

**ಹೋಟೆಲ್‌ಗಳ ಮೇಲೆ ನಿಗಾ:**

ಹೊಸ ಮಾರ್ಗಸೂಚಿ ಜಾರಿಗೆ ಬಂದರೆ ಹೋಟೆಲ್, ರೆಸ್ಟೋರೆಂಟ್, ಬೇಕರಿ ಹಾಗೂ ಇತರೆ ಆಹಾರ ತಯಾರಿಕಾ ಘಟಕಗಳಲ್ಲಿ ಬಳಸಿದ ಎಣ್ಣೆಯ ನಿರ್ವಹಣೆ ಕುರಿತು ನಿಯಮಿತ ತಪಾಸಣೆಗೆ ಅವಕಾಶ ಕಲ್ಪಿಸುವ ಸಾಧ್ಯತೆ ಇದೆ. ಎಷ್ಟು ಬಾರಿ ಎಣ್ಣೆಯನ್ನು ಮರುಬಳಕೆ ಮಾಡಲಾಗಿದೆ, ಬಳಕೆಯಾದ ಎಣ್ಣೆಯನ್ನು ಎಲ್ಲಿ ವಿಲೇವಾರಿ ಮಾಡಲಾಗಿದೆ ಎಂಬುದರ ದಾಖಲೆಯನ್ನು ನಿರ್ವಹಿಸುವ ವ್ಯವಸ್ಥೆಯನ್ನೂ ತರಲು ಚಿಂತನೆ ನಡೆದಿದೆ.

# ಸಹಾಯಕ ಅಭಿಯಂತರ ಹುದ್ದೆಗೆ ದಾಖಲಾತಿ ಪರಿಶೀಲನೆ

ಬೆಂಗಳೂರು,ಸೆ.30–ಬೆಂಗಳೂರು ಜಲ ಮಂಡಳಿಯು ದಿನಾಂಕ:– 15–11–2025 ಹಾಗೂ 20–05–2026 ರ ನೇರ ನೇಮಕಾತಿ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ "ಬಿ" ದರ್ಜೆಯ ಸಹಾಯಕ ಅಭಿಯಂತರರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುವ ಅಭ್ಯರ್ಥಿಗಳನ್ನು 1:5 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಆಹ್ವಾನಿಸಿದೆ.

ದಾಖಲೆ ಪರಿಶೀಲನೆಯನ್ನು ದಿನಾಂಕ: 12–10–2026 ರಿಂದ 14–10–2026 ರವರೆಗೆ ನಡೆಸಲಾಗುತ್ತದೆ. ಅರ್ಹ ಅಭ್ಯರ್ಥಿಗಳು ತಮಗೆ ನಿಗಧಿಪಡಿಸಿರುವ ದಿನದಂದು ಪೂರಕ ದಾಖಲೆಗಳೊಂದಿಗೆ ಹಾಜರಾಗಲು ಕೋರಿದೆ.

ದಾಖಲೆ ಪರಿಶೀಲನೆಗೆ ಪರಿಗಣಿಸಲಾಗಿರುವ ಅಭ್ಯರ್ಥಿಗಳ ಪಟ್ಟಿ ದಿನಾಂಕ, ಸಮಯ, ಸ್ಥಳ ಮತ್ತಿತರ ಮಾಹಿತಿಗೆ ಮಂಡಳಿಯ ಅಧಿಕೃತ ವೆಬ್ ಸೈಟ್ www.bwssb.gov.inನಲ್ಲಿ ವೀಕ್ಷಿಸಬಹುದಾಗಿದೆ.

# ಕರ್ನಾಟಕದ ಮಾರಾಟಗಾರರಿಗೆ ಹಬ್ಬದ ಸೀಸನ್‌ಗೆ ಸಿದ್ಧತೆ

ಬೆಂಗಳೂರು/ಮೈಸೂರು.ಸೆ30: ಹಬ್ಬದ ಸೀಸನ್‌ಗೂ ಮುನ್ನ ಅಮೆಜಾನ್ ನಲ್ಲಿ ಮಾರಾಟಗಾರರ ಸಂಖ್ಯೆ 20 ಲಕ್ಷ ದಾಟಿದೆ. ಈ ವರ್ಷ 3 ಲಕ್ಷಕ್ಕೂ ಹೆಚ್ಚು ಹೊಸ ಮಾರಾಟಗಾರರು ಸೇರಿದ್ದು, ಕರ್ನಾಟಕದಲ್ಲೇ 88,000ಕ್ಕೂ ಹೆಚ್ಚು ಮಾರಾಟಗಾರರು ಮತ್ತು 22,000ಕ್ಕೂ ಹೆಚ್ಚು ಸ್ಥಳೀಯ ಅಂಗಡಿಗಳು ಮೂಲಕ ಗ್ರಾಹಕರನ್ನು ತಲುಪುತ್ತಿವೆ.

ಮಾರಾಟವನ್ನು ಸುಲಭಗೊಳಿಸಲು ಕಡಿಮೆ ಶುಲ್ಕ, ಎ ಐ ಆಧಾರಿತ ಪರಿಕರಗಳು ಮತ್ತು ಸುಧಾರಿತ ಲಾಜಿಸ್ಟಿಕ್ಸ್ ವ್ಯವಸ್ಥೆಗಳಲ್ಲಿ ಹೂಡಿಕೆ ಮಾಡುತ್ತಿದೆ. 1,000ಕ್ಕಿಂತ ಕಡಿಮೆ ಬೆಲೆಯ 12.5 ಕೋಟಿಗೂ ಹೆಚ್ಚು ಉತ್ಪನ್ನಗಳಿಗೆ ಶೂನ್ಯ ರೆಫರಲ್ ಶುಲ್ಕ ಜಾರಿಯಲ್ಲಿದೆ.

ಬಳಕೆ ವರ್ಷದಿಂದ ವರ್ಷಕ್ಕೆ 7.5 ಪಟ್ಟು ಹೆಚ್ಚಾಗಿದ್ದು, ಂಐ ಆಧಾರಿತ ಜಾಹೀರಾತು ಪರಿಕರಗಳ ಬಳಕೆಯೂ 77% ಏರಿಕೆಯಾಗಿದೆ. ಮತ್ತು ಮುಂತಾದ ಪರಿಕರಗಳು ಉತ್ಪನ್ನ ಆಯ್ಕೆ, ಲಿಸ್ಟಿಂಗ್, ದಾಸ್ತಾನು, ಬೆಲೆ ಮತ್ತು ಜಾಹೀರಾತು ನಿರ್ವಹಣೆಯಲ್ಲಿ ಮಾರಾಟಗಾರರಿಗೆ ನೆರವಾಗುತ್ತಿವೆ.

ಹಬ್ಬದ ಸೀಸನ್‌ಗೆ ಮಾರಾಟಗಾರರನ್ನು ಸಜ್ಜುಗೊಳಿಸಲು ಅಮೆಜಾನ್ ದೇಶದ ವಿವಿಧ ನಗರಗಳಲ್ಲಿ 20ಕ್ಕೂ ಹೆಚ್ಚು ಕಾರ್ಯಾಗಾರಗಳನ್ನು ನಡೆಸುತ್ತಿದೆ. ಜೊತೆಗೆ, ದೇಶಾದ್ಯಂತ ವಿತರಣಾ ಸಾಮರ್ಥ್ಯ ಹೆಚ್ಚಿಸಲು 1.6 ಲಕ್ಷಕ್ಕೂ ಹೆಚ್ಚು ಹಂಗಾಮಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ.

ನಿರ್ದೇಶಕಿ ಅರುಣಾ ದರ್ಯಾನಾನಿ ಅವರ ಪ್ರಕಾರ, ಕಡಿಮೆ ಶುಲ್ಕ, ಎ ಐ ಪರಿಕರಗಳು, ಡೇಟಾ ಆಧಾರಿತ ಒಳನೋಟಗಳು ಮತ್ತು ಬಲವಾದ ಲಾಜಿಸ್ಟಿಕ್ಸ್ ವ್ಯವಸ್ಥೆಯ ಮೂಲಕ ಎಲ್ಲಾ ಗಾತ್ರದ ಉದ್ಯಮಿಗಳಿಗೆ ಅಮೆಜಾನ್ ನಲ್ಲಿ ನಲ್ಲಿ ಮಾರಾಟವನ್ನು ಇನ್ನಷ್ಟು ಸರಳಗೊಳಿಸುವುದು ಕಂಪನಿಯ ಉದ್ದೇಶವಾಗಿದೆ.

ಮೇಲಿನ ಅಂಕಿಅಂಶಗಳು ಮತ್ತು ವಿವರಗಳು ಬಿಡುಗಡೆ ಮಾಡಿರುವ ಮಾಹಿತಿಯನ್ನು ಆಧರಿಸಿವೆ. ನೀಡಿರುವ 'ಪ್ರಿಯಾ ಶರ್ಮಾ' ಉದಾಹರಣೆ ಕಾಲ್ಪನಿಕವಾಗಿದ್ದು, ಅಮೆಜಾನ್ ನಲ್ಲಿ ಮಾರಾಟದಿಂದ ನಿರ್ದಿಷ್ಟ ವ್ಯವಹಾರ ಫಲಿತಾಂಶಗಳ ಖಾತರಿ ಇಲ್ಲ ಎಂದು ಹೇಳಿದ್ದಾರೆ.

# ಎಲ್‌ಡಿಎಲ್ ಕೊಲೆಸ್ಟ್ರಾಲ್: ವೈದ್ಯರನ್ನು ಕೇಳಬೇಕಾದ ೩ ಪ್ರಶ್ನೆಗಳು

ಬೆಂಗಳೂರು.ಸೆ30: ಯುವಜನರಲ್ಲೂ ಹೆಚ್ಚುತ್ತಿರುವ ಎಲ್‌ಡಿಎಲ್ ಅಥವಾ 'ಕೆಟ್ಟ ಕೊಲೆಸ್ಟ್ರಾಲ್' ಹೃದಯದ ಆರೋಗ್ಯಕ್ಕೆ ಮೌನ ಅಪಾಯವಾಗಬಹುದು. ಆರೋಗ್ಯಕರ ಆಹಾರ, ನಿಯಮಿತ ವ್ಯಾಯಾಮವಿದ್ದರೂ ಅನುವಂಶಿಕ ಕಾರಣಗಳು ಸೇರಿದಂತೆ ಹಲವು ಕಾರಣಗಳಿಂದ ಎಲ್‌ಡಿಎಲ್ ಮಟ್ಟ ಹೆಚ್ಚಾಗಬಹುದು. ಹೀಗಾಗಿ 18 ವರ್ಷದಿಂದಲೇ ನಿಯಮಿತ ಲಿಪಿಡ್ ಪ್ರೊಫೈಲ್ ತಪಾಸಣೆ ಮಾಡಿಸಿಕೊಳ್ಳುವಂತೆ ಹೃದ್ರೋಗ ತಜ್ಞರು ಸಲಹೆ ನೀಡುತ್ತಾರೆ.

ಕಾವೇರಿ ಆಸ್ಪತ್ರೆಯ ಹೃದ್ರೋಗ ವಿಭಾಗದ ಮುಖ್ಯಸ್ಥ ಡಾ. ವಿವೇಕ್ ಜಿ. ಅವರ ಪ್ರಕಾರ, ವಯಸ್ಸು, ಫಿಟ್ನೆಸ್ ಮತ್ತು ಉತ್ತಮ ಜೀವನಶೈಲಿ ಮಾತ್ರ ಕೊಲೆಸ್ಟ್ರಾಲ್ ಸುರಕ್ಷಿತ ಮಟ್ಟದಲ್ಲಿದೆ ಎಂಬುದನ್ನು ಖಚಿತಪಡಿಸುವುದಿಲ್ಲ. ಆರಂಭದಲ್ಲೇ ಪತ್ತೆಹಚ್ಚಿದರೆ ಸೂಕ್ತ ನಿರ್ವಹಣೆ ಮತ್ತು ಚಿಕಿತ್ಸೆಯಿಂದ ದೀರ್ಘಕಾಲೀನ ಹೃದಯದ ಆರೋಗ್ಯ ಕಾಪಾಡಿಕೊಳ್ಳಬಹುದು.

ನನ್ನ ಎಲ್‌ಡಿಎಲ್–ಸಿ ಮಟ್ಟ ಎಷ್ಟು ಅಧಿಕ ಎಲ್‌ಡಿಎಲ್ ಸಾಮಾನ್ಯವಾಗಿ ಯಾವುದೇ ಸ್ಪಷ್ಟ ಲಕ್ಷಣ ನೀಡುವುದಿಲ್ಲ. ರಕ್ತ ಪರೀಕ್ಷೆಯ ಮೂಲಕ ನಿಖರ ಮಟ್ಟ ತಿಳಿದುಕೊಳ್ಳುವುದು ಮೊದಲ ಹೆಜ್ಜೆ.

ನಾನು ಗುರಿ ಮಟ್ಟ ತಲುಪಿದ್ದೇನೆಯೇ ಆಹಾರ ನಿಯಂತ್ರಣ ಮತ್ತು ಸಾಮಾನ್ಯ ಔಷಧಿಗಳಿಂದ ಗುರಿ ಸಾಧಿಸಲಾಗದಿದ್ದರೆ ವೈದ್ಯರು ಚಿಕಿತ್ಸೆಯನ್ನು ಬದಲಾಯಿಸಬಹುದು. ಹೆಚ್ಚಿನ ಅಪಾಯದ ಕೆಲವು ರೋಗಿಗಳಿಗೆ ಹಾಗೂ ಆಧಾರಿತ ಚಿಕಿತ್ಸೆಗಳಂತಹ ಮುಂದುವರಿದ ಆಯ್ಕೆಗಳೂ ಲಭ್ಯವಿವೆ.

ತಜ್ಞರ ಸಂದೇಶ: ಕೊಲೆಸ್ಟ್ರಾಲ್ ನಿಯಂತ್ರಣ ಒಂದು ದೀರ್ಘಕಾಲೀನ ಬದ್ಧತೆ. ನಿಯಮಿತ ತಪಾಸಣೆ, ವೈದ್ಯರ ಸಲಹೆ ಮತ್ತು ಅಗತ್ಯ ಚಿಕಿತ್ಸೆಯನ್ನು ನಿರಂತರವಾಗಿ ಪಾಲಿಸುವುದು ಹೃದಯದ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಎಂದು ತಿಳಿಸಿದ್ದಾರೆ.

# ವಿಜಯಪುರದಲ್ಲಿ ಮತ್ತೆ ಭೂಕಂಪನ ಆತಂಕದಲ್ಲಿ ಜನ

ವಿಜಯಪುರ.ಸೆ.30– ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಇಂದು ನಸುಕಿನ 2.04ರ ಸುಮಾರಿಗೆ ಮತ್ತೆ ಭೂಕಂಪನ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.5 ತೀವ್ರತೆ ದಾಖಲಾಗಿದೆ.

ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ(ಕೆಎಸ್‌ಎನ್‌ಡಿಎಂಸಿ) ನೀಡಿರುವ ಮಾಹಿತಿಯಂತೆ, ಬಸವನ ಬಾಗೇವಾಡಿ ಪಟ್ಟಣದ ಈಶಾನ್ಯ ದಿಕ್ಕಿನಲ್ಲಿ ಸುಮಾರು 3.9 ಕಿ.ಮೀ ದೂರದಲ್ಲಿ ಭೂಕಂಪನದ ಕೇಂದ್ರಬಿಂದು ಗುರುತಿಸಲಾಗಿದೆ. ಭೂಮಿಯಿಂದ ಸುಮಾರು 10 ಕಿ.ಮೀ ಆಳದಲ್ಲಿ ಕಂಪನ ಸಂಭವಿಸಿದೆ.

ಇದಕ್ಕೂ ಮೊದಲು ಸೋಮವಾರ ಮಧ್ಯರಾತ್ರಿ 12.26ರ ಸುಮಾರಿಗೆ ತಾಲ್ಲೂಕಿನ ದಿಂಡಿವಾರ ಗ್ರಾಮ ಪಂಚಾಯಿತಿ ಕಚೇರಿಯಿಂದ ಸುಮಾರು 1.1 ಕಿ.ಮೀ ನೈರುತ್ಯ ದಿಕ್ಕಿನಲ್ಲಿ, 10 ಕಿ.ಮೀ ಆಳದಲ್ಲಿ 3.5 ತೀವ್ರತೆಯ ಲಘು ಭೂಕಂಪನ ಸಂಭವಿಸಿತ್ತು.

ಅದೇ ರೀತಿ ಸೆಪ್ಟೆಂಬರ್ 17ರಂದು ನಸುಕಿನ 5.30ರ ಸುಮಾರಿಗೆ ಇಂಗಳೇಶ್ವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಮೀಪ 3.7 ತೀವ್ರತೆಯ ಭೂಕಂಪನ ದಾಖಲಾಗಿತ್ತು.ಒಂದೇ ತಿಂಗಳಲ್ಲಿ ತಾಲ್ಲೂಕಿನಲ್ಲಿ ಮೂರು ಬಾರಿ ಭೂಮಿ ಕಂಪಿಸಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸಿದೆ.

**ತಜ್ಞರ ಅಧ್ಯಯನಕ್ಕೆ ಒತ್ತಾಯ:**

ತಾಲ್ಲೂಕಿನಲ್ಲಿ ಪದೇಪದೇ ಭೂಕಂಪನ ಸಂಭವಿಸುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ಭೂಕಂಪ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ವೈಜ್ಞಾನಿಕ ಅಧ್ಯಯನ ನಡೆಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಭೂಕಂಪನಗಳಿಗೆ ಕಾರಣವೇನು, ಮುಂದಿನ ದಿನಗಳಲ್ಲಿ ಇಂತಹ ಕಂಪನಗಳ ಸಾಧ್ಯತೆ ಇದೆಯೇ ಎಂಬುದರ ಕುರಿತು ತಜ್ಞರು ಸ್ಪಷ್ಟ ಮಾಹಿತಿ ನೀಡಬೇಕು. ಈ ಮೂಲಕ ಸಾರ್ವಜನಿಕರಲ್ಲಿರುವ ಆತಂಕವನ್ನು ನಿವಾರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

# ಎಐ ಇನ್ನು 'ಸೂಪರ್ ಇಂಟೆಲಿಜೆನ್ಸ್: ಟ್ರಂಪ್

ವಾಷಿಂಗ್ಟನ್,ಸೆ.30:ಕೃತಕ ಬುದ್ಧಿಮತ್ತೆಗೆ ಅಮೆರಿಕ ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಇನ್ನು ಮುಂದೆ 'ಸೂಪರ್ ಇಂಟೆಲಿಜೆನ್ಸ್ ಎಂಬ ಪದ ಬಳಕೆಯಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ.






ವಿಶ್ವದ ಪ್ರಮುಖ ತಂತ್ರಜ್ಞಾನ ಕಂಪನಿಗಳ ಮುಖ್ಯಸ್ಥರೊಂದಿಗೆ ಶ್ವೇತಭವನದಲ್ಲಿ ನಡೆದ ಮಹತ್ವದ ಸಭೆಯ ವೇಳೆ ಟ್ರಂಪ್ ಈ ಘೋಷಣೆ ಮಾಡಿದರು. ಎಐ ಸುರಕ್ಷತೆ, ಡೇಟಾ ಸೆಂಟರ್‌ಗಳ ವಿಸ್ತರಣೆ, ಉದ್ಯಮದ ಸ್ವಯಂ ನಿಯಂತ್ರಣ, ರಾಷ್ಟ್ರೀಯ ಭದ್ರತೆ ಸೇರಿದಂತೆ ಹಲವು ವಿಚಾರಗಳು ಸಭೆಯಲ್ಲಿ ಚರ್ಚೆಯಾದವು.'ಎಐ ಎನ್ನುವುದು ಬಹಳ ದೊಡ್ಡ ತಂತ್ರಜ್ಞಾನ. ಬಹುಶಃ ಇದಕ್ಕಿಂತ ದೊಡ್ಡದು ಯಾವುದೂ ಇಲ್ಲ. ಇದು ಇಂಟರ್‌ನೆಟ್‌ಗಿಂತಲೂ ದೊಡ್ಡದು' ಎಂದು ಟ್ರಂಪ್ ಹೇಳಿದರು.

ಸರ್ಕಾರಿ ದಾಖಲೆಗಳಲ್ಲೂ ಎಐ ಬಳಕೆ 'ಆರ್ಟಿಫಿಶಿಯಲ್' ಎಂಬ ಪದ ತಂತ್ರಜ್ಞಾನದ ಸಾಮರ್ಥ್ಯವನ್ನು ಕಡಿಮೆ ತೋರಿಸುತ್ತದೆ ಎಂಬ ಅಭಿಪ್ರಾಯವನ್ನು ಟ್ರಂಪ್ ಈ ಹಿಂದೆ ವ್ಯಕ್ತಪಡಿಸಿದ್ದರು. ಇದೀಗ ಕೇಂದ್ರ ಸರ್ಕಾರದ ಇಲಾಖೆಗಳು ಹಾಗೂ ಏಜೆನ್ಸಿಗಳ ಅಧಿಕೃತ ಪತ್ರವ್ಯವಹಾರ, ಸಾರ್ವಜನಿಕ ಪ್ರಕಟಣೆಗಳು, ನೀತಿ ದಾಖಲೆಗಳು ಮತ್ತು ಇತರ ಕಾನೂನೇತರ ದಾಖಲೆಗಳಲ್ಲಿ 'SuperIntelligence' ಅಥವಾ 'SI' ಪದ ಬಳಸುವಂತೆ ಸೂಚಿಸಲಾಗಿದೆ ಎಂದು ವರದಿಯಾಗಿದೆ.

ಆದರೆ ತಂತ್ರಜ್ಞಾನ ಕ್ಷೇತ್ರದಲ್ಲಿ ಈಗಾಗಲೇ ಪ್ರಚಲಿತದಲ್ಲಿರುವ ಪ್ರತ್ಯೇಕ ಪರಿಕಲ್ಪನೆಯಾಗಿದೆ.** ಮಾನವನ ಬೌದ್ಧಿಕ ಸಾಮರ್ಥ್ಯವನ್ನು ವ್ಯಾಪಕ ಕ್ಷೇತ್ರಗಳಲ್ಲಿ ಮೀರಿಸುವ ಸಾಧ್ಯತೆಯಿರುವ ಭವಿಷ್ಯದ ವ್ಯವಸ್ಥೆಗಳನ್ನು ಸಾಮಾನ್ಯವಾಗಿ ಈ ಪದದಿಂದ ಗುರುತಿಸಲಾಗುತ್ತದೆ. ಹೀಗಾಗಿ ಟ್ರಂಪ್ ಸರ್ಕಾರದ ಹೊಸ ಪದಪ್ರಯೋಗ ಮತ್ತು ಸಂಶೋಧನಾ ಕ್ಷೇತ್ರದಲ್ಲಿನ 'ಸೂಪರ್‌ಇಂಟೆಲಿಜೆನ್ಸ್' ಪರಿಕಲ್ಪನೆ ಒಂದೇ ಅರ್ಥ ಹೊಂದಿಲ್ಲ ಎಂಬುದು ಗಮನಾರ್ಹ.

ಶ್ವೇತಭವನದ ಸಭೆಯಲ್ಲಿ ಟೆಸ್ಲಾ ಮತ್ತು ಸ್ಪೇಸ್‌ಎಕ್ಸ್ ಮುಖ್ಯಸ್ಥ ಎಲಾನ್ ಮಸ್ಕ್, ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್, ಗೂಗಲ್ ಸಿಇಒ ಸುಂದರ್ ಪಿಚೈ, ಎನ್‌ವಿಡಿಯಾ ಸಿಇಒ ಜೆನ್ಸನ್ ಹುವಾಂಗ್ ಸೇರಿದಂತೆ ಪ್ರಮುಖ ತಂತ್ರಜ್ಞಾನ ಉದ್ಯಮಿಗಳು ಪಾಲ್ಗೊಂಡಿದ್ದರು. ಆಂಥ್ರೋಪಿಕ್ ಸಿಇಒ ಡಾರಿಯೊ ಅಮೋಡೈ, ಓಪನ್‌ಎಐ ಅಧ್ಯಕ್ಷ ಗ್ರೆಗ್ ಬ್ರಾಕ್‌ಮನ್, ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೋಸ್, ಮೈಕ್ರೋಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ಮತ್ತು ಎಎಂಡಿ ಸಿಇಒ ಲಿಸಾ ಸು ಸೇರಿದಂತೆ ಹಲವು ಪ್ರಮುಖರು ಸಭೆಗೆ ಸಂಬಂಧಿಸಿದ್ದರು.

ಎಐ ತಂತ್ರಜ್ಞಾನದ ವಿಸ್ತರಣೆಯೊಂದಿಗೆ ಹೆಚ್ಚುತ್ತಿರುವ ಡೇಟಾ ಸೆಂಟರ್‌ಗಳ ಅಗತ್ಯದ ಬಗ್ಗೆಯೂ ಟ್ರಂಪ್ ಮಾತನಾಡಿದರು. ಇಂತಹ ಬೃಹತ್ ಕೇಂದ್ರಗಳು ಸ್ಥಾಪನೆಯಾಗುವ ಸ್ಥಳೀಯ ಸಮುದಾಯಗಳೊಂದಿಗೆ ತಂತ್ರಜ್ಞಾನ ಕಂಪನಿಗಳು ನಿಕಟವಾಗಿ ಕೆಲಸ ಮಾಡಬೇಕು ಎಂದು ಅವರು ಹೇಳಿದರು.

ಕಂಪನಿಗಳು ಸ್ಥಳೀಯ ಸಮುದಾಯಗಳಿಗೆ ಆರ್ಥಿಕ ಹಾಗೂ ಇತರ ರೀತಿಯ ನೆರವು ನೀಡಬೇಕು. ಶಾಲೆಗಳು ಮತ್ತು ಶಿಕ್ಷಕರಿಗೂ ಸಹಾಯ ಮಾಡುವ ಮೂಲಕ ಡೇಟಾ ಸೆಂಟರ್‌ಗಳನ್ನು ಹೊಂದಿರುವ ಪ್ರದೇಶಗಳೊಂದಿಗೆ ಪಾಲುದಾರಿಕೆ ಬೆಳೆಸಬೇಕು ಎಂದು ಟ್ರಂಪ್ ಹೇಳಿದರು.

# ಆಭರಣ ಪ್ರಿಯರಿಗೆ ಸಿಹಿಸುದ್ದಿ ಚಿನ್ನದರ ಭಾರೀ ಇಳಿಕೆ

ಬೆಂಗಳೂರು, ಸೆ. 30– ಆಭರಣ ಪ್ರಿಯರಿಗೆ ಸಿಹಿಸುದ್ದಿ. ಕಳೆದ ಒಂದು ವಾರದಿಂದ ಚಿನ್ನದ ದರದಲ್ಲಿ ಗಣನೀಯ ಇಳಿಕೆ ಕಂಡುಬಂದಿದ್ದು, ಚಿನ್ನ ಖರೀದಿಸಲು ಮುಂದಾಗಿರುವವರಿಗೆ ಕೊಂಚ ನಿರಾಳತೆ ಸಿಕ್ಕಂತಾಗಿದೆ. ಸೆಪ್ಟೆಂಬರ್ 23ರಿಂದ ಸೆಪ್ಟೆಂಬರ್ 30ರವರೆಗೆ 22 ಹಾಗೂ 24 ಕ್ಯಾರೆಟ್ ಚಿನ್ನದ ದರದಲ್ಲಿ ಸತತ ಇಳಿಕೆ ದಾಖಲಾಗಿದೆ.

ಇಂದು 24 ಕ್ಯಾರೆಟ್‌ನ 10 ಗ್ರಾಂ ಚಿನ್ನದ ದರ ಸುಮಾರು 1,48,790 ಇದ್ದರೆ, 22 ಕ್ಯಾರೆಟ್‌ನ 10 ಗ್ರಾಂ ಚಿನ್ನದ ದರ 1,36,400ಕ್ಕೆ ಇಳಿಕೆಯಾಗಿದೆ. ಕಳೆದ ಒಂದು ವಾರದಲ್ಲಿ ಒಟ್ಟಾರೆ ಸುಮಾರು 4 ಸಾವಿರದಿಂದ 5 ಸಾವಿರದವರೆಗೆ ದರ ಕುಸಿತ ಕಂಡುಬಂದಿದೆ.

ಸೆಪ್ಟೆಂಬರ್ 23ರಂದು 22 ಕ್ಯಾರೆಟ್ 10 ಗ್ರಾಂ ಚಿನ್ನ 1,42,200 ಹಾಗೂ 24 ಕ್ಯಾರೆಟ್ ಚಿನ್ನ 1,54,200 ಇತ್ತು. ಸೆಪ್ಟೆಂಬರ್ 24ರಂದು ಕ್ರಮವಾಗಿ 1,40,800 ಹಾಗೂ 1,52,680ಕ್ಕೆ ಇಳಿಕೆಯಾಗಿತ್ತು.

ಸೆಪ್ಟೆಂಬರ್ 25ರಂದು ಕೊಂಚ ಏರಿಕೆ ಕಂಡು 22 ಕ್ಯಾರೆಟ್ ಚಿನ್ನ 1,40,950 ಹಾಗೂ 24 ಕ್ಯಾರೆಟ್ ಚಿನ್ನ 1,52,840ಕ್ಕೆ ತಲುಪಿತ್ತು. ಸೆಪ್ಟೆಂಬರ್ 26ರಂದು ಮತ್ತೆ 1,40,800 ಮತ್ತು 1,52,680ಕ್ಕೆ ಇಳಿಕೆಯಾಯಿತು.

ಸೆಪ್ಟೆಂಬರ್ 27ರಂದು 22 ಕ್ಯಾರೆಟ್ ಚಿನ್ನದ ದರ 1,40,848 ಹಾಗೂ 24 ಕ್ಯಾರೆಟ್ ಚಿನ್ನದ ದರ 1,52,995 ಇತ್ತು. ಆದರೆ ಸೆಪ್ಟೆಂಬರ್ 28ರಿಂದ ಇಳಿಕೆಯ ಪ್ರಮಾಣ ಮತ್ತಷ್ಟು ಹೆಚ್ಚಾಗಿದೆ. ಅಂದು 22 ಕ್ಯಾರೆಟ್ ಚಿನ್ನ 1,38,500 ಹಾಗೂ 24 ಕ್ಯಾರೆಟ್ ಚಿನ್ನ 1,50,170ಕ್ಕೆ ಇಳಿದಿತ್ತು.

ಇದೀಗ ಸೆಪ್ಟೆಂಬರ್ 29/30ರಂದು ಮತ್ತಷ್ಟು ಇಳಿಕೆಯಾಗಿದ್ದು, 22 ಕ್ಯಾರೆಟ್ ಚಿನ್ನ 1,36,400 ಹಾಗೂ 24 ಕ್ಯಾರೆಟ್ ಚಿನ್ನ 1,48,790ಕ್ಕೆ ತಲುಪಿದೆ. ಸೆಪ್ಟೆಂಬರ್ 23ರ ದರಕ್ಕೆ ಹೋಲಿಸಿದರೆ 22 ಕ್ಯಾರೆಟ್‌ನಲ್ಲಿ ಸುಮಾರು 5,800 ಹಾಗೂ 24 ಕ್ಯಾರೆಟ್‌ನಲ್ಲಿ ಸುಮಾರು 5,410 ಇಳಿಕೆಯಾಗಿದೆ.

ಇದೇ ವೇಳೆ ಬೆಳ್ಳಿ ದರವೂ ಗಮನಾರ್ಹ ಮಟ್ಟದಲ್ಲಿದ್ದು, ಪ್ರತಿ ಕೆಜಿಗೆ ಸುಮಾರು 2,39,900ಕ್ಕೆ ಮಾರಾಟವಾಗುತ್ತಿದೆ.

ಚಿನ್ನದ ದರ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಮದುವೆ, ಶುಭಕಾರ್ಯಗಳು ಹಾಗೂ ಹಬ್ಬಗಳಿಗಾಗಿ ಆಭರಣ ಖರೀದಿಸಲು ಯೋಜಿಸಿರುವವರು ಮಾರುಕಟ್ಟೆಯತ್ತ ಮುಖ ಮಾಡುತ್ತಿದ್ದಾರೆ. ಆದರೆ ಚಿನ್ನದ ದರವು ಅಂತರರಾಷ್ಟ್ರೀಯ ಮಾರುಕಟ್ಟೆ, ರೂಪಾಯಿ ಮೌಲ್ಯ ಹಾಗೂ ಇತರೆ ಮಾರುಕಟ್ಟೆ ಅಂಶಗಳಿಗೆ ಅನುಗುಣವಾಗಿ ಪ್ರತಿದಿನ ಬದಲಾಗುವ ಸಾಧ್ಯತೆ ಇರುವುದರಿಂದ, ಖರೀದಿಗೂ ಮುನ್ನ ಸ್ಥಳೀಯ ಆಭರಣ ಮಳಿಗೆಯ ಇಂದಿನ ದರವನ್ನು ಪರಿಶೀಲಿಸುವುದು ಅಗತ್ಯ.

# ನಿವೃತ್ತ ಐಎಎಸ್ ಅಧಿಕಾರಿ ಬರ್ಬರ ಹತ್ಯೆ

ಭೋಪಾಲ್,ಸೆ.30–ಭೋಪಾಲ್‌ನ ರಾತಿಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಸೂರಜ್ ನಗರದಲ್ಲಿರುವ ಅವರ ಮನೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ರಾಕೇಶ್ ಅಗರ್ವಾಲ್ ಅವರನ್ನು ಕತ್ತು ಸೀಳಿ ಕೊಲೆ ಮಾಡಲಾಗಿದೆ. ಮನೆಯೊಳಗೆ ಅವರ ಶವ ಪತ್ತೆಯಾಗಿದೆ. ಅವರ ಕುತ್ತಿಗೆಯಲ್ಲಿ ಹರಿತವಾದ ಆಯುಧದ ಗುರುತುಗಳು ಪತ್ತೆಯಾಗಿವೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ

ಪ್ರಾಥಮಿಕ ತನಿಖೆಯ ಪ್ರಕಾರ ಪೊಲೀಸರು ಮನೆ ಕೆಲಸದಾಕೆಯ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ರಾಕೇಶ್ ಅಗರ್ವಾಲ್ ಸುಮಾರು ಎರಡು ದಿನಗಳ ಹಿಂದೆ ಈ ಸೇವಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದಾಗಿ ವರದಿಯಾಗಿದೆ. ಘಟನೆಯ ನಂತರ ಅವರು ನಾಪತ್ತೆಯಾಗಿದ್ದಾರೆ. ಪೊಲೀಸರು ಆತನಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ., ಕೇವಲ ಎರಡು ದಿನಗಳ ಹಿಂದೆಯಷ್ಟೇ ಕೆಲಸಕ್ಕೆ ಸೇರಿಕೊಂಡಿದ್ದ ಮನೆಗೆಲಸದ ಆಳು ಘಟನೆಯ ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಪರಾರಿಯಾಗಿರುವುದರಿಂದ ಆತನ ಮೇಲೆಯೇ ಪ್ರಮುಖ ಶಂಕೆ ವ್ಯಕ್ತವಾಗಿದೆ. ನಿವೃತ್ತ ಅಧಿಕಾರಿಯು ತಮ್ಮ ಪತ್ನಿಯೊಂದಿಗೆ ವಾಸಿಸುತ್ತಿದ್ದು, ಘಟನೆಯ ಮಾಹಿತಿ ದೊರೆಯುತ್ತಿದ್ದಂತೆಯೇ ಸ್ಥಳಕ್ಕೆ ರತೀಬಾಡ್ ಪೊಲೀಸರು, ವಿಧಿವಿಜ್ಞಾನ ತಜ್ಞರು ಮತ್ತು ಹಿರಿಯ ಅಧಿಕಾರಿಗಳು ಧಾವಿಸಿ ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿ ತನಿಖೆಯನ್ನು ತೀವ್ರಗೊಳಿಸಲಾಗಿದೆ. ಆರೋಪಿ ಕೆಲಸದಾಳು ಪತ್ತೆಗಾಗಿ ಸುತ್ತಮುತ್ತಲ ಸಿಸಿಟಿವಿ ದೃಶ್ಯಾವಳಿಗಳನ್ನು ಜಾಲಾಡಲಾಗುತ್ತಿದ್ದು, ಪೊಲೀಸರ ವಿಶೇಷ ತಂಡಗಳು ವಿವಿಧೆಡೆ ಶೋಧ ಕಾರ್ಯಾಚರಣೆ ಕೈಗೊಂಡಿವೆ.

# ಏರಿಕೆ ಕಂಡ ಷೇರು ವಹಿವಾಟು




ನವದೆಹಲಿ,ಸೆ.30–ಷೇರು ಮಾರುಕಟ್ಟೆಗಳು ಇಂದು ಏರಿಕೆಯೊಂದಿಗೆ ಪ್ರಾರಂಭವಾದವು. ಆರಂಭಿಕ ವಹಿವಾಟಿನಲ್ಲಿ ಸೆನ್ಸೆಕ್ಸ್ 190 ಪಾಯಿಂಟ್‌ಗಳ ಏರಿಕೆಯಾಗಿ 72,733.04 ಕ್ಕೆ ತಲುಪಿದೆ; ನಿಫ್ಟಿ 22 ಪಾಯಿಂಟ್‌ಗಳ ಏರಿಕೆಯಾಗಿ 22,735.20 ಕ್ಕೆ ತಲುಪಿದೆ. ಏಷ್ಯಾದ ಮಾರುಕಟ್ಟೆಗಳು ಏರಿಕೆಯೊಂದಿಗೆ ಪ್ರಾರಂಭವಾದವು. ಆರಂಭಿಕ ವಹಿವಾಟಿನಲ್ಲಿ ಜಪಾನ್‌ನ ನಿಕ್ಕಿ 225 ಶೇ. 1.4 ರಷ್ಟು ಏರಿಕೆ ಕಂಡರೆ, ವಿಶಾಲವಾದ ಟೋಪಿಕ್ಸ್ ಶೇ. 0.6 ರಷ್ಟು ಏರಿಕೆ ಕಂಡಿತು. ದಕ್ಷಿಣ ಕೊರಿಯಾದ ಕೋಸ್ಪಿ ಮತ್ತು ಕೊಸ್ಡಾಕ್ ತಲಾ 1 ರಷ್ಟು ಏರಿಕೆ ಕಂಡವು. ಆಸ್ಟ್ರೇಲಿಯಾದ ಎಸ್ & ಪಿ / ಎಎಸ್‌ಎಕ್ಸ್ 200 ಸ್ವಲ್ಪ ಏರಿಕೆಯೊಂದಿಗೆ ಪ್ರಾರಂಭವಾಯಿತು.

ಬ್ಯಾಂಕಿಂಗ್ ಮತ್ತು ಐಟಿ ರಂಗದ ಪ್ರಮುಖ ಷೇರುಗಳಲ್ಲಿ ವಹಿವಾಟುದಾರರು ಸಕ್ರಿಯವಾಗಿ ಹೂಡಿಕೆ ಮಾಡುತ್ತಿರುವುದು ಈ ಸಕಾರಾತ್ಮಕ ವಾತಾವರಣಕ್ಕೆ ಕಾರಣವಾಗಿದೆ. ಇದೇ ವೇಳೆಗೆ ಪ್ರಾಥಮಿಕ ಮಾರುಕಟ್ಟೆಯೂ ಕಳೆಗಟ್ಟಿದ್ದು, ಸಿವಿಲ್ ಎಂಜಿನಿಯರಿಂಗ್ ಹಾಗೂ ಮೂಲಸೌಕರ್ಯ ವಲಯದ ವಿಶಾಲ್ ನಿರ್ಮಿತಿ ಮತ್ತು ಪ್ರಸಿದ್ಧ ನಿತ್ಯಾಸ್ ಜೆಮ್ಸ್ & ಜ್ಯುವೆಲ್ಲರಿ ಕಂಪನಿಗಳ ಐಪಿಒಗಳು ಇಂದು ಹೂಡಿಕೆದಾರರ ಬಿಡ್ಡಿಂಗ್‌ಗೆ ಅಧಿಕೃತವಾಗಿ ತೆರೆದುಕೊಂಡಿವೆ. ಆಸಕ್ತ ಹೂಡಿಕೆದಾರರು ಅಕ್ಟೋಬರ್ 5 ರವರೆಗೆ ಬಿಡ್ ಸಲ್ಲಿಸಲು ಅವಕಾಶವಿದ್ದು, ತಮ್ಮ ಉದ್ಯಮ ವಿಸ್ತರಣೆಯ ಭಾಗವಾಗಿ ವಿಶಾಲ್ ನಿರ್ಮಿತಿ ಸಂಸ್ಥೆಯು 178 ಕೋಟಿ ಸಂಗ್ರಹಿಸಲು ಮುಂದಾಗಿದ್ದರೆ, ನಿತ್ಯಾಸ್ ಜೆಮ್ಸ್ ಸಂಸ್ಥೆಯು 108 ಕೋಟಿ ಬಂಡವಾಳ ಹೂಡಿಕೆ ಪಡೆಯುವ ಯೋಜನೆಯಲ್ಲಿದೆ. ವಲಯವಾರು ಬೆಳವಣಿಗೆಯ ಆಧಾರದ ಮೇಲೆ ಹೂಡಿಕೆ ಮಾಡಲು ಕಾಯುತ್ತಿದ್ದ ಸಾಂಸ್ಥಿಕ ಹಾಗೂ ಚಿಲ್ಲರೆ ಹೂಡಿಕೆದಾರರಿಗೆ ಈ ಎರಡೂ ಆಕರ್ಷಕ ಐಪಿಒಗಳು ಉತ್ತಮ ಅವಕಾಶವನ್ನು ಒದಗಿಸಿವೆ.

# ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿ ೩೦ ತಂಡಗಳ ಟೈಸ್ ಕಾಪಿ ಬಿಡುಗಡೆ




ಬೆಂಗಳೂರು,ಸೆ.30: ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿರುವ ಅಂತರ ಕಾಲೇಜು ಕ್ರಿಕೆಟ್ ಪಂದ್ಯಾವಳಿಯ ಟ್ರೈಸ್ ಕಾಪಿಯನ್ನು ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ನೇತೃತ್ವದಲ್ಲಿ ಬಿಡುಗಡೆ ಮಾಡಲಾಯಿತು.

ಪಂದ್ಯಾವಳಿಯು ಅಕ್ಟೋಬರ್ 1ರಿಂದ 4ರವರೆಗೆ ನಾಲ್ಕು ದಿನಗಳ ಕಾಲ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ಕೆ.ಜಿ. ಗ್ರೌಂಡ್ ನಲ್ಲಿ ನಡೆಯಲಿದ್ದು, ವಿವಿಧ ಕಾಲೇಜುಗಳ 30 ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಲಿವೆ. ಯುವಜನರಲ್ಲಿ ಕ್ರೀಡಾಸ್ಫೂರ್ತಿ, ಆರೋಗ್ಯಕರ ಸ್ಪರ್ಧಾ ಮನೋಭಾವ ಹಾಗೂ ನಾಯಕತ್ವಗುಣ ಬೆಳೆಸುವ ಆಶಯದಿಂದ ಈ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಈ ವೇಳೆ ಮಾತನಾಡಿದ ಮಂಜುನಾಥ್ ಗೌಡ,ಕ್ರೀಡೆ ಯುವಕರ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ವೃದ್ಧಿಸುವುದರ ಜೊತೆಗೆ ಶಿಸ್ತು,ತಂಡದ ಸಹಕಾರ ಹಾಗೂ ನಾಯಕತ್ವದಂತಹ ಮೌಲ್ಯಗಳನ್ನು ಬೆಳೆಸುವ ಪ್ರಮುಖ ಸಾಧನವಾಗಿದೆ.ಈ ಹಿನ್ನೆಲೆಯಲ್ಲಿ ಯುವ ಕಾಂಗ್ರೆಸ್ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ ಎಂದು ತಿಳಿಸಿದರು.

ಪಂದ್ಯಾವಳಿಯಲ್ಲಿ 2 ಲಕ್ಷಕ್ಕೂ ಅಧಿಕ ಬಹುಮಾನ ಮೊತ್ತ ಇರಲಿದ್ದು,ಯುವ ಕ್ರಿಕೆಟಿಗರು ತಮ್ಮ ಪ್ರತಿಭೆ ಪ್ರದರ್ಶಿಸಲು ಇದು ಉತ್ತಮ ಅವಕಾಶವಾಗಲಿದೆ ಎಂದು ಮಂಜುನಾಥ್ ಗೌಡ ತಿಳಿಸಿದ್ದಾರೆ.

ಈ ವೇಳೆ ಬಿಎಂಟಿಸಿ ಅಧ್ಯಕ್ಷ ಆರಾಧ್ಯ, ಯುವ ಕಾಂಗ್ರೆಸ್ ಸಾಂಸ್ಕೃತಿಕ ಮತ್ತು ಕ್ರೀಡಾ ಘಟಕದ ಅಧ್ಯಕ್ಷ ಭರತ್ ಯಾದವ್ ಜೆ. ಸೇರಿದಂತೆ ಯುವ ಕಾಂಗ್ರೆಸ್ ರಾಜ್ಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹಣಕ್ಕಾಗಿ ಮಗನನ್ನೇ ಅಪಹರಿಸಿದ ತಂದೆ: 55 ಲಕ್ಷಕ್ಕೆ ಬೇಡಿಕೆ

ಮೈಸೂರು, ಸೆ.30:– ಹಣಕ್ಕಾಗಿ ಮಗನನ್ನೇ ಅಪಹರಿಸಿ ಪತ್ನಿಯ ಬಳಿ 55 ಲಕ್ಷ ರೂ. ಬೇಡಿಕೆ ಇಟ್ಟಿದ್ದ ತಂದೆಯನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿ, ಬಾಲಕನನ್ನು ರಕ್ಷಿಸಿದ್ದಾರೆ.

ಕುವೆಂಪುನಗರ ನಿವಾಸಿ ರೋಜಾ ಅವರು ಮೊದಲ ಪತಿಗೆ ವಿಚ್ಛೇದನ ನೀಡಿ, 2023ರಲ್ಲಿ ಕೇರಳ ಮೂಲದ ಶರತ್ ರಾಮ್ ಎಂಬುವರನ್ನು ಎರಡನೇ ಮದುವೆಯಾಗಿದ್ದರು.

ಮೊದಲ ಪತಿಯಿಂದ ಜನಿಸಿದ 11 ವರ್ಷದ ಮಗ ಹೇಮಂತ್ ಗೌಡ ತಾಯಿ ಜೊತೆಯಲ್ಲೇ ವಾಸವಾಗಿದ್ದ. ದಂಪತಿ ನಡುವೆ ಕೌಟುಂಬಿಕ ಕಲಹ ಇದ್ದ ಕಾರಣ

ಸೆ.21ರಂದು ಹೇಮಂತ್ ಗೌಡನನ್ನು ಪುಸಲಾಯಿಸಿ ಕರೆದೊಯ್ದಿದ್ದ ಶರತ್ ರಾಮ್, ಪತ್ನಿ ರೋಜಾಗೆ ಕರೆ ಮಾಡಿ 55 ಲಕ್ಷ ರೂ. ಕೊಟ್ಟರೆ ಮಗನನ್ನು ಬಿಡುವುದಾಗಿ ಬೆದರಿಕೆ ಹಾಕಿದ್ದಾನೆ.

ಈ ಕುರಿತು ರೋಜಾ ನೀಡಿದ ದೂರಿನ ಮೇರೆಗೆ ಕುವೆಂಪುನಗರ ಠಾಣೆಯಲ್ಲಿ ಅಪಹರಣ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಕಾರ್ಯಾಚರಣೆ ನಡೆಸಿ ಬಾಲಕನನ್ನು ರಕ್ಷಿಸಿ, ಆರೋಪಿ ಶರತ್ ರಾಮ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

# ಅವಧಿ ಮೀರಿದ ೩೯ ಲಕ್ಷ ಮೌಲ್ಯದ ಬಿಯರ್ ನಾಶ

ಮೈಸೂರು, ಸೆ.30:– ಮೈಸೂರು ನಗರದ ಕೂರ್ಗಳ್ಳಿಯಲ್ಲಿರುವ ಕೆ.ಎಸ್.ಬಿ.ಸಿ.ಎಲ್ ಲಿಕ್ಕರ್ ಡಿಪೋ ಮೈಸೂರು–1 ಮತ್ತು ಮೈಸೂರು–2 ರಲ್ಲಿ ಸಂಗ್ರಹವಿದ್ದ ಅವಧಿ ಮೀರಿದ ವಿವಿಧ ಬ್ರಾಂಡ್‌ಗಳ ಬಿಯರ್ ಅನ್ನು ಅಬಕಾರಿ ಇಲಾಖೆ ನಾಶಪಡಿಸಿದೆ.



ಮೈಸೂರು ನಗರ ಜಿಲ್ಲೆ ಉಪ ಆಯುಕ್ತರಾದ ವಿವೇಕ್.ಜಿ. ಅಬಕಾರಿ ಅವರ ಆದೇಶದ ಮೇರೆಗೆ, ಅಬಕಾರಿ ಉಪ ಅಧೀಕ್ಷಕರಾದ ವಿಕ್ರಮ್.ಎಲ್.ಬಿ. ಅಬಕಾರಿ ಮತ್ತು ಕೆ.ಎಸ್.ಬಿ.ಸಿ.ಎಲ್ ಲಿಕ್ಕರ್ ಡಿಪೋ ಹಾಗೂ ಅಬಕಾರಿ ಉಪ ಅಧೀಕ್ಷಕರು, ಮೈಸೂರು ಉಪ ವಿಭಾಗದವರ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆಯಿತು.

ಒಟ್ಟು 1927 ಬಾಕ್ಸ್‌ಗಳ (17956.78 ಲೀಟರ್) ಬಿಯರ್ ನಾಶಪಡಿಸಲಾಗಿದ್ದು, ಇದರ ಒಟ್ಟು ಮೌಲ್ಯ 39.44 ಲಕ್ಷ ರೂ. ಎಂದು ಅಂದಾಜಿಸಲಾಗಿದೆ.

ಈ ಸಂದರ್ಭದಲ್ಲಿ ಕೆ.ಎಸ್.ಬಿ.ಸಿ.ಎಲ್ ಮೈಸೂರು–1 ಡಿಪೋದ ಮಳಿಗೆ ವ್ಯವಸ್ಥಾಪಕ ಡಿ.ಕೆ. ವೆಂಕಟೇಶ್, ಮೈಸೂರು–2 ಡಿಪೋದ ವ್ಯವಸ್ಥಾಪಕ ಯೋಗೇಶ್.ಎಂ.ಆರ್, ಡಿಪೋ–1ರ ಅಬಕಾರಿ ನಿರೀಕ್ಷಕಿ ನಂದಿತ ಹಳದನಕರ್, ಡಿಪೋ–2ರ ಅಬಕಾರಿ ನಿರೀಕ್ಷಕಿ ರಾಧಾ.ಎಸ್.ಪಿ, ಮೈಸೂರು ವಲಯ–2ರ ಅಬಕಾರಿ ಉಪ ನಿರೀಕ್ಷಕರಾದ ಚಂದ್ರಶೇಖರ್ ಮತ್ತು ರಾಘವೇಂದ್ರ ಅಪುರಾ, ಇತರೇ ಅಬಕಾರಿ ಸಿಬ್ಬಂದಿ ಹಾಗೂ ಡಿಪೋ ಸಿಬ್ಬಂದಿ ಉಪಸ್ಥಿತರಿದ್ದರು.

# 16 ರಾಜ್ಯಗಳಲ್ಲಿ ಭಾರೀ ಮಳೆ ನಿರೀಕ್ಷೆ

ನವದೆಹಲಿ,ಸೆ.30:–ಚಳಿಗಾಲದ ಆಗಮನಕ್ಕೂ ಮುನ್ನವೇ ದೇಶದ ಹಲವು ಭಾಗಗಳಲ್ಲಿ ಹವಾಮಾನದಲ್ಲಿ ಪ್ರಮುಖ ಬದಲಾವಣೆಗಳಾಗುತ್ತಿದ್ದು, ಇಂದು (ಸೆಪ್ಟೆಂಬರ್ 30) ದೆಹಲಿ, ಉತ್ತರ ಪ್ರದೇಶ ಮತ್ತು ಬಿಹಾರ ಸೇರಿದಂತೆ ಒಟ್ಟು 16 ರಾಜ್ಯಗಳಲ್ಲಿ ಭಾರೀ ಮಳೆ, ಗುಡುಗು ಮತ್ತು ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ನೆಚ್ಚರಿಕೆ ನೀಡಿದೆ. ಬಂಗಾಳಕೊಲ್ಲಿಯಲ್ಲಿ ಬಲವಾದ ಗಾಳಿ ಬೀಸುತ್ತಿರುವುದು ಮತ್ತು ಪಶ್ಚಿಮ ಹಾಗೂ ಉತ್ತರ ಉತ್ತರ ಪ್ರದೇಶದ ಕೆಳ ಉಷ್ಣವಲಯದಲ್ಲಿ ವಾತಾವರಣದ ಪರಿಚಲನೆ ಸಕ್ರಿಯವಾಗಿರುವುದು ಈ ದಿಢೀರ್ ಹವಾಮಾನ ಬದಲಾವಣೆಗೆ ಮುಖ್ಯ ಕಾರಣವಾಗಿದೆ. ಕೆಲವು ಪ್ರದೇಶಗಳಲ್ಲಿ ಗಾಳಿಯ ವೇಗ ಗಂಟೆಗೆ 65 ಕಿಲೋಮೀಟರ್ ತಲುಪಲಿದ್ದು, ಸಿಡಿಲು ಮತ್ತು ಆಲಿಕಲ್ಲು ಮಳೆಯಾಗುವ ಸಾಧ್ಯತೆಯಿರುವುದರಿಂದ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಇಲಾಖೆ ಸೂಚಿಸಿದೆ. ವಿಶೇಷವಾಗಿ ದೆಹಲಿ, ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ, ಕೇರಳ, ಪಂಜಾಬ್, ಛತ್ತೀಸ್‌ಗಢ, ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ, ಜಾರ್ಖಂಡ್, ತೆಲಂಗಾಣ, ಒಡಿಶಾ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮಳೆಯ ಅಬ್ಬರ ಹೆಚ್ಚಿರಲಿದೆ.



ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಗಂಟೆಗೆ 40 ರಿಂದ 50 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯಿದೆ. ಇಲ್ಲಿ ಗರಿಷ್ಠ ತಾಪಮಾನ 33 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ನಿರೀಕ್ಷೆಯಿದ್ದು, ಮಳೆ ಮತ್ತು ಬಲವಾದ ಗಾಳಿಯಿಂದಾಗಿ ಹಲವೆಡೆ ಸಂಚಾರ ವ್ಯವಸ್ಥೆಗೆ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ಇನ್ನೊಂದೆಡೆ, ಉತ್ತರ ಪ್ರದೇಶದ ಬಿಜ್ನೋರ್, ಮಹಾರಾಜ್‌ಗಂಜ್, ಆಗ್ರಾ, ಬಹ್ರೈಚ್, ಮೀರತ್, ಸಿದ್ಧಾರ್ಥನಗರ, ಸಹರಾನ್‌ಪುರ, ಗೋರಖ್‌ಪುರ, ಅಲಿಗಢ ಮತ್ತು ಮಥುರಾ ಜಿಲ್ಲೆಗಳಲ್ಲಿ ಪ್ರತಿಕೂಲ ಹವಾಮಾನದ ವಾತಾವರಣವಿರಲಿದ್ದು, ಗಾಳಿಯ ವೇಗ ಗಂಟೆಗೆ 65 ಕಿಲೋಮೀಟರ್ ತಲುಪಬಹುದು. ರಾಜ್ಯದ ರಾಜಧಾನಿ ಲಕ್ನೋದಲ್ಲಿ ಗರಿಷ್ಠ 32 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 23 ಡಿಗ್ರಿ ಸೆಲ್ಸಿಯಸ್ ತಾಪಮಾನವಿರಲಿದ್ದು, ಒಟ್ಟಾರೆ ಮುಂದಿನ ಕೆಲವು ದಿನಗಳ ಕಾಲ ದೇಶಾದ್ಯಂತ ಮಳೆ ವಾತಾವರಣ ಮುಂದುವರಿಯಲಿದೆ.

# ಪ್ರದೋಷ್ ಮಾಫಿ ಸಾಕ್ಷಿ ಹೇಳಿಕೆ ಮುಂದುವರಿಕೆ

ಬೆಂಗಳೂರು,ಸೆ.30–ರೇಣುಕಾಸ್ವಾಮಿ ಕೊಲೆಪ್ರಕರಣದಲ್ಲಿಮಾಫಿಸಾಕ್ಷಿಯಾಗಿರುವ ಪ್ರದೋಷ್ ಅವರನ್ನು ಪೊಲೀಸರು ಇಂದು ಬಿಗಿ ಭದ್ರತೆಯಲ್ಲಿ ಸಿಟಿ ಸಿವಿಲ್ ಕೋರ್ಟ್‌ಗೆ ಹಾಜರುಪಡಿಸಿದರು.

ಬೆಂಗಳೂರಿನ 59ನೇ ಸಿಸಿಹೆಚ್ ನ್ಯಾಯಾಲಯದಲ್ಲಿ ಪ್ರದೋಷ್ ಮಾಫಿ ಸಾಕ್ಷಿ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಮುಂದುವರಿಯಲಿದೆ.

ಪ್ರಕರಣದ ವಿಚಾರಣೆಯ ವೇಳೆ ಕೋರ್ಟ್ ಕಲಾಪವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ವೀಕ್ಷಿಸಲು ನೀಡಲಾಗಿದ್ದ ಅವಕಾಶವನ್ನು ನ್ಯಾಯಾಲಯ ನಿರ್ಬಂಧಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ನ್ಯಾಯಾಲಯದ ಕಲಾಪದ ವಿಡಿಯೋಗಳನ್ನು ರೆಕಾರ್ಡ್ ಮಾಡಿ, ಹೆಚ್ಚಿನ ವೀಕ್ಷಣೆಗಾಗಿ ಯೂಟ್ಯೂಬ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗುತ್ತಿದೆ ಎಂಬ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕೆಲವು ಯೂಟ್ಯೂಬರ್‌ಗಳು, ಇನ್‌ಫ್ಲುಯೆನ್ಸರ್‌ಗಳು ಹಾಗೂ ದರ್ಶನ್ ಅಭಿಮಾನಿಗಳ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಕೋರ್ಟ್ ಕಲಾಪದ ದೃಶ್ಯಗಳು ಹಾಗೂ ವಿಚಾರಣೆಗೆ ಸಂಬಂಧಿಸಿದ ಮಾಹಿತಿಗಳು ಪ್ರಸಾರವಾಗಿದ್ದವು. ಪ್ರದೋಷ್ ಮಾಫಿ ಸಾಕ್ಷಿ ಹೇಳಿಕೆಗೆ ಸಂಬಂಧಿಸಿದಂತೆಯೂ ವಿಡಿಯೋಗಳು ಪ್ರಸಾರವಾಗಿರುವುದು ನ್ಯಾಯಾಲಯದ ಗಮನಕ್ಕೆ ಬಂದಿದೆ.

ಈ ಹಿನ್ನೆಲೆಯಲ್ಲಿ ಮಾಫಿ ಸಾಕ್ಷಿಯ ಹೇಳಿಕೆ ದಾಖಲಿಸುವ ಪ್ರಕ್ರಿಯೆಯನ್ನು ನ್ಯಾಯಾಲಯ ಇನ್–ಕ್ಯಾಮರಾ ನಡೆಸುತ್ತಿದೆ. ವಿಚಾರಣೆಯ ಗೌಪ್ಯತೆ ಹಾಗೂ ಸಾಕ್ಷಿಯ ಹೇಳಿಕೆಯ ದುರ್ಬಳಕೆ ತಡೆಯುವ ಉದ್ದೇಶದಿಂದ ಕೋರ್ಟ್ ಈ ಕ್ರಮ ಕೈಗೊಂಡಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಸೇರಿದಂತೆ ಹಲವು ಆರೋಪಿಗಳ ವಿರುದ್ಧ ವಿಚಾರಣೆ ನಡೆಯುತ್ತಿದ್ದು, ಪ್ರಕರಣದ ಪ್ರಮುಖ ಬೆಳವಣಿಗೆಯಾಗಿ ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಲಾಗಿದೆ.

# ಗ್ಯಾಸ್ ಸಿಲಿಂಡರ್ ಗಳು ಕಳವು ಆರೋಪಿ ಬಂಧನ

ಬೆಂಗಳೂರು,ಸೆ.30–ಗ್ಯಾಸ್ ಏಜೆನ್ಸಿಯ ವಾಹನದಿಂದ ಗೃಹ ಬಳಕೆಯ ಖಾಲಿ ಸಿಲಿಂಡರ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಇಂದಿರಾನಗರ ಪೊಲೀಸರು ಬಂಧಿಸಿದ್ದಾರೆ.

ಕಸ್ತೂರಿನಗರದ ಜಯಶೀಲನ್ (64)ಬಂಧಿತ ಆರೋಪಿಯಾಗಿದ್ದಾನೆ,ಬಂಧಿತನಿಂದ 2.49 ಲಕ್ಷ ನಗದು ಸೇರಿ 4.41 ಲಕ್ಷ ಮೌಲ್ಯದ 65 ಖಾಲಿ ಗ್ಯಾಸ್ ಸಿಲಿಂಡರ್‌ಗಳು, ಕೃತ್ಯಕ್ಕೆ ಬಳಸಿದ್ದ ಟೆಂಪೋ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ.

ಇಂದಿರಾನಗರ ಗ್ಯಾಸ್ ಏಜೆನ್ಸಿಯೊಂದರಲ್ಲಿ ಡೆಲಿವರಿ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದ ವ್ಯಕ್ತಿ ಆಗಸ್ಟ್ 14ರಂದು ಪೊಲೀಸರಿಗೆ ದೂರು ನೀಡಿದ್ದರು. ಆಗಸ್ಟ್ 13ರಂದು ಸಂಜೆ ಇಂದಿರಾನಗರದ ಡಿಪೋ ಸರ್ವಿಸ್ ರಸ್ತೆಯಲ್ಲಿ ಕಂಪನಿಯ ಗೃಹ ಬಳಕೆಯ ಖಾಲಿ ಸಿಲಿಂಡರ್‌ಗಳನ್ನು ಮಹೀಂದ್ರಾ ಲೋಡ್ ಕಿಂಗ್ ವಾಹನದಲ್ಲಿ ತುಂಬಿಸಿ, ವಾಹನಕ್ಕೆ ಬೀಗ ಹಾಕಲಾಗಿತ್ತು.

ಮರುದಿನ ಬೆಳಗ್ಗೆ ಬಂದು ನೋಡಿದಾಗ ವಾಹನದ ಬೀಗ ಮುರಿದಿದ್ದು, ಅದರಲ್ಲಿದ್ದ 173 ಖಾಲಿ ಸಿಲಿಂಡರ್‌ಗಳ ಪೈಕಿ 74 ಸಿಲಿಂಡರ್‌ಗಳನ್ನು ಅಪರಿಚಿತರು ಕಳವು ಮಾಡಿರುವುದು ಬೆಳಕಿಗೆ ಬಂದಿತ್ತು. ಈ ಕುರಿತು ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ತನಿಖೆ ಕೈಗೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ವಿಚಾರಣೆ ನಡೆಸಿ, ಬಾತ್ಮೀದಾರರಿಂದ ಖಚಿತ ಮಾಹಿತಿ ಸಂಗ್ರಹಿಸಿದ್ದರು. ಸೆಪ್ಟೆಂಬರ್ 11ರಂದು ಪರಪ್ಪನ ಅಗ್ರಹಾರದ ಹೊಸರೋಡ್ ಬಳಿ ಓರ್ವ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಸಿಲಿಂಡರ್ ಕಳವು ಮಾಡಿರುವುದಾಗಿ ಆತ ಒಪ್ಪಿಕೊಂಡಿದ್ದಾನೆ.

ಕಳೆದ ಸೆಪ್ಟೆಂಬರ್ 12ರಂದು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಗಿತ್ತು. ವಿಚಾರಣೆ ವೇಳೆ ಕಳವು ಮಾಡಿದ್ದ ಗ್ಯಾಸ್ ಸಿಲಿಂಡರ್‌ಗಳನ್ನು ತಮಿಳುನಾಡಿನ ಕೃಷ್ಣಗಿರಿಯ ಗ್ಯಾಸ್ ಏಜೆನ್ಸಿಯೊಂದರಲ್ಲಿ ಮಾರಾಟ ಮಾಡಿರುವುದಾಗಿ ಹಾಗೂ ಕೃತ್ಯಕ್ಕೆ ಬಳಸಿದ್ದ ಟೆಂಪೋವನ್ನು ಬೇಗೂರಿನ ವಿನಾಯಕನಗರದ ಖಾಲಿ ಜಾಗದಲ್ಲಿ ನಿಲ್ಲಿಸಿರುವುದಾಗಿ ಮಾಹಿತಿ ನೀಡಿದ್ದಾನೆ.

ಸೆಪ್ಟೆಂಬರ್ 12ರಿಂದ 17ರವರೆಗೆ ನಡೆದ ಕಾರ್ಯಾಚರಣೆಯಲ್ಲಿ ಪೊಲೀಸರು 65 ಖಾಲಿ ಗ್ಯಾಸ್ ಸಿಲಿಂಡರ್‌ಗಳು, ಕೃತ್ಯಕ್ಕೆ ಬಳಸಿದ್ದ ಒಂದು ಟೆಂಪೋ ವಾಹನ ಹಾಗೂ 2.49 ಲಕ್ಷ ನಗದನ್ನು ವಶಪಡಿಸಿಕೊಂಡಿದ್ದಾರೆ.

**ಏಳು ಪ್ರಕರಣಗಳು ಪತ್ತೆ:**

ಆರೋಪಿಯ ಬಂಧನದಿಂದ ಇಂದಿರಾನಗರ ಪೊಲೀಸ್ ಠಾಣೆಯ 3, ಹಲಸೂರು ಠಾಣೆಯ 1, ಜೆ.ಪಿ.ನಗರ ಠಾಣೆಯ 1, ಬಾಗಲೂರು ಠಾಣೆಯ 1 ಹಾಗೂ ತಮಿಳುನಾಡಿನ ಪಡಲಂ ಪೊಲೀಸ್ ಠಾಣೆಯ 1 ಸೇರಿದಂತೆ ಒಟ್ಟು 7 ಗ್ಯಾಸ್ ಸಿಲಿಂಡರ್ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಯನ್ನು ಪೂರ್ವ ವಿಭಾಗದ ಉಪ ಪೊಲೀಸ್ ಆಯುಕ್ತ ಡಾ. ವಿಕ್ರಮ್ ಅಮಟೆ ಮಾರ್ಗದರ್ಶನದಲ್ಲಿ ಇಂದಿರಾನಗರ ಪೊಲೀಸ್ ಇನ್ಸ್‌ಪೆಕ್ಟರ್ ಆನಂದ್ ಎನ್ ಮತ್ತವರ ಸಿಬ್ಬಂದಿ ಕೈಗೊಂಡಿದ್ದರು.

# ಯುನೆಸ್ಕೋ ತಾತ್ಕಾಲಿಕ ಪಟ್ಟಿಗೆ ಭಾರತದ 5 ಹೊಸ ತಾಣಗಳು



ನವದೆಹಲಿ, ಸೆ.30: ಭಾರತದ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಗೆ ಮತ್ತೊಂದು ಮಹತ್ವದ ಮಾನ್ಯತೆ ದೊರೆತಿದ್ದು, ಯುನೆಸ್ಕೋದ ವಿಶ್ವ ಪರಂಪರೆಯ ತಾತ್ಕಾಲಿಕ ಪಟ್ಟಿಗೆ ಐದು ಹೊಸ ತಾಣಗಳು ಸೇರ್ಪಡೆಯಾಗಿವೆ. ಇದರೊಂದಿಗೆ ಭಾರತದ ತಾತ್ಕಾಲಿಕ ಪಟ್ಟಿಯಲ್ಲಿರುವ ತಾಣಗಳ ಸಂಖ್ಯೆ 78ಕ್ಕೆ ಏರಿಕೆ–ಯಾಗಿದೆ.

ಹೊಸ ಸೇರ್ಪಡೆಗಳಲ್ಲಿ ನಾಲ್ಕು ತಾಣಗಳು ಮಧ್ಯಪ್ರದೇಶದಲ್ಲಿವೆ. ಉದಯಗಿರಿ ಗುಹೆಗಳು, ಬಾಘ್ ಗುಹೆಗಳ ವರ್ಣಚಿತ್ರಗಳು, ಚಂಬಲ್ ಕಣಿವೆಯ ದೇವಾಲಯಗಳ ಸಮೂಹ ಹಾಗೂ ಗಿನ್ನೋರ್‌ಗಢ್ ಕೋಟೆ ಪಟ್ಟಿಗೆ ಸೇರಿವೆ. ಐದನೇ ಸೇರ್ಪಡೆಯಾಗಿ ಮಹಾತ್ಮ ಗಾಂಧೀಜಿಯ ಸತ್ಯಾಗ್ರಹದ ಬೆಳವಣಿಗೆಯನ್ನು ದಾಖಲಿಸುವ 'ಸೈಟ್ಸ್ ಆಫ್ ಸತ್ಯಾಗ್ರಹ' ಎಂಬ ಭಾರತ?ದಕ್ಷಿಣ ಆಫ್ರಿಕಾ ಜಂಟಿ ಸರಣಿ ಪ್ರಸ್ತಾವನೆ ಸ್ಥಾನ ಪಡೆದಿದೆ.

ಈ ಬೆಳವಣಿಗೆಯನ್ನು ಸಂಸ್ಕೃತಿ ಸಚಿವಾಲಯದ ಪಿಐಬಿ, ಭಾರತದ ಪರಂಪರೆಗೆ ಹೆಮ್ಮೆಯ ಮೈಲಿಗಲ್ಲು ಎಂದು ಬಣ್ಣಿಸಿದೆ. ಮಧ್ಯಪ್ರದೇಶದಲ್ಲಿರುವ ಉದಯಗಿರಿ ಗುಹೆಗಳು ಗುಪ್ತರ ಕಾಲದ ಪ್ರಮುಖ ಶಿಲಾಕೃತ ಧಾರ್ಮಿಕ ತಾಣವಾಗಿದೆ. ಕ್ರಿ.ಶ. 4ನೇ ಶತಮಾನದ ಅಂತ್ಯದಿಂದ 5ನೇ ಶತಮಾನದ ಆರಂಭದ ಅವಧಿಯಲ್ಲಿ ಗುಪ್ತರ ಆಶ್ರಯದಲ್ಲಿ ಈ ಪ್ರದೇಶ ಅಭಿವೃದ್ಧಿಗೊಂಡಿತ್ತು ಎಂದು ಯುನೆಸ್ಕೋ ದಾಖಲಿಸಿದೆ.

ಇಲ್ಲಿ ಒಟ್ಟು 20 ಗುಹೆಗಳು, ಶಿಲ್ಪ ಫಲಕಗಳು, ಶಾಸನಗಳು, ಸಂಚಾರ ಮಾರ್ಗಗಳು ಮತ್ತು ವಿವಿಧ ಪ್ರಾಚೀನ ಗುರುತುಗಳನ್ನು ಹೊಂದಿರುವ ಬಂಡೆ ಮೇಲ್ಮೈಗಳಿವೆ. ಇಲ್ಲಿನ ಭೌಗೋಳಿಕ ಹಾಗೂ ಜಲವೈಶಿಷ್ಟ್ಯಗಳೂ ಧಾರ್ಮಿಕ ಪರಿಸರದ ಭಾಗವಾಗಿವೆ.

ಬಾಘ್ ಗುಹೆಗಳ ವರ್ಣಚಿತ್ರವಿಂಧ್ಯ ಪರ್ವತಶ್ರೇಣಿಯ ದಕ್ಷಿಣ ಇಳಿಜಾರಿನಲ್ಲಿ ಬಾಘ್ನಿ ನದಿಯ ಸಮೀಪದಲ್ಲಿರುವ ಬಾಘ್ ಗುಹೆಗಳು ಒಂಬತ್ತು ಬೌದ್ಧ ಶಿಲಾಕೃತ ಗುಹೆಗಳ ಸಮೂಹವಾಗಿದೆ.

ಪಶ್ಚಿಮ ಮಧ್ಯಪ್ರದೇಶದಲ್ಲಿರುವ ಈ ಗುಹೆಗಳು ಮುಖ್ಯವಾಗಿ ಬಸಾಲ್ಟ್ ಶಿಲೆಗಳಿಂದ ಕೂಡಿರುವ ಪ್ರದೇಶದ ಮಧ್ಯೆ ಕಂಡುಬರುವ ವಿಶಿಷ್ಟ ಮರಳುಗಲ್ಲಿನ ಶಿಲಾಪ್ರದೇಶದಲ್ಲಿವೆ. ಈ ಭೌಗೋಳಿಕ ಸ್ವರೂಪವೇ ಗುಹೆಗಳ ವಾಸ್ತುಶೈಲಿ ಮತ್ತು ಗೋಡೆ ಚಿತ್ರಗಳ ಸಂರಕ್ಷಣೆಯ ಮೇಲೂ ಪ್ರಭಾವ ಬೀರಿದೆ.

ಗಿನ್ನೋರ್‌ಗಢ್ ಕೋಟೆ ಮಧ್ಯಭಾರತದಲ್ಲಿರುವ ಗಿನ್ನೋರ್‌ಗಢ್ ಕೋಟೆ ಹಿಂದಿನ ರಾಜ್‌ಗೊಂಡ್ ಆಡಳಿತಗಾರರ ಪ್ರಮುಖ ಕೋಟೆ ರಾಜಧಾನಿಯಾಗಿತ್ತು. ಈ ಕೋಟೆಯ ಐತಿಹಾಸಿಕ ಹಾಗೂ ವಾಸ್ತುಶಿಲ್ಪ ಮಹತ್ವವನ್ನು ಪರಿಗಣಿಸಿ ತಾತ್ಕಾಲಿಕ ಪಟ್ಟಿಗೆ ಸೇರಿಸಲಾಗಿದೆ. ಚಂಬಲ್ ಕಣಿವೆಯ ದೇವಾಲಯಗಳ ಸಮೂಹದ ಅಡಿಯಲ್ಲಿ ಮಧ್ಯಪ್ರದೇಶದ ಬಟೇಶ್ವರ, ಪದಾವಳಿ ಮತ್ತು ಕಾಕರ್ಮಠ್ ದೇವಾಲಯ ಸಂಕೀರ್ಣಗಳು ಸೇರಿವೆ. ಈ ಪ್ರದೇಶದ ಪ್ರಾಚೀನ ದೇವಾಲಯ ವಾಸ್ತುಶಿಲ್ಪದ ವೈವಿಧ್ಯವನ್ನು ಈ ತಾಣಗಳು ಪ್ರತಿಬಿಂಬಿಸುತ್ತವೆ. ಹೊಸ ಸೇರ್ಪಡೆಗಳಲ್ಲಿ ವಿಶೇಷ ಗಮನ ಸೆಳೆಯುತ್ತಿರುವುದು ಎಂಬ ಭಾರತದಕ್ಷಿಣ ಆಫ್ರಿಕಾ ಸರಣಿ ಅಂತರರಾಷ್ಟ್ರೀಯ ಪ್ರಸ್ತಾವನೆ.

ಇದರಲ್ಲಿ ಒಟ್ಟು 9 ತಾಣಗಳಿದ್ದು, ಎರಡು ದಕ್ಷಿಣ ಆಫ್ರಿಕಾದಲ್ಲಿದ್ದರೆ, ಏಳು ಭಾರತದಲ್ಲಿವೆ. ದಕ್ಷಿಣ ಆಫ್ರಿಕಾದ ಪೀಟರ್‌ಮ್ಯಾರಿಟ್ಸ್‌ಬರ್ಗ್ ರೈಲು ನಿಲ್ದಾಣ ಮತ್ತು ಫೀನಿಕ್ಸ್ ಸೆಟಲ್‌ಮೆಂಟ್ ಇದರ ಭಾಗವಾಗಿವೆ.

**ಭಾರತದ ಏಳು ತಾಣ**

- ಮಹಾತ್ಮ ಗಾಂಧಿ ಸತ್ಯಾಗ್ರಹ ಸ್ಮಾರಕ
- ಸಬರಮತಿ ಆಶ್ರಮ
- ಮಣಿ ಭವನ ಸಂಕೀರ್ಣ
- ಹರಿಜನ ಸೇವಕ ಸಂಘ ಸಂಕೀರ್ಣ
- ಸೇವಾಗ್ರಾಮ ಆಶ್ರಮ
- ಆಗಾ ಖಾನ್ ಅರಮನೆ
- ಗಾಂಧಿ ಸ್ಮೃತಿ ನಿವಾಸ

ಈ ಒಂಬತ್ತು ತಾಣಗಳು ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಪರಿಕಲ್ಪನೆ ರೂಪುಗೊಂಡ ಹಂತದಿಂದ ಭಾರತಕ್ಕೆ ಮರಳಿದ ನಂತರ ಅದರ ಪ್ರಯೋಗ, ವಿಸ್ತರಣೆ ಮತ್ತು ಸಂಸ್ಥೀಕರಣದ ವಿವಿಧ ಹಂತಗಳನ್ನು ದಾಖಲಿಸುತ್ತವೆ. ಗಾಂಧೀಜಿ 1893ರಿಂದ 1914ರವರೆಗೆ 21 ವರ್ಷ ದಕ್ಷಿಣ ಆಫ್ರಿಕಾದಲ್ಲಿದ್ದರು. ಅಲ್ಲಿನ ಅನುಭವಗಳಿಂದ ರೂಪುಗೊಂಡ ಸತ್ಯಾಗ್ರಹದ ಪರಿಕಲ್ಪನೆ ಬಳಿಕ ಭಾರತದಲ್ಲಿ ವ್ಯಾಪಕ ಜನಾಂದೋಲನದ ರೂಪ ಪಡೆದುಕೊಂಡಿತು.

ಯುನೆಸ್ಕೋದ ವಿಶ್ವ ಪರಂಪರೆ ಪಟ್ಟಿಗೆ ಸೇರುವ ಪ್ರಕ್ರಿಯೆಯಲ್ಲಿ ತಾತ್ಕಾಲಿಕ ಪಟ್ಟಿ ಪ್ರಮುಖ ಆರಂಭಿಕ ಹಂತವಾಗಿದೆ. ಯಾವುದೇ ತಾಣವನ್ನು ವಿಶ್ವಪರಂಪರೆ ಪಟ್ಟಿಗೆ ಪರಿಗಣಿಸುವ ಮೊದಲು ಅದು ಸಂಬಂಧಪಟ್ಟ ದೇಶದ ತಾತ್ಕಾಲಿಕ ಪಟ್ಟಿಯಲ್ಲಿ ಇರಬೇಕು. ಇದೀಗ ಐದು ಹೊಸ ಸೇರ್ಪಡೆಗಳೊಂದಿಗೆ ಭಾರತದ ಯುನೆಸ್ಕೋ ವಿಶ್ವ ಪರಂಪರೆಯ ತಾತ್ಕಾಲಿಕ ಪಟ್ಟಿಯಲ್ಲಿರುವ ತಾಣಗಳ ಸಂಖ್ಯೆ 78ಕ್ಕೆ ತಲುಪಿದೆ. ಇವುಗಳಲ್ಲಿ ನಾಲ್ಕು ತಾಣಗಳು ಮಧ್ಯಪ್ರದೇಶದಲ್ಲಿರುವುದು ಈ ರಾಜ್ಯದ ಐತಿಹಾಸಿಕ ಪರಂಪರೆಗೆ ಮತ್ತಷ್ಟು ಗಮನ ಸೆಳೆದಿದೆ.

# ರಕ್ತದಾನ ಮಾಡಿ ಜೀವ ಉಳಿಸಲು ಕರೆ



ಬೆಂಗಳೂರು, ಸೆ.30–ದಿ ನ್ಯೂ ಟೌನ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ವೈ.ಆರ್.ಶ್ರೀಧರ್ ಆಯ್ಕೆಯಾಗಿದ್ದಾರೆ. ಮುಂದಿನ ಎರಡು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ನೂತನ ಕಾರ್ಯಕಾರಿ ಮಂಡಳಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಉಪಾಧ್ಯಕ್ಷರಾಗಿ ಓಂಕಾರಪ್ಪ ಎಚ್.ವಿ., ಕಾರ್ಯದರ್ಶಿಯಾಗಿ ಕಾಳಪ್ಪ ಎಲ್., ಖಜಾಂಚಿಯಾಗಿ ಕಾಂತರಾಜು ಎನ್., ಜಂಟಿ ಕಾರ್ಯದರ್ಶಿಯಾಗಿ ಸತೀಶ್ ಕೆ. ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಮಧುಸೂದನ್ ಎ.ಎನ್., ದೀಪಕ್ ಎಂ., ಅಶೋಕ್ ಎಸ್.ಕೆ., ಪರಮೇಶ್ ಬಿ.ಆರ್., ರಮೇಶ್ ಸಿ. ಹಾಗೂ ಪ್ರಕಾಶ್ ಜೆ.ಪಿ. ಆಯ್ಕೆಯಾಗಿದ್ದಾರೆ.

ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದ ಶಾಸಕ ಎಸ್.ಆರ್. ವಿಶ್ವನಾಥ್, ಯಲಹಂಕದ ಹಳೆಯ ಹಾಗೂ ಪ್ರತಿಷ್ಠಿತ ನ್ಯೂಟೌನ್ ಕ್ಲಬ್‌ಗೆ ಅನುಭವಸ್ಥರನ್ನೊಳಗೊಂಡ ನೂತನ ಮಂಡಳಿ ಆಯ್ಕೆಯಾಗಿರುವುದು ಸಂತಸದ ವಿಚಾರ ಎಂದರು. ಕ್ಲಬ್‌ಗೆ ಸ್ವಂತ ನಿವೇಶನ ಒದಗಿಸುವ ಬೇಡಿಕೆಗೆ ಸ್ಪಂದಿಸಲಾಗುವುದು. ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿ ಹಂಚಿಕೆಗೆ ಲಭ್ಯವಿರುವ ಸಿಎ ನಿವೇಶನಗಳ ಕುರಿತು ಬಿಡಿಎ ಅಧ್ಯಕ್ಷರು ಹಾಗೂ ಆಯುಕ್ತರಿಗೆ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿದೆ. ನಿಯಮಾನುಸಾರ ಯಲಹಂಕದ ಸಮೀಪವೇ ಕ್ಲಬ್‌ಗೆ ನಿವೇಶನ ಮಂಜೂರು ಮಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದರು.

ಅಧ್ಯಕ್ಷ ವೈ.ಆರ್. ಶ್ರೀಧರ್ ಮಾತನಾಡಿ, ಸದಸ್ಯರ ಬೇಡಿಕೆಗಳಿಗೆ ಆದ್ಯತೆ ನೀಡಿ ಕ್ಲಬ್ ಅನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು. ಮಕ್ಕಳು, ಯುವಕರು ಹಾಗೂ ಮಹಿಳೆಯರಿಗಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕ್ರೀಡೆ, ಸಾಂಸ್ಕೃತಿಕ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಸದಸ್ಯರಿಗೆ ಗುಣಮಟ್ಟದ ಆಹಾರ ಒದಗಿಸುವುದಕ್ಕೂ ಆದ್ಯತೆ ನೀಡಲಾಗುವುದು ಎಂದರು.



ಶಾಸಕರ ಭವನದಲ್ಲಿ ಇಂದು ನಡೆದ ಎಸ್‌ಐಆರ್ ದ್ರೋಹ ಮತ್ತು ಕಣ್ಣೀರ ಕಥನ ಪರಿಶೋಧನಾ ವರದಿ ಬಿಡುಗಡೆ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ, ಮಾಜಿ ಸಂಸದ ಜಯಪ್ರಕಾಶ್ ಹೆಗಡೆ, ಮಾಜಿ ಸಚಿವ ಕಿಮ್ಮನೆ ರತ್ನಾಕರ್, ನಟ ಪ್ರಕಾಶ್ ರೈ ಅವರು ಉಪಸ್ಥಿತರಿದ್ದರು.

# ಮಳೆನೀರು ಹರಿವಿನ ವ್ಯವಸ್ಥೆ ಪರಿಶೀಲಿಸಿದ ಆಯುಕ್ತ ಸುನೀಲ್



ಬೆಂಗಳೂರು, ಸೆ.30: ನಗರದಲ್ಲಿ ಮಳೆ ಮುಂದುವರಿಯುತ್ತಿರುವ ಹಿನ್ನೆಲೆಯಲ್ಲಿ ಮಳೆನೀರು ಹರಿವಿನ ವ್ಯವಸ್ಥೆ ಹಾಗೂ ನೀರು ನಿಲ್ಲುವ ಸಾಧ್ಯತೆಯಿರುವ ಪ್ರದೇಶಗಳನ್ನು ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅವರು ರಾತ್ರಿ ವೇಳೆ ಪರಿಶೀಲಿಸಿದರು.

ಸೆ.29ರ ರಾತ್ರಿ 10ರಿಂದ 12.30ರವರೆಗೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿದ ಅವರು, ರಸ್ತೆ ಬದಿಯ ಚರಂಡಿ, ರಾಜಕಾಲುವೆ ಹಾಗೂ ಮಳೆನೀರು ಹರಿವಿನ ವ್ಯವಸ್ಥೆಯನ್ನು ಪರಿಶೀಲಿಸಿ ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದರು.

ಬಿಇಎಲ್ ಸರ್ಕಲ್‌ನಿಂದ ಹೆಬ್ಬಾಳ ಹೊರ ವರ್ತುಲ ರಸ್ತೆ ಹಾಗೂ ಎಚ್‌ಡಿಸಿ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಚರಂಡಿಗಳನ್ನು ಪರಿಶೀಲಿಸಿದ ಆಯುಕ್ತರು, ಅಗತ್ಯವಿರುವ ಕಡೆ ತಕ್ಷಣ ಸ್ವಚ್ಛತಾ ಕಾರ್ಯ ಕೈಗೊಳ್ಳುವಂತೆ ಸೂಚಿಸಿದರು. ದೇವಿನಗರ ಹಾಗೂ ಭದ್ರಪ್ಪ ಲೇಔಟ್‌ನ ರಾಜಕಾಲುವೆಗಳನ್ನು ಪರಿಶೀಲಿಸಿ, ಮಳೆನೀರು ಯಾವುದೇ ಅಡೆತಡೆಯಿಲ್ಲದೆ ಹರಿದುಹೋಗುವಂತೆ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದರು.

ಹೆಬ್ಬಾಳ ಫ್ಲೈಓವರ್ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ನೀರು ನಿಲ್ಲದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ತುಮಕೂರು ಲೂಪ್‌ನಲ್ಲಿ ನಡೆಯುತ್ತಿರುವ ಡಾಂಬರೀಕರಣ ಕಾಮಗಾರಿಯನ್ನೂ ಪರಿಶೀಲಿಸಿದ ಅವರು, ಕಾಮಗಾರಿಯನ್ನು ಒಂದು ವಾರದೊಳಗೆ ಪೂರ್ಣಗೊಳಿಸುವಂತೆ ಸೂಚಿಸಿದರು.

ಕಾರಿಯಣ್ಣಪಾಳ್ಯ?ವೆಂಕಟರಾಮ್ ಕೆಫೆ ಸರ್ವಿಸ್ ರಸ್ತೆ, ವೀರಣ್ಣಪಾಳ್ಯ, ಥಣಿಸಂದ್ರ, ನಾಗವಾರ ಸರ್ಕಲ್, ಎಚ್‌ಆರ್‌ಬಿಆರ್ ಲೇಔಟ್ ಹಾಗೂ ಹೆಣ್ಣೂರು ಅಂಡರ್‌ಪಾಸ್ ಪ್ರದೇಶಗಳಲ್ಲಿಯೂ ಮಳೆನೀರು ಹರಿವಿನ ವ್ಯವಸ್ಥೆಯನ್ನು ಪರಿಶೀಲಿಸಲಾಯಿತು.

**ತಕ್ಷಣ ಸ್ಪಂದಿಸಲು ಸೂಚನೆ**

ರಸ್ತೆ ಬದಿಯ ಚರಂಡಿ, ಭುಜದ ಚರಂಡಿ ಹಾಗೂ ರಾಜಕಾಲುವೆಗಳನ್ನು ನಿಯಮಿತವಾಗಿ ಸ್ವಚ್ಛವಾಗಿಟ್ಟುಕೊಂಡು ಮಳೆನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು. ನೀರು ನಿಲ್ಲುವ ಸಾಧ್ಯತೆಯಿರುವ ಸ್ಥಳಗಳನ್ನು ಮುಂಚಿತವಾಗಿ ಗುರುತಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಎಂದು ಆಯುಕ್ತರು ಸೂಚಿಸಿದರು.

ಮಳೆ ಸಂದರ್ಭದಲ್ಲಿ ಎಂಜಿನಿಯರ್‌ಗಳು ಹಾಗೂ ಕ್ಷೇತ್ರ ಸಿಬ್ಬಂದಿ ಸ್ಥಳದಲ್ಲೇ ಲಭ್ಯವಿದ್ದು, ನೀರು ನಿಲುಗಡೆ, ಚರಂಡಿ ತಡೆ ಸೇರಿದಂತೆ ಯಾವುದೇ ಸಮಸ್ಯೆ ಎದುರಾದರೆ ತಕ್ಷಣ ಸ್ಥಳಕ್ಕೆ ತೆರಳಿ ಪರಿಹರಿಸಬೇಕು ಎಂದು ನಿರ್ದೇಶಿಸಿದರು.

ರಾತ್ರಿ ಕಾರ್ಯನಿರ್ವಹಿಸುವ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಕ್ಷೇತ್ರ ತಂಡಗಳು ಹಾಗೂ ಸಂಬಂಧಿತ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವಂತೆ ಸೂಚಿಸಿದರು. ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ, ಮಳೆಯಿಂದ ಉಂಟಾಗಬಹುದಾದ ತೊಂದರೆಗಳನ್ನು ಕನಿಷ್ಠಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಕಾರ್ಯಪಾಲಕ ಅಭಿಯಂತರರು ಹಾಗೂ ಪಾಲಿಕೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಚಾಮುಂಡಿ ಬೆಟ್ಟಕ್ಕೆ ಸೂಪರ್ ಸ್ಟಾರ್ ರಜನಿಕಾಂತ್ ಭೇಟಿ



ಮೈಸೂರು, ಸೆ.30:ಸೂಪರ್ ಸ್ಟಾರ್ ರಜನಿಕಾಂತ್ ಅವರು ಇಂದು ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದಿದ್ದಾರೆ.

ಮೈಸೂರಿಗೆ ಆಗಮಿಸಿದ್ದ ರಜನಿಕಾಂತ್, ಬೆಳಗ್ಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ಅರ್ಚಕರು ಅವರಿಗೆ ಕುಂಕುಮ, ಪ್ರಸಾದ ನೀಡಿ ಸ್ವಾಗತಿಸಿದರು.

ಈ ವೇಳೆ ದೇವಾಲಯದ ಆವರಣದಲ್ಲಿ ಅಭಿಮಾನಿಗಳು ನೆರೆದಿದ್ದು, ರಜನಿಕಾಂತ್ ಅವರನ್ನು ಕಂಡು ಜಯಘೋಷ ಹಾಕಿದರು. ಅಭಿಮಾನಿಗಳತ್ತ ಕೈಬೀಸಿ ರಜನಿಕಾಂತ್ ಶುಭ ಹಾರೈಸಿದರು.

ದರ್ಶನದ ಬಳಿಕ ಮಾತನಾಡಿದ ಅವರು, ಚಾಮುಂಡಿ ತಾಯಿಯ ದರ್ಶನದಿಂದ ಮನಸ್ಸಿಗೆ ನೆಮ್ಮದಿ ಸಿಕ್ಕಿದೆ, ನಾಡಿನ ಜನರಿಗೆ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಹೇಳಿದರು.

ಚಾಮುಂಡಿ ಬೆಟ್ಟಕ್ಕೆ ರಜನಿಕಾಂತ್ ಭೇಟಿ ಹಿನ್ನೆಲೆಯಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

# ಇಎಸ್‌ಐಸಿ ಆಸ್ಪತ್ರೆಯಲ್ಲಿ ವಿಶ್ವ ಹೃದಯ ದಿನಾಚರಣೆ



ಬೆಂಗಳೂರು.ಸೆ.30–ರಾಜಾಜಿನಗರದ ಇಎಸ್‌ಐಸಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಪ್ರತಿ ಹೃದಯ ಬಡಿತವೂ ಮಹತ್ವದ್ದು ಎಂಬ ಧ್ಯೇಯವಾಕ್ಯದೊಂದಿಗೆ ವಿಶ್ವಹೃದಯ ದಿನ ಆಚರಿಸಲಾಯಿತು.

ಹೃದಯ ಮತ್ತು ರಕ್ತನಾಳ ಸಂಬಂಧಿತ ಆರೋಗ್ಯ, ಹೃದಯ ಕಾಯಿಲೆಗಳ ತಡೆಗಟ್ಟುವಿಕೆ ಹಾಗೂ ಸಮಯೋಚಿತ ಆರೋಗ್ಯ ತಪಾಸಣೆಯ ಮಹತ್ವವನ್ನು ಕಾರ್ಯಕ್ರಮದಲ್ಲಿ ಪ್ರತಿಪಾದಿಸಲಾಯಿತು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಅಧೀಕ್ಷಕಿ ಡಾ. ವಿಜಯ ಕುಮಾರಿ, ಡೀನ್ ಡಾ. ಜಿತೇಂದ್ರ ಕುಮಾರ್, ಶೈಕ್ಷಣಿಕ ನೋಂದಣಾಧಿಕಾರಿ ಡಾ. ರಘುನಾಥ್, ಉಪ ವೈದ್ಯಕೀಯ ಅಧೀಕ್ಷಕ ಡಾ. ಶಾಂತಿನಿ, ಡಾ. ದೀಪಕ್ ಹಾಗೂ ಡಾ. ವೀರೇಂದ್ರ, ಜಂಟಿ ನಿರ್ದೇಶಕ ಬ್ರಿಜೇಶ್ ಮೀನಾ, ಉಪ ನಿರ್ದೇಶಕ ರಾಮರಾಜ್ ಮೀನಾ, ಸಹಾಯಕ ನಿರ್ದೇಶಕ ಅನುರಾಧಾ ಸುಬ್ರಮಣಿ, ಹೃದಯರೋಗ ವಿಭಾಗದ ಮುಖ್ಯಸ್ಥರಾದ ಡಾ. ಮಂಜುಳಾ, ವಿಧಿ ವಿಜ್ಞಾನ ಔಷಧ ವಿಭಾಗದ ಮುಖ್ಯಸ್ಥರಾದ ಡಾ. ಸಂಗ್ರಾಮ್, ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಕುಬೇರನ್, ಮ್ಯಾಟ್ರನ್‌ಗಳಾದ ಸುಧಾಕರ್ ಮತ್ತು ಮಂಜುನಾಥ್, ಡಾ. ದೀಪ್ತಿ ಮತ್ತು ಡಾ. ಎಂ.ಎಸ್. ಗಿರೀಶ್, ಮಂಜುನಾಥ್, ಚಿರಂಜೀವಿ, ಸಂತೋಷ್ ಇ.ಎಸ್.ಐ.ಸಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಉದ್ಯೋಗಿಗಳು ಉಪಸ್ಥಿತರಿದ್ದರು.

ವೈದ್ಯಕೀಯ ಅಧೀಕ್ಷಕಿ ಡಾ. ವಿಜಯ ಕುಮಾರಿ ಮಾತನಾಡಿ, ಹೃದಯ ಸಂಬಂಧಿತ ಕಾಯಿಲೆಗಳ ಕುರಿತು ಜಾಗೃತಿ ಮೂಡಿಸುವುದು, ಅವುಗಳನ್ನು ತಡೆಗಟ್ಟುವುದು ಹಾಗೂ ಆರಂಭಿಕ ಹಂತದಲ್ಲಿಯೇ ಕಾಯಿಲೆಗಳನ್ನು ಪತ್ತೆಹಚ್ಚಿದರೆ ಹೃದಯ ಸಮಸ್ಯೆಯನ್ನು ನಿಯಂತ್ರಿಸಬಹುದು. ಈ ಬಾರಿಯ ಧ್ಯೇಯವಾಕ್ಯದಂತೆ ಪ್ರತಿಯೊಂದು ಹೃದಯ ಬಡಿತವೂ ಮುಖ್ಯ. ಇದನ್ನು ಕಾಪಾಡಿಕೊಳ್ಳಿ ಎಂದು ಸಲಹೆ ನೀಡಿದರು.

ಡಾ. ರೇಖಾ, ಡಾ. ಪ್ರಶಾಂತ್ ಹಾಗೂ ಪ್ರಿಯದರ್ಶಿನಿ ಅವರು ಹೃದಯ ಕಾಯಿಲೆಗಳು, ಅವುಗಳ ಅಪಾಯದ ಅಂಶಗಳು, ತಡೆಗಟ್ಟುವ ಕ್ರಮಗಳು ಹಾಗೂ ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಲು ಆರೋಗ್ಯಕರ ಜೀವನಶೈಲಿಯ ಮಹತ್ವದ ಕುರಿತು ಮಾಹಿತಿ ನೀಡಿದರು.




ನವದೆಹಲಿಯಲ್ಲಿ ಇಂದು ನಡೆದ 'ನವಿಜ್ಞಾನ 2026' ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿರವರು ಭಾರೀ ಕೈಗಾರಿಕೆಗಳ ಸಚಿವಾಲಯದ ಇಂಡಸ್ಟ್ರಿ ಆಕ್ಸಿಲೇಟರ್ ಯೋಜನೆಯ ವರದಿಯನ್ನು ಬಿಡುಗಡೆ ಮಾಡಿದರು. ಅಧಿಕಾರಿಗಳು ಉಪಸ್ಥಿತರಿದ್ದರು.

# ಆಸ್ತಿ ತೆರಿಗೆ ಬಾಕಿ ವಸೂಲಿಗೆ ಎಐ ಅಸ್ತ್ರ: 35 ಕೋಟಿ ತೆರಿಗೆ ಸಂಗ್ರಹಕ್ಕೆ ದಾರಿ

ಬೆಂಗಳೂರು,ಸೆ.30: ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರನ್ನು ಪತ್ತೆಹಚ್ಚಿ, ಅವರಿಂದ ತೆರಿಗೆ ಪಾವತಿಸುವಂತೆ ಮನವರಿಕೆ ಮಾಡಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಮೊರೆ ಹೋಗಿದೆ.

ತೆರಿಗೆ ಬಾಕಿ ಎಷ್ಟು ಇದೆ, ಯಾವ ವರ್ಷದಿಂದ ಬಾಕಿ ಉಳಿದಿದೆ ಹಾಗೂ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿಸುವುದು ಹೇಗೆ ಎಂಬ ಮಾಹಿತಿ ಇಲ್ಲದೆ ಹಲವು ಆಸ್ತಿ ಮಾಲೀಕರು ವರ್ಷಗಳಿಂದ ತೆ–ರಿಗೆ ಪಾವತಿಸದೆ ಇರುವುದನ್ನು ಮನಗಂಡ ಪಾಲಿಕೆ, ೦ಖ ಧ್ವನಿ ಏಜೆಂಟ್ ಮೂಲಕ ನೇರವಾಗಿ ಕರೆ ಮಾಡಿ ಮಾಹಿತಿ ನೀಡುವ ಅಭಿಯಾನ ನಡೆಸಿದೆ.

ಮಾರ್ಚ್‌ನಿಂದ ಜೂನ್‌ವರೆಗೆ ಹಳೆಯ 198 ವಾರ್ಡ್‌ಗಳ ಪೈಕಿ 64 ವಾರ್ಡ್‌ಗಳಲ್ಲಿ ಈ ಅಭಿಯಾನ ನಡೆದಿದ್ದು, ಒಟ್ಟು 4,54,908 ಕರೆಗಳನ್ನು ಮಾಡಲಾಗಿದೆ. ಈ ಪೈಕಿ 59,604 ಆಸ್ತಿ ಮಾಲೀಕರನ್ನು ಕನ್ನಡ ಭಾಷೆಯಲ್ಲಿ ಸಂಪರ್ಕಿಸಿ ತೆರಿಗೆ ಬಾಕಿ ಹಾಗೂ ಪಾವತಿ ವಿಧಾನಗಳ ಬಗ್ಗೆ ಮಾಹಿತಿ ನೀಡಲಾಗಿದೆ.

**35.11 ಕೋಟಿ ಸಂಗ್ರಹಕ್ಕೆ ದಾರಿ:**

ಎಐ ಕರೆ ಅಭಿಯಾನದ ಪರಿಣಾಮ 26,962 ಆಸ್ತಿ ಮಾಲೀಕರು ತೆರಿಗೆ ಪಾವತಿಸುವುದಾಗಿ ಒಪ್ಪಿಕೊಂಡಿದ್ದಾರೆ. ಇದರಿಂದ ಒಟ್ಟು 35.11 ಕೋಟಿ ಬಾಕಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ.

ಇವರಲ್ಲಿ 10,303 ಮಂದಿ ಪಾವತಿಗೆ ನಿರ್ದಿಷ್ಟ ದಿನಾಂಕವನ್ನು ತಿಳಿಸಿದ್ದಾರೆ. ಮತ್ತಷ್ಟು 5,747 ಮಂದಿ ಶೀಘ್ರದಲ್ಲೇ ತೆರಿಗೆ ಪಾವತಿಸುವುದಾಗಿ ಭರವಸೆ ನೀಡಿದ್ದಾರೆ.

**ಅಧಿಕಾರಿಗಳ ಮೇಲಿನ ಹೊರೆ ಇಳಿಕೆ**

ತೆರಿಗೆ ಬಾಕಿದಾರರನ್ನು ಗುರುತಿಸುವುದಕ್ಕಿಂತ ಅವರನ್ನು ವೈಯಕ್ತಿಕವಾಗಿ ಸಂಪರ್ಕಿಸುವುದು ಪಾಲಿಕೆಗೆ ದೊಡ್ಡ ಸವಾಲಾಗಿತ್ತು. ಲಕ್ಷಾಂತರ ಮಂದಿಗೆ ಕರೆ ಮಾಡಲು ಪ್ರತ್ಯೇಕ ಕಾಲ್ ಸೆಂಟರ್ ಅಗತ್ಯವಿದ್ದು, ಇದರಿಂದ ಸಹಾಯಕ ಕಂದಾಯ ಅಧಿಕಾರಿಗಳ ಸರ್ವೇ ಹಾಗೂ ಫೀಲ್ಡ್ ರಿಕವರಿ ಕಾರ್ಯಕ್ಕೂ ತೊಂದರೆಯಾಗುವ ಸಾಧ್ಯತೆ ಇತ್ತು.

ಎಐ ಮೊದಲ ಹಂತದ ಕರೆಗಳನ್ನು ನಿರ್ವಹಿಸಿದ್ದರಿಂದ ಅಧಿಕಾರಿಗಳು ಹೆಚ್ಚಿನ ಗಮನ ಅಗತ್ಯವಿರುವ ಪ್ರಮುಖ ಪ್ರಕರಣಗಳತ್ತ ಕೇಂದ್ರೀಕರಿಸಲು ಸಾಧ್ಯವಾಗಿದೆ.

**ತಪ್ಪು ದಾಖಲೆಗಳೂ ಪತ್ತೆ**

ಎಐ ಕರೆ ಅಭಿಯಾನದ ವೇಳೆ ಹಲವು ವರ್ಷಗಳಿಂದ ತಪ್ಪಾಗಿ ಉಳಿದಿದ್ದ ದಾಖಲೆಗಳನ್ನೂ ಪರಿಷ್ಕರಿಸಲಾಗಿದೆ.

17,314 ನಿಷ್ಕ್ರಿಯ ಫೋನ್ ಸಂಖ್ಯೆಗಳು ಹಾಗೂ 6,315 ಹಳೆಯ ಆಸ್ತಿ ಮಾಲೀಕರಿಗೆ ಸೇರಿದ ಮೊಬೈಲ್ ಸಂಖ್ಯೆಗಳು ಪತ್ತೆಯಾಗಿವೆ.

ಇದರ ಜತೆಗೆ 4,577 ಆಸ್ತಿಗಳಿಗೆ ಯಾವುದೇ ತೆರಿಗೆ ಬಾಕಿ ಇಲ್ಲ ಎಂಬುದು ದೃಢಪಟ್ಟಿದ್ದು, ಅಂತಹ ಆಸ್ತಿ ಮಾಲೀಕರಿಗೆ ಅನಗತ್ಯ ನೋಟಿಸ್ ನೀಡುವುದನ್ನು ತಪ್ಪಿಸಲಾಗಿದೆ.

**ಸ್ಥಳೀಯ ಸ್ಟಾರ್ಟ್‌ಅಪ್ ನೆರವು;**

ಈ ಎಐ ತಂತ್ರಜ್ಞಾನವನ್ನು ಬೆಂಗಳೂರಿನ ಯುವ ಸ್ಟಾರ್ಟ್‌ಅಪ್ ವೋಕಲ್‌ಲ್ಯಾಬ್ಸ್ ಅಭಿವೃದ್ಧಿಪಡಿಸಿದೆ. ಸಂಸ್ಥೆಯ ಸಂಸ್ಥಾಪಕರಾದ ನೀಲೇಶ್ ಕುಮಾರ್, ಮೃತ್ಯುಂಜಯ್ ದಾಸ್ ಮತ್ತು ರಾಗ್ ಸನಿಲ್ ಅವರು ಐಐಟಿ ಮದ್ರಾಸ್‌ನ ಹಳೆ ವಿದ್ಯಾರ್ಥಿಗಳಾಗಿದ್ದು, ಸ್ಥಳೀಯ ಭಾಷೆ ಹಾಗೂ ಪೌರಾಡಳಿತದ ಅಗತ್ಯಗಳಿಗೆ ಅನುಗುಣವಾಗಿ ತಂತ್ರಜ್ಞಾನವನ್ನು ರೂಪಿಸಿದ್ದಾರೆ.

**ಸಂಭಾಷಣೆ ಹೆಚ್ಚು ಪರಿಣಾಮಕಾರಿ**

"ಸುಸ್ತಿದಾರರು ಯಾರೆಂದು ನಮಗೆ ತಿಳಿದಿದ್ದರೂ, ಒಂದು ತೆರಿಗೆ ಚಕ್ರದೊಳಗೆ ಅವರೊಂದಿಗೆ ಪ್ರತ್ಯೇಕವಾಗಿ, ಮನವರಿಕೆಯಾಗುವಂತೆ ಮತ್ತು ಅವರದೇ ಭಾಷೆಯಲ್ಲಿ ಮಾತನಾಡಲು ತಂತ್ರಜ್ಞಾನದ ನೆರವು ಬೇಕಿತ್ತು. ಅದು ಈಗ ಸಾಧ್ಯವಾಗಿದೆ" ಎಂದು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ.

"ಡಿಮ್ಯಾಂಡ್ ನೋಟಿಸ್ ನಾಗರಿಕರಿಗೆ ಮಾಹಿತಿ ನೀಡುತ್ತದೆ. ಆದರೆ ಸಂಭಾಷಣೆ ಮನವೊಲಿಸುತ್ತದೆ. ಹಲವು ಸುಸ್ತಿದಾರರಿಗೆ ತಮ್ಮ ಬಾಕಿ ಮೊತ್ತ ಎಷ್ಟಿದೆ ಹಾಗೂ ಅದನ್ನು ಆನ್‌ಲೈನ್‌ನಲ್ಲಿ ಎಷ್ಟು ಸರಳವಾಗಿ ಪಾವತಿಸಬಹುದು ಎಂಬುದೇ ತಿಳಿದಿರಲಿಲ್ಲ" ಎಂದು ಅವರು ಹೇಳಿದ್ದಾರೆ.

**ವಂಚಕರ ಕರೆ ಬಗ್ಗೆ ಎಚ್ಚರ:**

ಪಾಲಿಕೆ ಹೆಸರಿನಲ್ಲಿ ಕರೆ ಮಾಡಿ ಫೋನ್ ಮೂಲಕ ಹಣ ಪಾವತಿಸುವಂತೆ ಯಾರಾದರೂ ಕೇಳಿದರೆ ಎಚ್ಚರಿ–ಕೆ ವಹಿಸುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಪಾಲಿಕೆ ಒಟಿಪಿ, ಕಾರ್ಡ್ ಸಂಖ್ಯೆ, ಯುಪಿಐ ಪಿನ್ ಅಥವಾ ಬ್ಯಾಂಕ್ ವಿವರಗಳನ್ನು ಕೇಳುವುದಿಲ್ಲ.

ತೆರಿಗೆ ಪಾವತಿಸಲು ಅಧಿಕೃತ ಆನ್‌ಲೈನ್ ಪೋರ್ಟಲ್ ಬಳಸುವಂತೆ ಅಥವಾ ಸಂಬಂಧಪಟ್ಟ ವಾರ್ಡ್/ಸಹಾಯಕ ಕಂದಾಯ ಅಧಿಕಾರಿ ಕಚೇರಿಯಲ್ಲಿ ಬಾಕಿ ಪಾವತಿಸುವಂತೆ ಪಾಲಿಕೆ ಮನವಿ ಮಾಡಿದೆ.

**ಅಂಕಿ–ಅಂಶ:**

- 4,54,908 – ಒಟ್ಟು ೦ಖ ಕರೆಗಳು
- 59,604 – ಸಂಪರ್ಕಿಸಲಾದ ಆಸ್ತಿ ಮಾಲೀಕರು
- 26,962 – ತೆ–ರಿಗೆ ಪಾವತಿಸುವುದಾಗಿ ಒಪ್ಪಿದವರು
- 35.11 ಕೋಟಿ – ಸಂಗ್ರಹವಾಗಲಿರುವ ಬಾಕಿ
- 10,303 – ಪಾವತಿ ದಿನಾಂಕ ತಿಳಿಸಿದವರು
- 5,747 – ಶೀಘ್ರ ಪಾವತಿ ಭರವಸೆ ನೀಡಿದವರು
- 17,314 – ನಿಷ್ಕ್ರಿಯ ಮೊಬೈಲ್ ಸಂಖ್ಯೆಗಳು ಪತ್ತೆ
- 6,315 – ಹಳೆಯ ಮಾಲೀಕರ ಸಂಖ್ಯೆಗಳು ಪತ್ತೆ
- 4,577 – ಬಾಕಿ ಇಲ್ಲದ ಆಸ್ತಿಗಳು ಪತ್ತೆ.

# ಮೊದಲ ಲೋಕಸಭೆ ಚುನಾವಣೆ: 28 ಲಕ್ಷ ಮಹಿಳೆಯರ ಹೆಸರು ಮತದಾರರ ಪಟ್ಟಿಯಿಂದ ಮಾಯ!

## *'ಪತ್ನಿ, ತಾಯಿ, ಮಗಳು' ಎಂದಷ್ಟೇ ಗುರುತು; *ಹೆಸರು ಹೇಳಲು ನಿರಾಕರಿಸಿದ ಮಹಿಳೆಯರಿಂದ ನೋಂದಣಿ ರದ್ದು

ನವದೆಹಲಿ, ಸೆ.28: ಸ್ವತಂತ್ರ ಭಾರತದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನದ ಹಕ್ಕು ಎಲ್ಲ ವಯಸ್ಕರಿಗೂ ದೊರೆತಿದ್ದರೂ, ಸುಮಾರು 28 ಲಕ್ಷ ಮಹಿಳೆಯರು ಆ ಐತಿಹಾಸಿಕ ಚುನಾವಣೆಯಲ್ಲಿ ಮತ ಚಲಾಯಿಸುವ ಅವಕಾಶದಿಂದ ವಂಚಿತರಾಗಿದ್ದರು. ಇದಕ್ಕೆ ಕಾರಣ ಮತದಾನದ ಹಕ್ಕು ನಿರಾಕರಣೆ ಅಲ್ಲ; ಮತದಾರರ ಪಟ್ಟಿಯಲ್ಲಿ ತಮ್ಮ ಸ್ವಂತ ಹೆಸರನ್ನು ನೋಂದಾಯಿಸಲು ಕೆಲ ಮಹಿಳೆಯರು ನಿರಾಕರಿಸಿದ್ದೇ ಕಾರಣವಾಗಿತ್ತು.

1951–52ರಲ್ಲಿ ನಡೆದ ಮೊದಲ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಚುನಾವಣೆಯ ಸಂದರ್ಭದಲ್ಲಿ ಹಲವು ಮಹಿಳೆಯರನ್ನು ಅವರ ಸ್ವಂತ ಹೆಸರಿನಿಂದ ಗುರುತಿಸುವ ಬದಲು 'ಅಮೂಕನ ಪತ್ನಿ', 'ಅಮೂಕನ ತಾಯಿ', 'ಅಮೂಕನ ಮಗಳು' ಅಥವಾ 'ಅಮೂಕನ ವಿಧವೆ' ಎಂದು ದಾಖಲಿಸಲಾಗಿತ್ತು. ಬ್ರಿಟಿಷರ ಕಾಲದಿಂದಲೂ ಕೆಲವು ಪ್ರದೇಶಗಳಲ್ಲಿ ಇಂತಹ ಪದ್ಧತಿ ಚಾಲ್ತಿಯಲ್ಲಿತ್ತು. ಆದರೆ ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ಮತದಾರನನ್ನೂ ಪ್ರತ್ಯೇಕ ವ್ಯಕ್ತಿಯಾಗಿ ಗುರುತಿಸಬೇಕು ಎಂಬ ನಿಲುವನ್ನು ಮೊದಲ ಮುಖ್ಯ ಚುನಾವಣಾ ಆಯುಕ್ತ ಸುಕುಮಾರ್ ಸೇನ್ ತೆಗೆದು–ಕೊಂಡರು.

### 17 ಕೋಟಿ ಮತದಾರರು, 8 ಕೋಟಿ ಮಹಿಳೆಯರು

1951–52ರ ಚುನಾವಣೆ ಭಾರತದ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಮಹತ್ವದ ಮೈಲುಗಲ್ಲಾಗಿತ್ತು. ಆಗ 21 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ವಯಸ್ಕನಿಗೂ ಮತದಾನದ ಹಕ್ಕು ನೀಡಲಾಗಿತ್ತು. ಸುಮಾರು 17 ಕೋಟಿ ಜನರು ಮತ ಚಲಾಯಿಸಲು ಅರ್ಹರಾಗಿದ್ದು, ಅವರಲ್ಲಿ ಸುಮಾರು 8 ಕೋಟಿ ಮಹಿಳೆಯರಿದ್ದರು.

ಬಡತನ, ಅನಕ್ಷರತೆ ಮತ್ತು ಅಪಾರ ಭೌಗೋಳಿಕ ಸವಾಲುಗಳ ನಡುವೆಯೂ ದೇಶದ ಮೊದಲ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಲು ಚುನಾವಣಾ ವ್ಯವಸ್ಥೆ ಭಾರಿ ಸಿದ್ಧತೆ ನಡೆಸಿತ್ತು. ನದಿಗಳು, ಪರ್ವತಗಳು ಮತ್ತು ಕಾಡು ಪ್ರದೇಶಗಳನ್ನು ದಾಟಿಸಿ ಮತಪೆಟ್ಟಿಗೆಗಳನ್ನು ತಲುಪಿಸುವ ವ್ಯವಸ್ಥೆಯನ್ನೂ ಮಾಡಲಾಗಿತ್ತು.ಆದರೆ ಮತದಾರರ ಪಟ್ಟಿಯ ಸಿದ್ಧತೆಯಲ್ಲಿ ಮಹಿಳೆಯರ ವೈಯಕ್ತಿಕ ಗುರುತಿನ ಪ್ರಶ್ನೆ ದೊಡ್ಡ ಸವಾಲಾಗಿ ಎದುರಾಯಿತು.

### 'ಹೆಸರು ಹೇಳಲು' ಹಿಂಜರಿಕೆ

ಇಸ್ರೇಲಿ ಇತಿಹಾಸಕಾರ ಒರ್ನಿಟ್ ಶಾನಿ ಅವರ ಅಧ್ಯಯನದ ಪ್ರಕಾರ, 1948ರಿಂದಲೇ ಮತದಾರರ ಪಟ್ಟಿಗಳ ಸಿದ್ಧತೆ ಆರಂಭವಾದಾಗ ಉತ್ತರ ಪ್ರದೇಶದ ಆಗಿನ ಯುನೈಟೆಡ್ ಪ್ರಾವಿನ್ಸ್‌ನ ಹಲವು ಜಿಲ್ಲಾಧಿಕಾರಿಗಳು ಮಹಿಳೆಯರ ಹೆಸರು ಪಡೆಯಲು ಎದುರಾದ ಸಮಸ್ಯೆಗಳ ಬಗ್ಗೆ ವರದಿ ಮಾಡಿದ್ದರು.

ಕೆಲ ಮಹಿಳೆಯರು ತಮ್ಮ ಹೆಸರನ್ನು ಹೇಳುವ ಬದಲು 'ಪತ್ನಿ', 'ಮಗಳು' ಅಥವಾ 'ವಿಧವೆ' ಎಂದು ಮಾತ್ರ ದಾಖಲಿಸಲು ಬಯಸಿದ್ದರು. ಸ್ಥಳೀಯ ಸಂಪ್ರದಾಯ ಮತ್ತು ಸಾಮಾಜಿಕ–ಧಾರ್ಮಿಕ ಕಾರಣಗಳಿಂದಾಗಿ ಅಪರಿಚಿತ ಪುರುಷರಿಗೆ ತಮ್ಮ ಹೆಸರು ಹೇಳಲು ಮಹಿಳೆಯರು ಹಿಂಜರಿಯುತ್ತಿದ್ದರು.

ಬ್ರಿಟಿಷರ ಕಾಲದ ಚುನಾವಣಾ ನಿಯಮಗಳು ಕೆಲವು ಸಂದರ್ಭಗಳಲ್ಲಿ ಪತಿ ಅಥವಾ ತಂದೆಯ ಹೆಸರಿನ ಮೂಲಕ ಮಹಿಳೆಯರನ್ನು ಗುರುತಿಸಲು ಅವಕಾಶ ನೀಡಿದ್ದವು. ಆದರೆ ಸ್ವತಂತ್ರ ಭಾರತದಲ್ಲಿ ಈ ಪದ್ಧತಿಯನ್ನು ಮುಂದುವರಿಸಲು ಚುನಾವಣಾ ಅಧಿಕಾರಿಗಳು ಸಮ್ಮತಿಸಲಿಲ್ಲ.

### ಸುಕುಮಾರ್ ಸೇನ್‌ರಿಂದ ಕಠಿಣ ನಿಲುವು

ಮೊದಲ ಮುಖ್ಯ ಚುನಾವಣಾ ಆಯುಕ್ತ ಸುಕುಮಾರ್ ಸೇನ್ ಅವರು ಮಹಿಳೆಯರನ್ನು ಪುರುಷ ಸಂಬಂಧಿಕರ ಹೆಸರಿನ ಮೂಲಕ ಗುರುತಿಸುವ ಪದ್ಧತಿಯನ್ನು 'ಹಿಂದಿನ ಕಾಲದ ವಿಚಿತ್ರ, ಅರ್ಥಹೀನ ಅವಶೇಷ' ಎಂದು ಪರಿಗಣಿಸಿದ್ದರು. ಮಹಿಳೆಯ ಹೆಸರು ಅವರ ಸ್ವಂತ ಗುರುತಿನ ಅವಿಭಾಜ್ಯ ಭಾಗವಾಗಿದ್ದು, ಪತಿ ಅಥವಾ ಮಗನ ಹೆಸರಿನ ವಿಸ್ತರಣೆಯಾಗಿ ಮಾತ್ರ ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಳ್ಳಬಾರದು ಎಂಬುದು ಚುನಾವಣಾ ಆಯೋಗದ ನಿಲುವಾಗಿತ್ತು.

ಹೀಗಾಗಿ ಅಧಿಕಾರಿಗಳಿಗೆ ಮಹಿಳೆಯರ ನಿಜವಾದ ಹೆಸರನ್ನೇ ದಾಖಲಿಸುವಂತೆ ಸೂಚಿಸಲಾಯಿತು. ಹೆಸರು ಹೇಳಲು ನಿರಾಕರಿಸಿದ ಮಹಿಳೆಯರನ್ನು ನೋಂದಾಯಿಸಬಾರದು; ಈಗಾಗಲೇ ಪುರುಷ ಸಂಬಂಧಿಕರ ಹೆಸರಿನ ಮೂಲಕ ದಾಖಲಿಸಿದ್ದರೆ, ಸರಿಪಡಿಸದಿದ್ದಲ್ಲಿ ಆ ನಮೂದನ್ನು ರದ್ದುಪಡಿಸುವಂತೆ ಸೂಚಿಸಲಾಯಿತು.

### ಡಂಗುರ ಸಾರಿಸಿ ಜಾಗೃತಿ

ಮಹಿಳೆಯರನ್ನು ತಮ್ಮ ಹೆಸರಿನಲ್ಲಿ ನೋಂದಾಯಿಸಲು ಕುಟುಂಬಗಳ ಸಹಕಾರ ಪಡೆಯುವುದು ಅಧಿಕಾರಿಗಳಿಗೆ ದೊಡ್ಡ ಸವಾಲಾಗಿತ್ತು. 1948ರ ನವೆಂಬರ್‌ನಲ್ಲಿ ಆಗ್ರಾ ಜಿಲ್ಲಾಧಿಕಾರಿಗೆ ಕಳುಹಿಸಿದ ಪತ್ರದಲ್ಲಿ ಪತ್ರಿಕೆಗಳು, ಸಾರ್ವಜನಿಕ ವೇದಿಕೆಗಳು ಮತ್ತು ಡಂಗುರ ಸಾರುವ ಮೂಲಕ ಜಾಗೃತಿ ಮೂಡಿಸುವಂತೆ ಸಲಹೆ ನೀಡಲಾಗಿತ್ತು. ಮಹಿಳೆಯರೇ ಮನೆಮನೆಗೆ ತೆರಳಿ ಇತರ ಮಹಿಳೆಯರನ್ನು ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಳ್ಳುವಂತೆ ಮನವರಿಕೆ ಮಾಡಿಕೊಡುವ ವ್ಯವಸ್ಥೆಯನ್ನೂ ಪ್ರೋತ್ಸಾಹಿಸಲಾಗಿತ್ತು.

ಬಿಹಾರದಲ್ಲಿ ಇಂತಹ ಅರ್ಜಿಗಳನ್ನು ಸಲ್ಲಿಸಲು ವಿಶೇಷವಾಗಿ ಒಂದು ತಿಂಗಳ ಹೆಚ್ಚುವರಿ ಕಾಲಾವಕಾಶ ನೀಡಲಾಗಿತ್ತು. ಇದರಿಂದ ಆ ರಾಜ್ಯದಲ್ಲಿ ಮತದಾರರ ಪಟ್ಟಿಗಳು ಸಾಕಷ್ಟು ಸುಧಾರಿಸಿದವು. ರಾಜಸ್ಥಾನದಲ್ಲೂ ಹೆಚ್ಚುವರಿ ಕಾಲಾವಕಾಶ ನೀಡಲಾಗಿದ್ದರೂ ಪ್ರತಿಕ್ರಿಯೆ ಕಡಿಮೆಯಾಗಿದ್ದು, ಮಹಿಳೆಯರಿಗೆ ಸಂಬಂಧಿಸಿದ ಹೆಚ್ಚಿನ ಸಂಖ್ಯೆಯ ನಮೂದುಗಳನ್ನು ರದ್ದುಪಡಿಸಬೇಕಾಯಿತು.

### ಮಹಿಳಾ ಸಂಘಟನೆಗಳ ವಿರೋಧ

ಮಹಿಳೆಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವ ಕ್ರಮಕ್ಕೆ ಮಹಿಳಾ ಸಂಘಟನೆಗಳಿಂದಲೂ ಪ್ರಶ್ನೆಗಳು ಎದುರಾದವು. ಜೈಪುರದ ಮಹಿಲಾ ಸಮಿತಿಯ ಅಧ್ಯಕ್ಷೆ ಶಾರ್ದಾ ಭಾರ್ಗವ ಅವರು, ಮಹಿಳೆಯರನ್ನು ಪುರುಷ ಸಂಬಂಧಿಕರ ಹೆಸರಿನ ಮೂಲಕ ಗುರುತಿಸುವ ನಮೂದುಗಳನ್ನು ಅಧಿಕಾರಿಗಳು ಸ್ವೀಕರಿಸಿ,



ಪರಿಶೀಲಿಸಿ, ಮುದ್ರಿಸಿದ ನಂತರ ಅದೇ ಮಹಿಳೆಯರ ಹೆಸರುಗಳನ್ನು ಏಕೆ ತಿರಸ್ಕರಿಸಲಾಗುತ್ತಿದೆ ಎಂದು ಪ್ರಶ್ನಿಸಿದ್ದರು.

ರಾಜಸ್ಥಾನ ಮಹಿಳಾ ಸಂಘದ ಶಾಂತಾ ತ್ರಿವೇದಿ ಅವರು ತಪ್ಪಾಗಿ ದಾಖಲಾಗಿದ್ದ ನೋಂದಣಿಗಳನ್ನು ಸರಿಪಡಿಸಲು ಮನೆಮನೆಗೆ ತೆರಳಿ ಪರಿಶೀಲನೆ ನಡೆಸುವಂತೆ ಒತ್ತಾಯಿಸಿದರು.

1951ರ ಆಗಸ್ಟ್ 2ರಂದು ಅಲ್ವಾರ್‌ನ ಮಹಿಲಾ ಮಂಡಲ್ 'ಫ್ರಾಂಚೈಸ್ ಡೇ' ಆಚರಿಸಿ, ಈಗಾಗಲೇ ಸಲ್ಲಿಸಿದ್ದ ನಮೂದುಗಳನ್ನು ಮಾನ್ಯಗೊಳಿಸುವಂತೆ ಅಥವಾ ಸರ್ಕಾರದ ವೆಚ್ಚದಲ್ಲಿ ನೋಂದಣಿಗಳನ್ನು ಪುನಃಸ್ಥಾಪಿಸುವಂತೆ ಒತ್ತಾಯಿಸಿತು.

### 28 ಲಕ್ಷ ಮಹಿಳೆಯರ ಹೆಸರುಗಳು ರದ್ದು

ಎಲ್ಲ ಪ್ರಯತ್ನಗಳು, ಮನವಿಗಳು ಮತ್ತು ಹೆಚ್ಚುವರಿ ಕಾಲಾವಕಾಶದ ಹೊರತಾಗಿಯೂ ಸುಮಾರು 8 ಕೋಟಿ ಮಹಿಳಾ ಮತದಾರರ ಪೈಕಿ ಸುಮಾರು 28 ಲಕ್ಷ ಮಹಿಳೆಯರು ತಮ್ಮ ಸ್ವಂತ ಹೆಸರಿನಲ್ಲಿ ಮತದಾರರ ಪಟ್ಟಿಯಲ್ಲಿ ದಾಖಲಾಗಲಿಲ್ಲ.

1955ರಲ್ಲಿ ಪ್ರಕಟವಾದ ಮೊದಲ ಸಾರ್ವತ್ರಿಕ ಚುನಾವಣೆಯ ಅಧಿಕೃತ ವರದಿ ಪ್ರಕಾರ, ಇಂತಹ ಪ್ರಕರಣಗಳ ಬಹುಪಾಲು ಬಿಹಾರ, ಯುನೈಟೆಡ್ ಪ್ರಾವಿನ್ಸ್ (ಈಗಿನ ಉತ್ತರ ಪ್ರದೇಶ), ರಾಜಸ್ಥಾನ, ವಿಂಧ್ಯ ಪ್ರದೇಶ ಹಾಗೂ ಮಧ್ಯ ಭಾರತ ಪ್ರದೇಶಗಳಲ್ಲಿ ಕಂಡುಬಂದಿದ್ದವು.

ಸ್ವಂತ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದ ಕಾರಣ ಈ 28 ಲಕ್ಷ ಮಹಿಳೆಯರಿಗೆ 1951–52ರ ಮೊದಲ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಸಾಧ್ಯವಾಗಲಿಲ್ಲ. ಆದರೆ ಅವರನ್ನು ಶಾಶ್ವತವಾಗಿ ಮತದಾನದ ಹಕ್ಕಿನಿಂದ ವಂಚಿಸಲಾಗಿರಲಿಲ್ಲ. ನಂತರದ ಚುನಾವಣೆಗಳಲ್ಲಿ ಅವರು ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಳ್ಳಬಹುದಾಗಿತ್ತು.

### ಸುಕುಮಾರ್ ಸೇನ್ ಮನೆಮನೆಗೆ ಮನವರಿಕೆ

ಕೋಲ್ಕತ್ತಾದ ಶೈಕ್ಷಣಿಕ ಸಂಶೋಧಕ ನಿಲಯ್ ಕುಮಾರ್ ಸಾಹಾ ಅವರ ಅಧ್ಯಯನದ ಪ್ರಕಾರ, ಸುಕುಮಾರ್ ಸೇನ್ ಸ್ವತಃ ಹಲವು ಮಹಿಳೆಯರನ್ನು ಭೇಟಿ ಮಾಡಿ ತಮ್ಮ ಹೆಸರಿನಲ್ಲಿ ನೋಂದಾಯಿಸಿಕೊಳ್ಳುವಂತೆ ಮನವರಿಕೆ ಮಾಡಿದ್ದರು. ಪರಿಣಾಮವಾಗಿ 1957ರ ಎರಡನೇ ಸಾರ್ವತ್ರಿಕ ಚುನಾವಣೆಯ ಮೊದಲು ಸುಮಾರು 28 ಲಕ್ಷ ಮಹಿಳೆಯರಲ್ಲಿ ಶೇ.85ರಷ್ಟು ಮಹಿಳೆಯರು ತಮ್ಮ ಸ್ವಂತ ಹೆಸರಿನಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಯಾದರು.

ಇತಿಹಾಸಕಾರ ರಾಮಚಂದ್ರ ಗುಹಾ ಅವರ ಪ್ರಕಾರ, ಮಹಿಳೆಯರ ಹೆಸರುಗಳನ್ನು ಸಾರ್ವಜನಿಕವಾಗಿ ಬಳಸದೆ ಪುರುಷ ಸಂಬಂಧಿಕರ ಮೂಲಕ ಗುರುತಿಸುವ ಸಾಮಾಜಿಕ ಪದ್ಧತಿಗೆ ಈ ವಿವಾದ ಸವಾಲು ಹಾಕಲಿದೆ ಎಂಬ ದೃಷ್ಟಿಯಿಂದ ಸುಕುಮಾರ್ ಸೇನ್ ಈ ಗದ್ದಲವನ್ನೇ ಒಂದು ರೀತಿಯಲ್ಲಿ 'ಒಳ್ಳೆಯ ಬೆಳವಣಿಗೆ' ಎಂದು ಕಂಡಿದ್ದರು.

1951ರ ಅಕ್ಟೋಬರ್ 9ರಂದು ರಾಜಸ್ಥಾನದ ಭರತ್‌ಪುರದಲ್ಲಿ ತಮ್ಮ ನೋಂದಣಿ ದೋಷಪೂರಿತವಾಗಿದ್ದ ಮಹಿಳೆಯರಿಗೆ ಮುಂದಿನ ಚುನಾವಣೆಯಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳುವ ಭರವಸೆಯನ್ನೂ ಸೇನ್ ನೀಡಿದ್ದರು.

### ಇಂದಿನ ಎಸ್‌ಐಆರ್ ವಿವಾದದ ನಡುವೆ ಮತ್ತೆ ಚರ್ಚೆ

ಸುಮಾರು 75 ವರ್ಷಗಳ ಬಳಿಕ ಮತದಾರರ ಪಟ್ಟಿಯಿಂದ ಅರ್ಹರ ಹೆಸರುಗಳನ್ನು ತೆಗೆದುಹಾಕಲಾಗುತ್ತಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಮತ್ತೆ ಸಾರ್ವಜನಿಕ ಚರ್ಚೆಯ ಕೇಂದ್ರವಾಗಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದ ವಿರುದ್ಧ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಪಕ್ಷಪಾತದ ಆರೋಪಗಳನ್ನು ಮಾಡಿವೆ. ಚುನಾವಣಾ ಆಯುಕ್ತರಾದ ಸುಖ್ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು 10 ತಿಂಗಳ ಅವಧಿಯಲ್ಲಿ ಕನಿಷ್ಠ 14 ಸಂದರ್ಭಗಳಲ್ಲಿ ಕೆಲವು ನಿರ್ಧಾರಗಳು ಮತ್ತು ಆದೇಶಗಳ ಕುರಿತು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು 'ದಿ ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ.

ಆದರೆ ಚುನಾವಣಾ ಆಯೋಗವು ಎಸ್‌ಐಆರ್‌ಗೆ ಸಂಬಂಧಿಸಿದ ಎಲ್ಲ ಆದೇಶಗಳಿಗೂ ಮೂವರು ಚುನಾವಣಾ ಆಯುಕ್ತರ ಅನುಮೋದನೆ ಇತ್ತು ಎಂದು ಸ್ಪಷ್ಟಪಡಿಸಿದೆ. ಫಾರ್ಮ್–6ಕ್ಕೆ ಸಂಬಂಧಿಸಿದ ಹೆಚ್ಚುವರಿ ಘೋಷಣೆಯನ್ನೂ ಆಯೋಗ ಸಮರ್ಥಿಸಿಕೊಂಡಿದೆ.

### ಆಗ ಮತ್ತು ಈಗಎರಡು ವಿಭಿನ್ನ ಸಂದರ್ಭ

1951–52ರ ಘಟನೆ ಮತ್ತು ಇಂದಿನ ಎಸ್‌ಐಆರ್ ವಿವಾದ ಒಂದೇ ರೀತಿಯದ್ದಲ್ಲ ಎಂಬುದನ್ನೂ ವರದಿ ಸ್ಪಷ್ಟಪಡಿಸುತ್ತದೆ.ಆಗಿನ ಸಂದರ್ಭದಲ್ಲಿ ಮಹಿಳೆಯರು ತಮ್ಮ ಹೆಸರುಗಳನ್ನು ನೀಡಲು ಹಿಂಜರಿದ ಪರಿಣಾಮ ಮತದಾರರ ಪಟ್ಟಿಯಲ್ಲಿನ ನಮೂದುಗಳು ರದ್ದಾಗಿದ್ದವು. ಇಂದಿನ ವಿವಾದದಲ್ಲಿ ಅರ್ಹ ಮತದಾರರನ್ನು ಅನ್ಯಾಯವಾಗಿ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂಬ ಆರೋಪಗಳೇ ಕೇಂದ್ರಬಿಂದುವಾಗಿವೆ.

ಮೊದಲ ಚುನಾವಣೆಯ ಅನುಭವವು ಒಂದು ಪ್ರಮುಖ ಅಂಶವನ್ನು ಮುಂದಿಟ್ಟಿತ್ತು?ಪ್ರಜಾಪ್ರಭುತ್ವದಲ್ಲಿ ಮತದಾರನ ಹಕ್ಕು ವೈಯಕ್ತಿಕವಾದದ್ದು; ಆ ಹಕ್ಕಿಗೆ ಆಧಾರವಾಗಿರುವ ಗುರುತೂ ವೈಯಕ್ತಿಕವಾಗಿರಬೇಕು.

### ಮೊದಲ ಚುನಾವಣೆಯ ಕೆಲವು ಪ್ರಮುಖ ಅಂಶಗಳು

1951–52 ಸ್ವತಂತ್ರ ಭಾರತದ ಮೊದಲ ಸಾರ್ವತ್ರಿಕ ಚುನಾವಣೆ

21 ವರ್ಷ ಆಗ ಮತದಾನದ ಕನಿಷ್ಠ ವಯಸ್ಸು

17 ಕೋಟಿ ಒಟ್ಟು ಮತದಾರರು

8 ಕೋಟಿ ಮಹಿಳಾ ಮತದಾರರು

28 ಲಕ್ಷ ಸ್ವಂತ ಹೆಸರಿಲ್ಲದೆ ಮತದಾರರ ಪಟ್ಟಿಯಿಂದ ಹೊರಗುಳಿದ ಮಹಿಳೆಯರು

85% 1957ರ ಚುನಾವಣೆಗೆ ಮುನ್ನ ತಮ್ಮ ಹೆಸರಿನಲ್ಲಿ ಮರುನೋಂದಾಯಿಸಿಕೊಂಡ ಮಹಿಳೆಯರ ಪ್ರಮಾಣ

1950 ಸುಕುಮಾರ್ ಸೇನ್ ಮುಖ್ಯ ಚುನಾವಣಾ ಆಯುಕ್ತರಾದ ವರ್ಷ

1957 ಭಾರತದ ಎರಡನೇ ಸಾರ್ವತ್ರಿಕ ಚುನಾವಣೆ

ಕೃಪೆ ಇಂಡಿಯಾ ಟುಡೇ

---



# ಹಡಗನ್ನೇ ಮುಳುಗಿಸುವ ತಿಮಿಂಗಿಲದ 'ಅಸ್ತ್ರ'!

ಸ್ಪರ್ಮ್ ವೇಲ್ ತಲೆಯಲ್ಲಿರುವ ನಿಗೂಢ ಅಂಗದ ರಹಸ್ಯ ಬಯಲು; 200 ವರ್ಷಗಳ ಹಿಂದೆಯೇ ನಾವಿಕನೊಬ್ಬ ನೀಡಿದ್ದ ಊಹೆಗೆ ವಿಜ್ಞಾನಿಗಳ ಮುದ್ರೆ

ಸಮುದ್ರದ ದೈತ್ಯ ಜೀವಿ ಸ್ಪರ್ಮ್ ವೇಲ್‌ಗಳು ತಮ್ಮ ಗಾತ್ರಕ್ಕಿಂತ ಹಲವು ಪಟ್ಟು ದೊಡ್ಡ ಹಡಗನ್ನೇ ಅಪ್ಪಳಿಸಿ ಮುಳುಗಿಸಬಲ್ಲವೇ? ಎರಡು ಶತಮಾನಗಳಿಂದ ಕುತೂಹಲ ಮೂಡಿಸಿದ್ದ ಈ ಪ್ರಶ್ನೆಗೆ ಇದೀಗ ಹೊಸ ವೈಜ್ಞಾನಿಕ ಅಧ್ಯಯನಗಳು ಉತ್ತರ ನೀಡಿವೆ. ತಿಮಿಂಗಿಲದ ತಲೆಯಲ್ಲಿರುವ ವಿಶಿಷ್ಟ ಕೊಬ್ಬಿನ ಅಂಗವೇ ಅದರ 'ಬ್ಯಾಟರಿಂಗ್ ರಾಮ್'ನಂತೆ ಕೆಲಸ ಮಾಡಬಹುದೆಂಬ 200 ವರ್ಷಗಳ ಹಿಂದಿನ ಊಹೆಗೆ ಇತ್ತೀಚಿನ ಅಧ್ಯಯನಗಳು ಬಲ ತುಂಬಿವೆ.ಈ ರಹಸ್ಯದ ಕೇಂದ್ರಬಿಂದು 1820ರ ನವೆಂಬರ್ 20ರಂದು ನಡೆದ 'ಎಸೆಕ್ಸ್' ಹಡಗು ದುರಂತ. ಈ ಘಟನೆ ನಂತರ ಹರ್ಮನ್ ಮೆಲ್ವಿಲ್ ಅವರ ಪ್ರಸಿದ್ಧ ಮೊಬಿಡಿಕ್ ಮೊಬಿಕ್–ಡಿಕ್ ಕಾದಂಬರಿಗೆ ಸ್ಫೂರ್ತಿಯಾಯಿತು.

### ಎರಡು ಬಾರಿ ಅಪ್ಪಳಿಸಿ ಹಡಗಿಗೆ ಅಂತ್ಯ

ಎಸೆಕ್ಸ್ ಹಡಗಿನಲ್ಲಿದ್ದ 15 ವರ್ಷದ ಥಾಮಸ್ ನಿಕರ್ಸನ್ ಅವರು ಹಲವು ವರ್ಷಗಳ ಬಳಿಕ ಬರೆದ ದಾಖಲೆಯ ಪ್ರಕಾರ, ತಿಮಿಂಗಿಲ ಬೇಟೆಯ ಸಂದರ್ಭದಲ್ಲಿ ಒಂದು ತಿಮಿಂಗಿಲವು ಸಣ್ಣ ದೋಣಿಗೆ ಅಪ್ಪಳಿಸಿ ಹಾನಿಗೊಳಿಸಿತ್ತು. ಸಿಬ್ಬಂದಿ ಮುಖ್ಯ ಹಡಗಿನತ್ತ ಮರಳುತ್ತಿದ್ದಾಗ ಮತ್ತೊಂದು ಬೃಹತ್ ಸ್ಪರ್ಮ್ ವೇಲ್ ವೇಗವಾಗಿ ಎಸೆಕ್ಸ್‌ನತ್ತ ಧಾವಿಸಿತು.

ಮೊದಲ ಅಪ್ಪಳಿಕೆಯಲ್ಲೇ ಸಿಬ್ಬಂದಿ ನೆಲಕ್ಕುರುಳುವಷ್ಟು ಭೀಕರ ಹೊಡೆತ ಬಿದ್ದಿತು. ಬಳಿಕ ತಿಮಿಂಗಿಲ ಸುಮಾರು 270 ಮೀಟರ್ ದೂರಕ್ಕೆ ಈಜಿಕೊಂಡು ಹೋಗಿ, ತಿರುಗಿ, ಮತ್ತಷ್ಟು ವೇಗದಲ್ಲಿ ಹಡಗಿನತ್ತ ಧಾವಿಸಿತು. ಎರಡನೇ ಅಪ್ಪಳಿಕೆಯಲ್ಲಿ ಹಡಗಿನ ಮುಂಭಾಗ ಸಂಪೂರ್ಣವಾಗಿ ಜಖಂಗೊಂಡು ಎಸೆಕ್ಸ್ ಮುಳುಗಿತು.

ಹಡಗಿನಲ್ಲಿ 20 ಮಂದಿ ಇದ್ದರು. ಅವರು ಮೂರು ಸಣ್ಣ ತಿಮಿಂಗಿಲ ಬೇಟೆ ದೋಣಿಗಳಲ್ಲಿ ಪ್ರಾಣ ಉಳಿಸಿಕೊಳ್ಳಲು ಹೊರಟರು. ಅವರು ಭೂಮಿಯಿಂದ ಸುಮಾರು 1,300 ಮೈಲಿ ದೂರದಲ್ಲಿದ್ದರು. ನಂತರ ನಡೆದ ಬದುಕುಳಿಯುವ ಹೋರಾಟ ಸಮುದ್ರ ಇತಿಹಾಸದ ಅತ್ಯಂತ ಭೀಕರ ಘಟನೆಗಳಲ್ಲೊಂದಾಯಿತು.

ಎಸೆಕ್ಸ್‌ನ ಪ್ರಥಮ ಅಧಿಕಾರಿ ಓವನ್ ಚೇಸ್, ತಿಮಿಂಗಿಲದ ತಲೆಯ ಮುಂಭಾಗವೇ ಅದಕ್ಕೆ ಬಲಿಷ್ಠ ಆಯುಧವಾಗಿರಬಹುದು ಎಂದು ಊಹಿಸಿದ್ದರು. ಆದರೆ ಅವರ ಮಾತನ್ನು ದೀರ್ಘಕಾಲ ವಿಜ್ಞಾನಿಗಳು ಗಂಭೀರವಾಗಿ ಪರಿಗಣಿಸಿರಲಿಲ್ಲ.

ವಿಕಾಸ ಜೀವಶಾಸ್ತ್ರಜ್ಞ ಡೇವ್ ಕ್ಯಾರಿಯರ್ 2002ರಲ್ಲಿ ನಡೆಸಿದ ಅಧ್ಯಯನದಲ್ಲಿ ಸ್ಪರ್ಮ್ ವೇಲ್‌ನ ಅಸಾಮಾನ್ಯವಾಗಿ ದೊಡ್ಡ ಮುಂಭಾಗದ ಕೊಬ್ಬಿನ ಅಂಗವು ಬಲಿಷ್ಠ ಅಪ್ಪಳಿಕೆಗೆ ಹೊಂದಿಕೊಂಡಿರಬಹುದೆಂದು ಪ್ರತಿಪಾದಿಸಿದರು. ಅವರ ಪ್ರಕಾರ, ಇತರ ಸಸ್ತನಿಗಳಲ್ಲಿ ಗಂಡು ಪ್ರಾಣಿಗಳು ಪರಸ್ಪರ ತಲೆ ಅಥವಾ ಕೊಂಬಿನಿಂದ ಡಿಕ್ಕಿ ಹೊಡೆದು ಸ್ಪರ್ಧಿಸುವ ನಡವಳಿಕೆಯ ವಿಕಾಸಾತ್ಮಕ ಹಿನ್ನೆಲೆ ಇಲ್ಲಿಯೂ ಇರಬಹುದಾಗಿದೆ.

### ತಲೆಯೊಳಗೆ 1,900 ಲೀಟರ್ ದ್ರವ!

ಸ್ಪರ್ಮ್ ವೇಲ್‌ನ ತಲೆ ಅದರ ದೇಹದ ಉದ್ದದ ಸುಮಾರು ಮೂರನೇ ಒಂದು ಭಾಗದಷ್ಟಿರುತ್ತದೆ. ಅದರ ಮುಂಭಾಗದಲ್ಲಿ 'ಸ್ಪರ್ಮಾಸೆಟಿ ಆರ್ಗನ್' ಎಂಬ ವಿಶಿಷ್ಟ ಕೊಬ್ಬಿನ ಅಂಗವಿದೆ. ಇದರಲ್ಲಿ ಸುಮಾರು 1,900 ಲೀಟರ್‌ವರೆಗೆ ಎಣ್ಣೆಯಂಥ, ಮೇಣದಂಥ ದ್ರವ ಇರಬಹುದು.

19ನೇ ಶತಮಾನದಲ್ಲಿ ತಿಮಿಂಗಿಲ ಬೇಟೆಗಾರರು ಈ ದ್ರವವನ್ನು ಅಪಾರ ಮೌಲ್ಯದ ವಸ್ತುವಾಗಿ ಪರಿಗಣಿಸುತ್ತಿದ್ದರು. ಇಂಧನ, ಮೇಣದ ಬತ್ತಿ ಮತ್ತು ಸಾಬೂನು ಸೇರಿದಂತೆ ಹಲವು ಉತ್ಪನ್ನಗಳಲ್ಲಿ ಇದನ್ನು ಬಳಸಲಾಗುತ್ತಿತ್ತು. 'ಸ್ಪರ್ಮಾಸೆಟಿ'ಗೆ ಈ ಹೆಸರು ಬಂದಿದ್ದೂ ವಿಚಿತ್ರ ಕಾರಣದಿಂದಲೇ?ಇದು ತಿಮಿಂಗಿಲದ ವೀರ್ಯ ಎಂದು ಬೇಟೆಗಾರರು ತಪ್ಪಾಗಿ ಭಾವಿಸಿದ್ದರು.

18 ಮತ್ತು 19ನೇ ಶತಮಾನಗಳಲ್ಲಿ ವಿಶ್ವದಾದ್ಯಂತ ಸುಮಾರು 3 ಲಕ್ಷ ಸ್ಪರ್ಮ್ ವೇಲ್‌ಗಳನ್ನು ಬೇಟೆಯಾಡಿ ಕೊಲ್ಲಲಾಗಿದೆ ಎಂದು ದಾಖಲೆಗಳು ಸೂಚಿಸುತ್ತವೆ.

### ತಿಮಿಂಗಿಲಗಳ ನಡುವೆಯೂ 'ಹೆಡ್‌ಬಟ್'

ತಿಮಿಂಗಿಲಗಳು ಹಡಗುಗಳಿಗೆ ಅಪ್ಪಳಿಸುವುದನ್ನು ನೇರವಾಗಿ ಗಮನಿಸುವುದು ಅಪರೂಪ. ಆದರೆ ಇತ್ತೀಚೆಗೆ ಅಲೆಕ್ ಬರ್ಸ್ಲೆಮ್ ಅವರು ಡ್ರೋನ್ ಮೂಲಕ ಬಾಲೆರಿಕ್ ದ್ವೀಪಗಳು ಮತ್ತು ಅಜೋರ್ಸ್ ಪ್ರದೇಶಗಳಲ್ಲಿ ಸ್ಪರ್ಮ್ ವೇಲ್‌ಗಳು ಪರಸ್ಪರ ತಲೆಗಳಿಂದ ಅಪ್ಪಳಿಸುತ್ತಿರುವ ದೃಶ್ಯಗಳನ್ನು ದಾಖಲಿಸಿದ್ದಾರೆ.

ಅವರು ಗಮನಿಸಿದ ಅತಿ ದೊಡ್ಡ ಅಪ್ಪಳಿಕೆಯಲ್ಲಿ ಒಂದು ಕಿರಿಯ ಗಂಡು ತಿಮಿಂಗಿಲವು ಸೆಕೆಂಡಿಗೆ ಸುಮಾರು 4.5 ಮೀಟರ್ ವೇಗದಲ್ಲಿ ಮತ್ತೊಂದು ತಿಮಿಂಗಿಲಕ್ಕೆ ಡಿಕ್ಕಿ ಹೊಡೆದಿದ್ದು, ಅಂದಾಜು 460 ಕಿಲೋನ್ಯೂಟನ್‌ಗಳಷ್ಟು ಬಲ ಉತ್ಪತ್ತಿಯಾಗಿದೆ.

ಪೂರ್ಣ ಬೆಳೆದ ದೊಡ್ಡ ಸ್ಪರ್ಮ್ ವೇಲ್ ಇದೇ ವೇಗದಲ್ಲಿ ಅಪ್ಪಳಿಸಿದರೆ ಸುಮಾರು 1,200 ಕಿಲೋನ್ಯೂಟನ್‌ಗಳಷ್ಟು ಬಲ ಉಂಟಾಗಬಹುದು ಎಂದು ಅಂದಾಜಿಸಲಾಗಿದೆ. ಇದು ಗಂಟೆಗೆ ಸುಮಾರು 65 ಕಿ.ಮೀ. ವೇಗದಲ್ಲಿ ಬರುತ್ತಿರುವ ಬಸ್ ಡಿಕ್ಕಿ ಹೊಡೆದ ಅನುಭವಕ್ಕೆ ಹೋಲಿಸಬಹುದು.

ಇತಿಹಾಸದಲ್ಲಿ ಮುಖ್ಯ ತಿಮಿಂಗಿಲ ಬೇಟೆ ಹಡಗುಗಳ ಮೇಲೆ ತಿಮಿಂಗಿಲ ದಾಳಿ ಮಾಡಿದ ಮೂರು ಪ್ರಮುಖ ಘಟನೆಗಳು ದಾಖಲಾಗಿವೆ ಎಂದು ನ್ಯಾಂಟಕೆಟ್ ಹಿಸ್ಟಾರಿಕಲ್ ಸೊಸೈಟಿಯ ತಜ್ಞರು ಹೇಳಿದ್ದಾರೆ. ಈ ಮೂರೂ ಪ್ರಕರಣಗಳಲ್ಲಿ ದಾಳಿ ಮಾಡಿದವು ಸ್ಪರ್ಮ್ ವೇಲ್‌ಗಳೇ.

### ಎಸೆಕ್ಸ್ 1820ರಲ್ಲಿ ದಾಳಿ ಮಾಡಿ ಮುಳುಗಿಸಿತು.

ಅಯಾನ್ ಅಲೆಕ್ಸಾಂಡರ್ 1851ರಲ್ಲಿ ದಕ್ಷಿಣ ಪೆಸಿಫಿಕ್‌ನಲ್ಲಿ ಸ್ಪರ್ಮ್ ವೇಲ್ ದಾಳಿಗೆ ಒಳಗಾಗಿ ಸಂಪೂರ್ಣವಾಗಿ ಹಾನಿಗೊಂಡಿತು.ಕ್ಯಾಥ್ಲೀನ್ 1902ರಲ್ಲಿ ಗ್ಯಾಲಪಗೋಸ್ ದ್ವೀಪಗಳ ಸಮೀಪ ಸ್ಪರ್ಮ್ ವೇಲ್ ದಾಳಿಯಿಂದ ಧ್ವಂಸವಾಯಿತು.

ಆದರೆ ಸಣ್ಣ ಬೇಟೆ ದೋಣಿಗಳ ಮೇಲೆ ತಿಮಿಂಗಿಲಗಳು ದಾಳಿ ಮಾಡುವುದು ಹೋಲಿಸಿದರೆ ಸಾಮಾನ್ಯವಾಗಿತ್ತು ಎಂದು ಐತಿಹಾಸಿಕ ದಾಖಲೆಗಳು ಹೇಳುತ್ತವೆ.

### ಇನ್ನೂ ಬಗೆಹರಿಯದ ಹಲವು ರಹಸ್ಯ

ಸ್ಪರ್ಮ್ ವೇಲ್‌ನ ತಲೆಯ ಈ ಬೃಹತ್ ಅಂಗದ ಕೆಲಸ ಕೇವಲ ಅಪ್ಪಳಿಸುವುದಕ್ಕೆ ಮಾತ್ರ ಸೀಮಿತವೇ ಎಂಬುದು ಇನ್ನೂ ಖಚಿತವಾಗಿಲ್ಲ. ಧ್ವನಿ ಉತ್ಪಾದನೆ ಮತ್ತು ಸಂವಹನದಲ್ಲೂ ಇದು ಪ್ರಮುಖ ಪಾತ್ರ ವಹಿಸಬಹುದು ಎಂಬ ಮತ್ತೊಂದು ಸಿದ್ಧಾಂತವಿದೆ.

ಸ್ಪರ್ಮ್ ವೇಲ್‌ಗಳು 'ಮಂಕಿ ಲಿಪ್ಸ್' ಎಂದು ಕರೆಯಲಾಗುವ ವಿಶೇಷ ಧ್ವನಿ ಉತ್ಪಾದಕ ರಚನೆಗಳ ಮೂಲಕ ಶಬ್ದ ಸೃಷ್ಟಿಸುತ್ತವೆ. ಈ ಶಬ್ದದ ಪ್ರತಿಧ್ವನಿಯು ತಲೆಯಲ್ಲಿರುವ ಸ್ಪರ್ಮಾಸೆಟಿ ಅಂಗದ ಮೂಲಕ ಸಾಗುತ್ತದೆ. ಈ ಮೂಲಕ ಹೆಣ್ಣು ತಿಮಿಂಗಿಲಗಳು ಗಂಡಿನ ಗಾತ್ರವನ್ನು ಅಂದಾಜಿಸಿ ಸಂಗಾತಿ ಆಯ್ಕೆಯಲ್ಲಿ ಬಳಸಿಕೊಳ್ಳಬಹುದು ಎಂಬ ಅಭಿಪ್ರಾಯವೂ ಇದೆ.ವಿಜ್ಞಾನಿಗಳ ಪ್ರಕಾರ, ಸ್ಪರ್ಮ್ ವೇಲ್‌ನ ತಲೆಯ ಈ ವಿಶಿಷ್ಟ ಅಂಗದ ನಿಜವಾದ ಕಾರ್ಯ ಇನ್ನೂ ಸಂಪೂರ್ಣವಾಗಿ ಅರ್ಥವಾಗಿಲ್ಲ. ಆದರೆ ಎಸೆಕ್ಸ್ ದುರಂತದ 200 ವರ್ಷಗಳ ಹಿಂದಿನ ಪ್ರಶ್ನೆಗೆ, ತಿಮಿಂಗಿಲಗಳ ಇತ್ತೀಚಿನ ವರ್ತನೆ ಮತ್ತು ದೇಹರಚನೆಯ ಅಧ್ಯಯನಗಳು ಹೊಸ ಉತ್ತರದ ಬಾಗಿಲು ತೆರೆದಿವೆ.

---

# ವೈದ್ಯ-ಎಂಜಿನಿಯರ್' ಸೃಷ್ಟಿಗೆ 3 ಐಐಟಿಗಳ ಸಿದ್ಧತೆ

ವೈದ್ಯಕೀಯ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರನ್ನು ಸೇರಿಸುವುದಕ್ಕಿಂತ, ವೈದ್ಯಕೀಯ ಜ್ಞಾನ ಮತ್ತು ತಂತ್ರಜ್ಞಾನ ಎರಡನ್ನೂ ಸಮಾನವಾಗಿ ಅರ್ಥಮಾಡಿಕೊಳ್ಳುವ ಹೊಸ ತಲೆಮಾರಿನ 'ವೈದ್ಯ–ಎಂಜಿನಿಯರ್'ಗಳನ್ನು ರೂಪಿಸುವತ್ತ ದೇಶದ ಪ್ರತಿಷ್ಠಿತ ಮೂರು ಭಾರತೀಯ ತಂತ್ರಜ್ಞಾನ ಸಂಸ್ಥೆಗಳು ಹೆಜ್ಜೆ ಇಟ್ಟಿವೆ.

ಐಐಟಿ ಕಾನ್ಪುರ, ಐಐಟಿ ಖರಗ್‌ಪುರ ಹಾಗೂ ಐಐಟಿ ಮದ್ರಾಸ್‌ಗಳು ವಿಭಿನ್ನ ಮಾದರಿಯಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು ರೂಪಿಸುತ್ತಿವೆ. ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ , ವೈದ್ಯಕೀಯ ಚಿತ್ರಣ, ರೋಬೋಟಿಕ್ಸ್, ಬಯೋಸೆನ್ಸರ್‌ಗಳು, ಆಣ್ವಿಕ ರೋಗನಿರ್ಣಯ ಹಾಗೂ ಧರಿಸಬಹುದಾದ ಸಾಧನಗಳ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ವೈದ್ಯರು ಮತ್ತು ಎಂಜಿನಿಯರ್‌ಗಳ ನಡುವಿನ ಅಂತರವನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ.

ಐಐಟಿ ಕಾನ್ಪುರ ಮೊದಲ ಹಂತದಲ್ಲಿ ಉನ್ನತ ಹಾಗೂ ಸೂಪರ್ ಸ್ಪೆಷಾಲಿಟಿ ವೈದ್ಯಕೀಯ ಶಿಕ್ಷಣಕ್ಕೆ ಒತ್ತು ನೀಡುತ್ತಿದೆ. ಎಂಡಿ, ಡಿಎಂ ಮತ್ತು ಎಂಸಿಎಚ್ ಸೇರಿದಂತೆ ಉನ್ನತ ವೈದ್ಯಕೀಯ ಪದವಿಗಳೊಂದಿಗೆ ಸಂಶೋಧನಾ ಕಾರ್ಯಕ್ರಮಗಳನ್ನು ಆರಂಭಿಸುವ ಯೋಜನೆ ಹೊಂದಿದೆ. ಎಂಬಿಬಿಎಸ್ ಶಿಕ್ಷಣವನ್ನು ನಂತರದ ಹಂತದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಕಾನ್ಪುರದಲ್ಲಿ 500 ಹಾಸಿಗೆಗಳ ಯದುಪತಿ ಸಿಂಘಾನಿಯಾ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣವಾಗುತ್ತಿದ್ದು, 2026ರ ಅಂತ್ಯದ ವೇಳೆಗೆ ಉದ್ಘಾಟನೆಯಾಗಿ, 2027ರ ಮಾರ್ಚ್ ವೇಳೆಗೆ ಮೊದಲ ರೋಗಿಯನ್ನು ದಾಖಲಿಸುವ ನಿರೀಕ್ಷೆಯಿದೆ. ಇದರ ಪಕ್ಕದಲ್ಲೇ 50 ಹಾಸಿಗೆಗಳ ಕ್ಯಾನ್ಸರ್ ಆರೈಕೆ ಮತ್ತು ಸಂಶೋಧನಾ ಕೇಂದ್ರವೂ ನಿರ್ಮಾಣವಾಗುತ್ತಿದೆ.

ಐಐಟಿ ಖರಗ್‌ಪುರ ಈಗಾಗಲೇ ವೈದ್ಯಕೀಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. 2001ರಲ್ಲಿ ಆರಂಭವಾದ ಅದರ ಸ್ಕೂಲ್ ಆಫ್ ಮೆಡಿಕಲ್ ಸೈನ್ಸ್ ಆಂಡ್ ಟೆಕ್ನಾಲಜಿ, ವೈದ್ಯರಿಗೆ ಎಂಜಿನಿಯರಿಂಗ್ ಮತ್ತು ಭೌತ ವಿಜ್ಞಾನಗಳ ಜ್ಞಾನ ನೀಡುವ ಎಂಎಂಎಸ್‌ಟಿ ಕಾರ್ಯಕ್ರಮವನ್ನು ನಡೆಸುತ್ತಿದೆ. ಸಂಸ್ಥೆ ಆಸ್ಪತ್ರೆ ನಿರ್ಮಿಸಿದ್ದು, ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳಿಗೂ ಅನುಮತಿ ಪಡೆದಿದೆ.

ಐಐಟಿ ಮದ್ರಾಸ್ ಎಂಬಿಬಿಎಸ್, ಎಂಡಿ ಹಾಗೂ ಪಿಎಚ್‌ಡಿ ಪದವಿಗಳನ್ನು ಒಳಗೊಂಡ ಸಮಗ್ರ ವೈದ್ಯಕೀಯ ವಿಜ್ಞಾನ ಶಾಲೆ ಸ್ಥಾಪಿಸಲು ಮುಂದಾಗಿದೆ. ಸಂಸ್ಥೆಯ ನಿರ್ದೇಶಕ ಪ್ರೊ. ವಿ. ಕಾಮಕೋಟಿ, ತಂತ್ರಜ್ಞಾನ ಸಂಸ್ಥೆಯೊಂದು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶಿಸುವ ಅಗತ್ಯವನ್ನು ಒತ್ತಿಹೇಳಿದ್ದಾರೆ.

### 'ವೈದ್ಯ–ಎಂಜಿನಿಯರ್' ಏಕೆ?

ಐಐಟಿ ಖರಗ್‌ಪುರ ನಿರ್ದೇಶಕ ಪ್ರೊ. ಸುಮನ ಚಕ್ರವರ್ತಿ ಅವರ ಪ್ರಕಾರ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ಹಳೆಯ ಮಾದರಿ ಈಗ ಸಾಕಾಗುವುದಿಲ್ಲ. ಇಂದಿನ ವೈದ್ಯಕೀಯದಲ್ಲಿ ರೋಗನಿರ್ಣಯದಿಂದ ಚಿಕಿತ್ಸೆ ಹಾಗೂ ನಂತರದ ಮೇಲ್ವಿಚಾರಣೆಯವರೆಗೆ ತಂತ್ರಜ್ಞಾನವೇ ಪ್ರಮುಖ ಭಾಗವಾಗಿದೆ.

ವೈದ್ಯರು ದೇಹದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುತ್ತಾರೆ; ಎಂಜಿನಿಯರ್‌ಗಳು ಯಂತ್ರಗಳ ಕಾರ್ಯವಿಧಾನವನ್ನು ತಿಳಿದಿರುತ್ತಾರೆ. ಆದರೆ ಈ ಎರಡೂ ಜ್ಞಾನವನ್ನು ಒಟ್ಟಿಗೆ ಹೊಂದಿರುವ ವೃತ್ತಿಪರರ ಕೊರತೆಯಿದೆ. ಅದನ್ನು ತುಂಬುವ ಉದ್ದೇಶವೇ 'ವೈದ್ಯ–ಎಂಜಿನಿಯರ್' ಮಾದರಿ.

ಉದಾಹರಣೆಗೆ, ವೈದ್ಯಕೀಯ ಸಾಧನವನ್ನು ಇನ್ನಷ್ಟು ನಿಖರಗೊಳಿಸುವುದೇ ಮುಖ್ಯ ಗುರಿ ಎಂದು ಎಂಜಿನಿಯರ್ ಭಾವಿಸಬಹುದು. ಆದರೆ ಗ್ರಾಮೀಣ ಪ್ರದೇಶದಲ್ಲಿ 100 ಒಳಗೆ ದೊರೆಯುವ, ಹತ್ತು ನಿಮಿಷದಲ್ಲಿ ಫಲಿತಾಂಶ ನೀಡುವ ಮತ್ತು ಶೀತ ಸರಪಳಿ ಇಲ್ಲದೆಯೂ ಬಳಸಬಹುದಾದ ಪರೀಕ್ಷಾ ಸಾಧನವೇ ಹೆಚ್ಚು ಉಪಯುಕ್ತವಾಗಬಹುದು. ರೋಗಿಯ ನಿಜವಾದ ಅಗತ್ಯವನ್ನು ಗುರುತಿಸುವ ಸಾಮರ್ಥ್ಯವೇ ಈ ಹೊಸ ಮಾದರಿಯ ಪ್ರಮುಖ ಉದ್ದೇಶ ಎಂದು ಪ್ರೊ. ಚಕ್ರವರ್ತಿ ಹೇಳಿದ್ದಾರೆ. ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕ ಅಥವಾ ಪ್ರಯೋಗಾಲಯಕ್ಕೆ ಸೀಮಿತವಾಗದೆ, ನೈಜ ವೈದ್ಯಕೀಯ ಸಮಸ್ಯೆ ಗುರುತಿಸಿ, ಅದರ ಪರಿಹಾರ ರೂಪಿಸಿ, ಪರೀಕ್ಷಿಸಿ, ನಿಯಂತ್ರಣಾತ್ಮಕ ಅನುಮತಿ ಪಡೆದು, ಕಡಿಮೆ ವೆಚ್ಚದಲ್ಲಿ ಉತ್ಪಾದಿಸಿ, ಸಮುದಾಯದ ಮಟ್ಟದಲ್ಲಿ ಬಳಸುವವರೆಗೆ ಸಂಪೂರ್ಣ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮಾದರಿಯನ್ನು ರೂಪಿಸುವ ಉದ್ದೇಶವಿದೆ.

ಕಾನ್ಪುರದಲ್ಲಿ ಈಗಾಗಲೇ ಹೃದಯ ವೈಫಲ್ಯಕ್ಕೆ ಬಳಸಬಹುದಾದ ದೇಶೀಯ ಎಲ್‌ವಿಎಡಿ ಅಭಿವೃದ್ಧಿಪಡಿಸಲಾಗಿದ್ದು, ಪ್ರಾಣಿಗಳ ಮೇಲೆ ಪರೀಕ್ಷೆ ನಡೆಯುತ್ತಿದೆ. ಗ್ರಾಮೀಣ ಭಾರತದಲ್ಲಿ ನವಜಾತ ಶಿಶುಗಳಲ್ಲಿ ನ್ಯುಮೋನಿಯಾ ಪತ್ತೆಹಚ್ಚಲು ಪೋರ್ಟಬಲ್ ಅಲ್ಟ್ರಾಸೌಂಡ್ ಸಾಧನಗಳ ಅಭಿವೃದ್ಧಿಯೂ ನಡೆಯುತ್ತಿದೆ.

ವೈದ್ಯಕೀಯ ಶಿಕ್ಷಣವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ನಿಯಂತ್ರಿಸುವುದರಿಂದ ಐಐಟಿಗಳು ತಮ್ಮದೇ ಮಾನದಂಡದಲ್ಲಿ ವೈದ್ಯರನ್ನು ರೂಪಿಸಲು ಸಾಧ್ಯವಿಲ್ಲ. ಸುರಕ್ಷಿತ ಮತ್ತು ಸಮರ್ಥ ವೈದ್ಯರನ್ನು ರೂಪಿಸಲು ಅಗತ್ಯವಿರುವ ಮೂಲ ವೈದ್ಯಕೀಯ ಅರ್ಹತೆಗಳಲ್ಲಿ ಯಾವುದೇ ರಾಜಿ ಇರಬಾರದು ಎಂದು ಐಐಟಿ ಖರಗ್‌ಪುರದ ನಿರ್ದೇಶಕರು ಸ್ಪಷ್ಟಪಡಿಸಿದ್ದಾರೆ. ಅದರೊಂದಿಗೆ, ಎನ್‌ಎಂಸಿ ನಿಯಮಗಳಿಗೆ ಅನುಗುಣವಾದ ವೈದ್ಯಕೀಯ ಶಿಕ್ಷಣದ ಜತೆಗೆ ಐಐಟಿಯ ತಂತ್ರಜ್ಞಾನ ಮತ್ತು ಸಂಶೋಧನಾ ಪರಿಸರವನ್ನು ಸಂಯೋಜಿಸುವುದು ಈ ಮಾದರಿಯ ಉದ್ದೇಶವಾಗಿದೆ.

ಭಾರತದ ವೈದ್ಯಕೀಯ ಸಾಧನಗಳ ಬಳಕೆಯಲ್ಲಿ ಸುಮಾರು 60 ಪ್ರತಿಶತದಷ್ಟು ಆಮದುಗಳ ಪಾಲು ಇದೆ. 2024–25ರಲ್ಲಿ ಭಾರತ ಸುಮಾರು 1.37 ಲಕ್ಷ ಕೋಟಿ ಮೌಲ್ಯದ ವೈದ್ಯಕೀಯ ಸಾಧನಗಳನ್ನು ಆಮದು ಮಾಡಿಕೊಂಡಿದ್ದು, ಇದೇ ಅವಧಿಯಲ್ಲಿ ರಫ್ತು ಮೌಲ್ಯ ಸುಮಾರು 42,360 ಕೋಟಿಯಷ್ಟಿತ್ತು.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸಾಧನಗಳ ಲಭ್ಯತೆ ಮಾತ್ರವಲ್ಲ, ಅವು ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರುವುದೂ ದೊಡ್ಡ ಸವಾಲಾಗಿದೆ. ರಿಯಾಜೆಂಟ್‌ಗಳ ಕೊರತೆ, ಸಾಧನಗಳ ಕ್ಯಾಲಿಬ್ರೇಷನ್ ಸಮಸ್ಯೆ, ತರಬೇತಿ ಪಡೆದ ಸಿಬ್ಬಂದಿಯ ಅಭಾವ ಹಾಗೂ ವಿದ್ಯುತ್ ಪೂರೈಕೆಯ ಸಮಸ್ಯೆಗಳಿಂದ ಸಾಧನಗಳಿದ್ದರೂ ರೋಗಿಗಳಿಗೆ ಪ್ರಯೋಜನವಾಗದ ಪರಿಸ್ಥಿತಿ ಎದುರಾಗಬಹುದು ಎಂದು ವರದಿ ತಿಳಿಸಿದೆ.

ಈ ಯೋಜನೆಯ ಯಶಸ್ಸನ್ನು ಕೇವಲ ಸಂಶೋಧನಾ ಪ್ರಬಂಧಗಳು, ಪೇಟೆಂಟ್‌ಗಳು ಅಥವಾ ಸ್ಟಾರ್ಟ್‌ಅಪ್‌ಗಳ ಸಂಖ್ಯೆಯಿಂದ ಅಳೆಯಬಾರದು. ಐಐಟಿ ಪರಿಸರದಲ್ಲಿ



ರೂಪುಗೊಂಡ ತಂತ್ರಜ್ಞಾನ ಭಾರತದಲ್ಲೇ ತಯಾರಾಗಿ, ವೈದ್ಯಕೀಯವಾಗಿ ಪರೀಕ್ಷಿತವಾಗಿ, ನಿಯಂತ್ರಣಾತ್ಮಕ ಅನುಮತಿ ಪಡೆದು, ದೊಡ್ಡ ಪ್ರಮಾಣದಲ್ಲಿ ಬಳಕೆಯಾಗಬೇಕು. ಜೊತೆಗೆ ಅದು ಕೈಗೆಟುಕುವ ದರದಲ್ಲಿ ದೊರೆತು, ದೊಡ್ಡ ಆಸ್ಪತ್ರೆಗಳಿಂದ ದೂರದ ಪ್ರದೇಶಗಳಲ್ಲಿಯೂ ರೋಗಿಗಳ ಚಿಕಿತ್ಸಾ ಫಲಿತಾಂಶ ಸುಧಾರಿಸಬೇಕು ಎಂಬುದು ಉದ್ದೇಶ.

ಪ್ರಯೋಗಾಲಯ ಮತ್ತು ಪ್ರದರ್ಶನ ಮಾದರಿಗಳಲ್ಲೇ ತಂತ್ರಜ್ಞಾನಗಳು ಉಳಿದುಬಿಟ್ಟರೆ ಈ ಮಾದರಿ ಯಶಸ್ವಿಯಾಗಿಲ್ಲ ಎಂದು ಒಪ್ಪಿಕೊಳ್ಳುವ ಧೈರ್ಯವೂ ಇರಬೇಕು ಎಂದು ಪ್ರೊ. ಚಕ್ರವರ್ತಿ ಹೇಳಿದ್ದಾರೆ.

ಒಟ್ಟಿನಲ್ಲಿ, ದೇಶದ ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯರು ಮತ್ತು ಎಂಜಿನಿಯರ್‌ಗಳ ನಡುವಿನ ಅಂತರವನ್ನು ಕಡಿಮೆ ಮಾಡಿ, ರೋಗಿಯ ಸಮಸ್ಯೆಯನ್ನು ಗುರುತಿಸುವುದರಿಂದ ಹಿಡಿದು ತಂತ್ರಜ್ಞಾನ ಅಭಿವೃದ್ಧಿ, ಉತ್ಪಾದನೆ ಮತ್ತು ಚಿಕಿತ್ಸೆಯವರೆಗೆ ಒಂದೇ ಸರಪಳಿಯಲ್ಲಿ ಕೆಲಸ ಮಾಡುವ ಹೊಸ ಮಾದರಿಯನ್ನು ರೂಪಿಸುವ ಪ್ರಯತ್ನ ಇದಾಗಿದೆ.

# ಗುಂಡೇಟಿಗೆ ಎಲ್‌ಇಟಿ ಉಗ್ರನ ಹತ್ಯೆ



ಬಡ್ಗಾಮ್, ಸೆ.30: ಜಮ್ಮು–ಕಾಶ್ಮೀರದಲ್ಲಿ ಹಲವು ದಾಳಿಗಳಿಗೆ ಸಂಬಂಧಿಸಿದಂತೆ ಭದ್ರತಾ ಪಡೆಗಳಿಗೆ ಬೇಕಾಗಿದ್ದ ಪಾಕಿಸ್ತಾನ ಮೂಲದ ಲಷ್ಕರ್–ಎ–ತಯ್ಬಾ (ಎಲ್‌ಇಟಿ)ಯ ಪ್ರಮುಖ ಉಗ್ರನೊಬ್ಬನನ್ನು ಬಡ್ಗಾಮ್ ಜಿಲ್ಲೆಯ ಮೇಲ್ಭಾಗದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿದೆ.

ತಡರಾತ್ರಿ ಬಡ್ಗಾಮ್ ಜಿಲ್ಲೆಯ ಪಾಲ್ಮೈದನ್‌ಮುಗಪತ್ರಿ ಅರಣ್ಯ ಪ್ರದೇಶದಲ್ಲಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆದಿದ್ದು, ಓರ್ವ ಉಗ್ರ ಹತನಾಗಿದ್ದಾನೆ. ಭದ್ರತಾ ಅಧಿಕಾರಿಗಳ ಪ್ರಕಾರ ಹತನಾದ ಉಗ್ರನನ್ನು ಸುಲೈಮಾನ್ ಶಾ ಅಲಿಯಾಸ್ 'ಮೂಸಾ' ಎಂದು ಗುರುತಿಸಲಾಗಿದೆ. ಆದರೆ ಸೇನೆಯ ಚಿನಾರ್ ಕಾರ್ಪ್ಸ್ ಅಧಿಕೃತವಾಗಿ ಹತನಾದ ಉಗ್ರನ ಗುರುತನ್ನು ಬಹಿರಂಗಪಡಿಸಿಲ್ಲ. ಯೂಸ್ಮಾರ್ಗ್‌ನ ಕೊರಾಗ್ ಪ್ರದೇಶದಲ್ಲಿ ಉಗ್ರರ ಚಲನವಲನದ ಕುರಿತು ನಿರ್ದಿಷ್ಟ ಗುಪ್ತಚರ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ರಾಷ್ಟ್ರೀಯ ರೈಫಲ್ಸ್ ಸೇರಿದಂತೆ ಭದ್ರತಾ ಪಡೆಗಳು ಶೋಧ ಮತ್ತು ಸುತ್ತುವರಿದ ಕಾರ್ಯಾಚರಣೆ ಆರಂಭಿಸಿದ್ದವು.

ಕಾರ್ಯಾಚರಣೆ ವೇಳೆ ಪಡೆಗಳಿಗೆ ಅನುಮಾನಾಸ್ಪದ ಚಲನವಲನ ಕಂಡುಬಂದಿದ್ದು, ಶಂಕಿತರನ್ನು ಶರಣಾಗುವಂತೆ ಸೂಚಿಸಿದಾಗ ಉಗ್ರರು ಗುಂಡಿನ ದಾಳಿ ನಡೆಸಿದರು. ಇದಕ್ಕೆ ಭದ್ರತಾ ಪಡೆಗಳು ಪ್ರತಿ–ದಾಳಿ ನಡೆಸಿದ್ದು, ನಡೆದ ತೀವ್ರ ಗುಂಡಿನ ಚಕಮಕಿಯಲ್ಲಿ ಓರ್ವ ಉಗ್ರ ಹತನಾಗಿದ್ದಾನೆ ಎಂದು ಸೇನೆ ತಿಳಿಸಿದೆ.

ಪೀರ್ ಪಂಜಾಲ್ ಪರ್ವತಶ್ರೇಣಿಯ ದಟ್ಟ ಅರಣ್ಯ ಪ್ರದೇಶದಲ್ಲಿ ಇನ್ನೂ ಉಗ್ರರು ಅಡಗಿರುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಭದ್ರತಾ ಪಡೆಗಳು ಪ್ರದೇಶವನ್ನು ಸಂಪೂರ್ಣವಾಗಿ ಸುತ್ತುವರಿದಿವೆ. ಹೆಚ್ಚುವರಿ ಪಡೆಗಳನ್ನು ಸ್ಥಳಕ್ಕೆ ರವಾನಿಸಲಾಗಿದ್ದು, ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಅಧಿಕಾರಿಗಳ ಪ್ರಕಾರ, ಮೂಸಾ ಪೀರ್ ಪಂಜಾಲ್ ಶ್ರೇಣಿಯ ಎರಡೂ ಬದಿಗಳಲ್ಲಿ ಕಳೆದ ಹಲವು ವರ್ಷಗಳಲ್ಲಿ ನಡೆದ ಹಲವು ದಾಳಿಗಳಿಗೆ ಸಂಬಂಧಿಸಿದಂತೆ ಭದ್ರತಾ ಸಂಸ್ಥೆಗಳಿಗೆ ಬೇಕಾಗಿದ್ದ. ಈ ತಿಂಗಳ ಆರಂಭದಲ್ಲಿ ಯೂಸ್ಮಾರ್ಗ್ ಬೆಟ್ಟ ಪ್ರದೇಶದಲ್ಲಿ ನಡೆದ ಎನ್‌ಕೌಂಟರ್‌ನಿಂದ ಆತ ತಪ್ಪಿಸಿಕೊಂಡಿದ್ದ.

ಆ ಕಾರ್ಯಾಚರಣೆಯಲ್ಲಿ ಮೂಸಾನ ಆಪ್ತ ಸಹಚರ ಯಾಸಿರ್ ಸೆಪ್ಟೆಂಬರ್ 5ರಂದು ಹತನಾಗಿದ್ದ. ಯಾಸಿರ್ ಪಾಕಿಸ್ತಾನಿ ಪ್ರಜೆ ಹಾಗೂ ಲಷ್ಕರ್–ಎ–ತಯ್ಬಾಗೆ ಸೇರಿದವನಾಗಿದ್ದ ಎಂದು ಜಮ್ಮು–ಕಾಶ್ಮೀರ ಪೊಲೀಸರು ತಿಳಿಸಿದ್ದರು.

ಭದ್ರತಾ ಅಧಿಕಾರಿಗಳ ಪ್ರಕಾರ, ಮೂಸಾ ಹತ್ಯೆ ಜಮ್ಮು–ಕಾಶ್ಮೀರದಲ್ಲಿ ಕಾರ್ಯನಿರ್ವಹಿಸುತ್ತಿರುವ ಲಷ್ಕರ್–ಎ–ತಯ್ಬಾ ಸಂಘಟನೆಗೆ ಪ್ರಮುಖ ಹೊಡೆತವಾಗಿದೆ. ಯಾಸಿರ್ ಹತ್ಯೆಯ ನಂತರ ಮೂಸಾ ಕೂಡ ಭದ್ರತಾ ಪಡೆಗಳ ಕಾರ್ಯಾಚರಣೆಯಲ್ಲಿ ಹತನಾಗಿರುವುದು ಉಗ್ರ ಸಂಘಟನೆ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ನಡೆದಿದೆ. ಸ್ಥಳದಲ್ಲಿ ಇನ್ನೂ ಶೋಧ ಮುಂದುವರಿದಿದ್ದು, ಹೆಚ್ಚಿನ ವಿವರಗಳನ್ನು ಭದ್ರತಾ ಪಡೆಗಳು ನಿರೀಕ್ಷಿಸುತ್ತಿವೆ.



ಇಂದು ನಗರಕ್ಕೆ ಆಗಮಿಸಿದ ಮಾಜಿ ಸಂಸದರು ಹಾಗೂ ಅಖಿಲ ಭಾರತ ಅಸಂಘಟಿತ ಕಾರ್ಮಿಕರ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಡಾ. ಉದಿತ್‌ರಾಜ್‌ರವರನ್ನು ಅಸಂಘಟಿತ ಕಾರ್ಮಿಕರ ಕಾಂಗ್ರೆಸ್ ಪಕ್ಷದ ಪ್ರಾದೇಶಿಕ ಸಂಯೋಜಕ ಬೈಯಪ್ಪನಹಳ್ಳಿ ಡಿ. ರಮೇಶ್ ಮತ್ತಿತರ ಮುಖಂಡರು ಸ್ವಾಗತ ಕೋರಿದರು.

# ಏಕದಂತ ಗಣೇಶೋತ್ಸವ ವಿಜೃಂಭಣೆ ಆಚರಣೆ

ಕೆಂಗೇರಿ, ಸೆ. 30: ಯಶವಂತಪುರ ವಿಧಾನಸಭಾಕ್ಷೇತ್ರದ ಕೆಂಗೇರಿಯ ವಿದ್ಯುತ್ ಗುತ್ತಿಗೆದಾರರ ಸಂಘದಿಂದ ಅದ್ದೂರಿ ಏಕದಂತೋತ್ಸವ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಕೆಂಗೇರಿ ಉಪ ಸಮಿತಿ ವತಿಯಿಂದ ನಗರದ 100 ಅಡಿ ಹೊರ ವರ್ತುಲ ರಸ್ತೆಯ ದೊಡ್ಡಬಸ್ತಿಯ ಕ್ರಾಸ್ ಸಾಯಿಬಾಬಾ ದೇವಸ್ಥಾನ ಹಿಂಭಾಗ ಕೆಪಿಟಿಸಿಎಲ್ ಸ್ಟೇಷನ್ ಸಮೀಪದ ಕಚೇರಿಯಲ್ಲಿ ಏಕದಂತನ ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ಈ ಕಾರ್ಯಕ್ರಮದಲ್ಲಿ ಕೆಂಗೇರಿ ಉಪ ಸಮಿತಿಯ ಅಧ್ಯಕ್ಷರಾದ ಕುಮಾರ್ ಮಾತನಾಡಿ ವಿದ್ಯುತ್ ಗುತ್ತಿಗೆದಾರರ ಸಂಕಷ್ಟದ ಈ ಸಮಯದಲ್ಲಿ ವಿಘ್ನೇಶ್ವರನು ಸರ್ವ ಸದಸ್ಯರೆಲ್ಲರಿಗೂ ಮಂಗಳವಾಗಲಿ ಎಂದು ಗಣಪತಿಯನ್ನು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಿ ಗುತ್ತಿಗೆದಾರರಿಗೂ ಅಧಿಕಾರಿ ವರ್ಗದವರಿಗೂ ಪ್ರಸಾದ ವಿತರಿಸಿ ನಂತರ ರಾಜಬೀದಿಗಳಲ್ಲಿ ಮೆರವಣಿಗೆ ಮೂಲಕ ಸುಲಿಕೆರೆಯಲ್ಲಿ ವಿಸರ್ಜಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸಮಿತಿಯ ಬೈಲ ಕಮಿಟಿ ಚೇರ್ಮನ್ ನಾಗರಾಜ್ ( ಜಾಕಿ ) ಕೆಂಗೇರಿ ಉಪಸಮಿತಿಯ ಪದಾಧಿಕಾರಿಗಳಾದ ಕಾರ್ಯದರ್ಶಿ ಚಿಕ್ಕನಾರಾಯಣಗೌಡ್ರು, ಉಪಾಧ್ಯಕ್ಷ ಕುಮಾರಸ್ವಾಮಿ, ಖಜಾಂಚಿ ಕೆ.ಎಸ್. ವಿಶ್ವನಾಥ್, ಕಚೇರಿ ನಿರ್ವಾಹಕ ಆನಂದ್, ಕಾರ್ಯಕಾರಿ ಸಮಿತಿ ಸದಸ್ಯರು ರಾಜೇಂದ್ರ ಬಾಬು, ಗಂಗರಾಜು, ಹರ್ಷ, ಚಂದ್ರು, ಕೃಷ್ಣ, ಶ್ರೀನಿವಾಸ್ ರಂಗರಾಮಯ್ಯ

ಬೆಸ್ಕಾಂ ಮುಖ್ಯ ಇಂಜಿನಿಯರ್ ಕಾಶಿ ರಾಮ ಪವಾರ್. ಅಧೀಕ್ಷಕ ಇಂಜಿನಿಯರ್ ನಾರಾಯಣಸ್ವಾಮಿ. ಕೆಂಗೇರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್. ಎನ್. ಶಿವಕುಮಾರ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ಗಳಾದ ಅನುರಾಧ . ಜಿತೇಂದ್ರ ಕುಮಾರ್, ಪ್ರಕಾಶ್, ಸಹಾಯಕ ಇಂಜಿನಿಯರ್‌ಗಳಾದ ಟೆಕ್ನಿಕಲ್ ಪುಟ್ಟಸ್ವಾಮಿ. ಆರ್ ಆರ್ ಲೇಔಟ್ ಘಟಕದ ಸಹಾಯಕ ಇಂಜಿನಿಯರ್ ನಿಕಿತಾ. ಎಸ್. ಬಿ. ಕೆಂಗೇರಿ ಉಪನಗರ ಘಟಕದ ಚಂದ್ರಶೇಖರ್, ಅಂಜನಾ ನಗರ ಘಟಕದ ನಾಗರಾಜು, ಕಿರಿಯ ಇಂಜಿನಿಯರ್ ವಿಜೇಂದ್ರ, ಲಕ್ಷ್ಮೀಕಾಂತ್, ಪ್ರಕಾಶ್. ಕೆ. ಎನ್. ವೆಂಕಟೇಶಯ್ ರುಕ್ಮಾಂಗದ, ಹಾಗೂ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯ ವಕ್ತಾರರಾದ ರೇಣುಕಾ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

## ಸಿಲಿಂಡರ್ ಸ್ಫೋಟ: ಶೆಡ್‌ಗೆ ಹಾನಿ

ಬೆಂಗಳೂರು, ಸೆ.30– ಬೈಯಪ್ಪನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಕಗ್ಗದಾಸಪುರದ 6ನೇ ಕ್ರಾಸ್‌ನಲ್ಲಿರುವ ಪಾಳು ಜಾಗದ ಶೆಡ್‌ನಲ್ಲಿ ಸಿಲಿಂಡರ್ ಸ್ಫೋಟಗೊಂಡ ಘಟನೆ ನಡೆದಿದೆ.

ಮೂರ್ತಿ ಎಂಬುವವರಿಗೆ ಸೇರಿದ ಪಾಳು ಜಾಗದಲ್ಲಿದ್ದ ಶೆಡ್‌ನಲ್ಲಿ ಸಿಲಿಂಡರ್ ಸ್ಫೋಟಗೊಂಡಿದ್ದು, ಘಟನೆಯ ಪರಿಣಾಮ ಶೆಡ್‌ಗೆ ಹಾನಿಯಾಗಿದೆ.

ಸಿಲಿಂಡರ್ ಸ್ಫೋಟದ ಮಾಹಿತಿ ತಿಳಿದು ಸ್ಥಳಕ್ಕೆ ಅಗ್ನಿಶಾಮಕ ದಳ ಹಾಗೂ ಬೈಯಪ್ಪನಹಳ್ಳಿ ಠಾಣೆ–ಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ನಿಪ್ಪಾಣಿ ತಹಶೀಲ್ದಾರ್‌ಗೆ ಲೋಕಾ ಶಾಕ್

ಬೆಳಗಾವಿ,.ಸೆ.30– ಜಿಲ್ಲೆಯ ನಿಪ್ಪಾಣಿ ತಹಶೀಲ್ದಾರ್ ಸುರೇಶ್ ಮುಂಜೆಗೆ ಬೆಳಂಬೆಳಿಗ್ಗೆಯೇ ಲೋಕಾಯುಕ್ತ ಅಧಿಕಾರಿಗಳು ಶಾಕ್ ನೀಡಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ಆರೋಪದ ಹಿನ್ನೆಲೆಯಲ್ಲಿ ಬೆಳಗಾವಿ ಲೋಕಾಯುಕ್ತ ಪೊಲೀಸರು ಏಕಕಾಲದಲ್ಲಿ ವಿವಿಧೆಡೆ ದಾಳಿ ನಡೆಸಿ ಪರಿಶೀಲನೆ ಕೈಗೊಂಡಿದ್ದಾರೆ.

ನಿಪ್ಪಾಣಿ ಪಟ್ಟಣದಲ್ಲಿರುವ ತಹಶೀಲ್ದಾರ್ ಸುರೇಶ್ ಮುಂಜೆ ಮನೆ, ಅಥಣಿ ಪಟ್ಟಣದಲ್ಲಿರುವ ಮತ್ತೊಂದು ಮನೆ ಹಾಗೂ ಮೂಡಲಗಿಯಲ್ಲಿರುವ ಅವರ ಮಾವನ ಮನೆ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ದಾಳಿಯ ವೇಳೆ ಮನೆಗಳಲ್ಲಿರುವ ಆಸ್ತಿ ದಾಖಲೆಗಳು, ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ.



ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ಆರೋಪಗಳ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದ್ದು, ದಾಳಿ ಪೂರ್ಣಗೊಂಡ ಬಳಿಕ ಆಸ್ತಿ–ಪಾಸ್ತಿ ಹಾಗೂ ಪತ್ತೆಯಾದ ದಾಖಲೆಗಳ ಕುರಿತು ಹೆಚ್ಚಿನ ಮಾಹಿತಿ ಹೊರಬೀಳುವ ಸಾಧ್ಯತೆ ಇದೆ.

# ಎಸ್‌ಐಆರ್‌ನಲ್ಲಿ ತಪ್ಪು ಮಾಹಿತಿ ನೀಡಿದರೆ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ

ಬೆಂಗಳೂರು, ಸೆ.30: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುವ ಬಿಎಲ್‌ಒ ಅಥವಾ ಸಂಬಂಧಪಟ್ಟ ಸಿಬ್ಬಂದಿ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ (ಕೇಂದ್ರ) ಜಗದೀಶ್.ಜಿ ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣಾ ಸಿದ್ಧತೆ ಕುರಿತು ಇಂದು ಚುನಾವಣಾ ವಿಭಾಗದ ಅಧಿಕಾರಿಗಳು ಹಾಗೂ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಎಸ್‌ಐಆರ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಗೊಂದಲ ಉಂಟಾಗದಂತೆ ಅಧಿಕಾರಿಗಳು ಅಧಿಕೃತ ಹಾಗೂ ಪರಿಶೀಲಿತ ಮಾಹಿತಿಯನ್ನು ಮಾತ್ರ ನೀಡಬೇಕು. ತಪ್ಪು ಮಾಹಿತಿ ಅಥವಾ ತಪ್ಪು ಮಾರ್ಗದರ್ಶನ ನೀಡಿರುವುದು ಕಂಡುಬಂದರೆ ನಿಯಮ ಉಲ್ಲಂಘನೆಯ ಸ್ವರೂಪಕ್ಕೆ ಅನುಗುಣವಾಗಿ ಶಿಸ್ತುಕ್ರಮ ಜರುಗಿಸಲಾಗುವುದು. ಅಗತ್ಯವಿರುವ ಪ್ರಕರಣಗಳಲ್ಲಿ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

18 ವರ್ಷ ಅಥವಾ ಮೇಲ್ಪಟ್ಟ, ಭಾರತೀಯ ನಾಗರಿಕರಾಗಿದ್ದು ಚುನಾವಣಾ ಆಯೋಗ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳನ್ನು ಪೂರೈಸುವ ನಾಗರಿಕರಿಗೆ ಮತದಾರರ ಪಟ್ಟಿಗೆ ಸಂಬಂಧಿಸಿದ ಪ್ರಕ್ರಿಯೆ ಕುರಿತು ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಹೆಚ್ಚಿನ ಅಗತ್ಯವಿರುವ ಪ್ರದೇಶಗಳನ್ನು ಗುರುತಿಸಿ ಅಲ್ಲಿ ವಿಶೇಷ ಖಖಖ ಜಾಗೃತಿ ಅಭಿಯಾನ ನಡೆಸಬೇಕು. ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕರಿಗೆ ಖಖಖ ಪ್ರಕ್ರಿಯೆ, ಅರ್ಜಿ ಸಲ್ಲಿಕೆ ಹಾಗೂ ಮತದಾರರ ಪಟ್ಟಿಗೆ ಸಂಬಂಧಿಸಿದ ಮಾಹಿತಿಯನ್ನು ತಲುಪಿಸುವಂತೆ ನಿರ್ದೇಶನ ನೀಡಿದರು.

**ಹೆಸರು ಪರಿಶೀಲಿಸಲು ಮನವಿ**

ಮತದಾರರ ಪಟ್ಟಿ ನಿಖರವಾಗಿರುವುದು, ಅರ್ಹ ಮತದಾರರ ಹೆಸರು ಸೇರ್ಪಡೆಯಾಗಿರುವುದು ಹಾಗೂ ಯಾವುದೇ ಅರ್ಹ ಮತದಾರರು ಹೊರಗುಳಿಯದಿರುವುದು ಎಸ್‌ಐಆರ್‌ನ ಪ್ರಮುಖ ಉದ್ದೇಶವಾಗಿದೆ. ಹೀಗಾಗಿ ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಬೇಕು. ಅಗತ್ಯವಿದ್ದಲ್ಲಿ ನಮೂನೆ–6 ಸೇರಿದಂತೆ ಸಂಬಂಧಿತ ಅರ್ಜಿಗಳನ್ನು ಸಲ್ಲಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಜಗದೀಶ್.ಜಿ ಮನವಿ ಮಾಡಿದರು.

ಶಿಕ್ಷಕರ ಕ್ಷೇತ್ರಕ್ಕೆ ಅ.26 ಮತದಾನ

**ಅ.23ರಂದು ಶಿಕ್ಷಕರ ಕ್ಷೇತ್ರಕ್ಕೆ ಮತದಾನ:**

ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣಾ ಸಿದ್ಧತೆ ಕುರಿತೂ ಸಭೆಯಲ್ಲಿ ಚರ್ಚೆ ನಡೆಯಿತು. ಚುನಾವಣಾ ಅಧಿಸೂಚನೆ, ನಾಮಪತ್ರ ಸಲ್ಲಿಕೆ, ಪರಿಶೀಲನೆ, ಹಿಂಪಡೆಯುವಿಕೆ, ಮತದಾನ ಹಾಗೂ ಮತ ಎಣಿಕೆ ಸೇರಿದಂತೆ ಚುನಾವಣೆಯ ವಿವಿಧ ಹಂತಗಳ ಕುರಿತು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಮಾಹಿತಿ ನೀಡಲಾಯಿತು.

**ಚುನಾವಣಾ ವೇಳಾಪಟ್ಟಿ:**

**ಅಧಿಸೂಚನೆ: ಸೆ.29**

**ನಾಮಪತ್ರ ಸಲ್ಲಿಕೆಗೆ ಕೊನೆ ದಿನ: ಅ.6**

**ನಾಮಪತ್ರ ಪರಿಶೀಲನೆ: ಅ.7**

**ನಾಮಪತ್ರ ಹಿಂಪಡೆಯಲು ಕೊನೆ ದಿನ: ಅ.9**

**ಮತದಾನ: ಅ.23, ಬೆಳಗ್ಗೆ 8ರಿಂದ ಸಂಜೆ 4ರವರೆಗೆ**

**ಮತ ಎಣಿಕೆ: ಅ.27**

**ಚುನಾವಣಾ ಪ್ರಕ್ರಿಯೆ ಪೂರ್ಣ: ಅ.31**

ಬೆಂಗಳೂರು ಕೇಂದ್ರ ವ್ಯಾಪ್ತಿಯ ಶಿಕ್ಷಕರ ಕ್ಷೇತ್ರದ ಮತಗಟ್ಟೆಗಳ ಪಟ್ಟಿಯನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ನೀಡಲಾಗಿದ್ದು, ಮತಗಟ್ಟೆಗಳ ವಿವರ ಪರಿಶೀಲಿಸಿ ಚುನಾವಣಾ ಪ್ರಕ್ರಿಯೆಗೆ ಸಹಕಾರ ನೀಡುವಂತೆ ಸೂಚಿಸಲಾಯಿತು.

**7 ಕ್ಷೇತ್ರಗಳ ಬಿಎಲ್‌ಒ ಕಚೇರಿಗಳಲ್ಲಿ ವಿಶೇಷ ಕೌಂಟರ್:**

ಅರ್ಹ ಶಿಕ್ಷಕರಿಂದ ನಮೂನೆ–19 ಅರ್ಜಿಗಳನ್ನು ಸ್ವೀಕರಿಸಲು ಕೇಂದ್ರ ವ್ಯಾಪ್ತಿಯ ಏಳು ವಿಧಾನಸಭಾ ಕ್ಷೇತ್ರಗಳ ಎಲ್ಲಾ ಕಚೇರಿಗಳಲ್ಲಿ ಪ್ರತ್ಯೇಕ ಕೌಂಟರ್ ತೆರೆಯಲು ಸೂಚಿಸಲಾಗಿದೆ. ಪ್ರತಿ ಕೌಂಟರ್‌ಗೆ ಜವಾಬ್ದಾರಿಯುತ ಅಧಿಕಾರಿ ಅಥವಾ ಸಿಬ್ಬಂದಿಯನ್ನು ನಿಯೋಜಿಸಿ, ಅವರ ಹೆಸರು ಮತ್ತು ಹುದ್ದೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಬೇಕು ಎಂದು ನಿರ್ದೇಶಿಸಲಾಗಿದೆ.

ಅರ್ಜಿಗಳ ಸ್ವೀಕೃತಿ, ದಾಖಲೆಗಳು ಹಾಗೂ ರಿಜಿಸ್ಟರ್‌ಗಳನ್ನು ಸಮರ್ಪಕವಾಗಿ ನಿರ್ವಹಿಸುವುದರೊಂದಿಗೆ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಅರ್ಜಿಗಳನ್ನು ಪ್ರಕ್ರಿಯೆಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಜಂಟಿ ಆಯುಕ್ತರಾದ ರಂಗನಾಥ್.ಕೆ, ಹೇಮಂತ್ ಶರಣ್, ಚುನಾವಣಾ ವಿಭಾಗದ ತಹಶೀಲ್ದಾರ್, ಏಳು ವಿಧಾನಸಭಾ ಕ್ಷೇತ್ರಗಳ ಇಖಔಗಳು, ಎಇಆರ್‌ಒಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಯುವಕರಿಬ್ಬರು ನೀರು ಪಾಲು

ಉಡುಪಿ, ಸೆ.30– ಸ್ನೇಹಿತರೊಂದಿಗೆ ಈಜಲು ತೆರಳಿದ್ದ ಇಬ್ಬರು ಯುವಕರು ಸುವರ್ಣ ನದಿಯಲ್ಲಿ ಮುಳುಗಿ ಮೃತಪಟ್ಟ ಘಟನೆ ಬೈಂದೂರಿನ ಹಿರ್ಗಾನ ಗ್ರಾಮದ ಹೆರ್ಮುಂಡೆ ಬಳಿ ನಡೆದಿದೆ.

ಹಿರ್ಗಾನದ ಭರತ್ ಪೂಜಾರಿ (29) ಹಾಗೂ ಹರ್ಷನ್ ಆಚಾರ್ಯ (23) ಮೃತಪಟ್ಟವರು. ಕೆಲಸಕ್ಕೆ ರಜೆ ಇದ್ದ ಹಿನ್ನೆಲೆಯಲ್ಲಿ ಐವರು ಸ್ನೇಹಿತರು ಮಂಗಿಲಾರು ಮೂಲಕ ಸುಮಾರು ಎರಡು ಕಿ.ಮೀ. ದುರ್ಗಮ ದಾರಿಯಲ್ಲಿ ನಡೆದು ಸುವರ್ಣ ನದಿಗೆ ತೆರಳಿದ್ದರು. ಈ ವೇಳೆ, ಆಳವಾದ ನೀರಿಗೆ ತೆರಳಿದ ಭರತ್ ಹಾಗೂ ಹರ್ಷನ್ ನೀರಿನಲ್ಲಿ ಮುಳುಗಿದ್ದಾರೆ ಎನ್ನಲಾಗಿದೆ. ಕೂಡಲೇ ಸ್ನೇಹಿತರು ಅಗ್ನಿಶಾಮಕ ಇಲಾಖೆಗೆ ಮಾಹಿತಿ ರವಾನಿಸಿದ್ದಾರೆ. ವಾಹನ ಸಂಚಾರಕ್ಕೆ ದಾರಿ ಇಲ್ಲದ ಕಾರಣ ಅಗ್ನಿಶಾಮಕ ದಳದ ಸಿಬ್ಬಂದಿ ಸುಮಾರು ಮೂರು ಕಿ.ಮೀ. ನಡೆದು ಘಟನಾ ಸ್ಥಳಕ್ಕೆ ತಲುಪಿದರು. ಸ್ಥಳೀಯರ ಸಹಕಾರದೊಂದಿಗೆ ಮೂರು ಗಂ–ಟೆಗೂ ಅಧಿಕ ಕಾಲ ಕಾರ್ಯಾಚರಣೆ ನಡೆಸಿ ಇಬ್ಬರ ಮೃತದೇಹಗಳನ್ನು ಮೇಲಕ್ಕೆತ್ತಲಾಯಿತು. ಠಾಣಾಧಿಕಾರಿ ಸಂಜೀವ ದೇವಾಡಿಗ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಯಿತು.

ಭರತ್ ಪೇಂಟಿಂಗ್ ಕೆಲಸ ಮಾಡಿಕೊಂಡು ಕುಟುಂಬ ನಿರ್ವಹಿಸುತ್ತಿದ್ದರು. ಸ್ವಂತ ಮನೆ ನಿರ್ಮಿಸುವ ಕನಸು ಕಂಡಿದ್ದ ಅವರ ಮನೆಯ ಕಾಮಗಾರಿ ಸ್ಲ್ಯಾಬ್ ಹಂತ ತಲುಪಿತ್ತು. ಕುಟುಂಬ ಶೀಘ್ರದಲ್ಲೇ ಗೃಹ ಪ್ರವೇಶ ಮಾಡುವ ನಿರೀಕ್ಷೆಯಲ್ಲಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

**ಇಬ್ಬರ ಮೃತದೇಹ ಪತ್ತೆ:**

ಗೋಳಿಹೊಳೆ ಗ್ರಾಮದ ಚಾರ್ಸಲ್ ಪ್ರದೇಶದ ಸೌಪರ್ಣಿಕಾ ನದಿ ಸಮೀಪ ಪುರುಷ ಹಾಗೂ ಮಹಿಳೆಯ ಮೃತದೇಹಗಳು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿವೆ.

ಮೃತರನ್ನು ಕೊಲ್ಲೂರು ಪೊಲೀಸ್ ಠಾಣೆಯ ಅಪರಾಧ ಪ್ರಕರಣದ ಆರೋಪಿಗಳಾದ ವಿಟ್ಟಲ್ ನಾಯಕ್ (35) ಹಾಗೂ ಭವ್ಯಾ ಅಲಿಯಾಸ್ ನಿಶ್ಮಿತಾ (33) ಎಂದು ಗುರುತಿಸಲಾಗಿದೆ.

ಕಳೆದ ಸೆ.11ರಂದು ದಾಖಲಾಗಿದ್ದ ಕೊಲ್ಲೂರು ಠಾಣೆ ಅಪರಾಧ ಕ್ರಮಾಂಕ 56/2026ರಲ್ಲಿ ಬಿಎನ್‌ಎಸ್ ಕಲಂ 123, 109 ಜೊತೆಗೆ 3(5) ಅಡಿ ಪ್ರಕರಣ ದಾಖಲಾಗಿತ್ತು. ವಿಟ್ಟಲ್ ನಾಯಕ್ ಅವರ ಪತ್ನಿಗೆ ಇಂಜೆಕ್ಷನ್‌ಗಳನ್ನು ನೀಡಿ ವಿಷಪ್ರಾಶನಗೊಳಿಸಿ ಕೊಲೆ ಮಾಡಲು ಯತ್ನಿಸಿದ ಆರೋಪದಲ್ಲಿ ಇಬ್ಬರೂ ಆರೋಪಿಗಳಾಗಿದ್ದರು. ಭವ್ಯಾ ಅವರು ವಿಟ್ಟಲ್ ನಾಯಕ್ ಅವರೊಂದಿಗೆ ಸಲುಗೆ ಹೊಂದಿದ್ದರು ಎಂಬ ಆರೋಪವೂ ಪ್ರಕರಣದಲ್ಲಿತ್ತು.

ಇಬ್ಬರೂ ಕೆಲವು ದಿನಗಳ ಹಿಂದೆಯೇ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಬೈಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಸ್ಥಳಕ್ಕೆ ಸೋಕೋ ತಂಡ ತೆರಳಿ ಪರಿಶೀಲನೆ ನಡೆಸುತ್ತಿದೆ. ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

# ವಿದ್ಯುತ್ ಬಿಲ್ ಬಾಕಿ: ಅಂಬೇಡ್ಕರ್ ಭವನಕ್ಕೆ ವಿದ್ಯುತ್ ಸಂಪರ್ಕ ಕಡಿತ

ದೇವನಹಳ್ಳಿ.ಸೆ.30– ಸುಮಾರು 9 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ಇಲ್ಲಿನ ಅಂಬೇಡ್ಕರ್ ಭವನಕ್ಕೆ ವಿದ್ಯುತ್ ಬಿಲ್ ಬಾಕಿ ಉಳಿದಿರುವ ಹಿನ್ನೆಲೆಯಲ್ಲಿ ಬೆಸ್ಕಾಂ ವಿದ್ಯುತ್ ಸಂಪರ್ಕ ಕಡಿತಗೊಳಿಸಿರುವ ಘಟನೆ ಬೆಳಕಿಗೆ ಬಂದಿದೆ.

ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಅಂಬೇಡ್ಕರ್ ಭವನಕ್ಕೆ 2022ರವರೆಗೆ ಸುಮಾರು 14 ಲಕ್ಷ ವಿದ್ಯುತ್ ಬಿಲ್ ಬಾಕಿ ಉಳಿದಿದೆ. ಹೀಗಾಗಿ ಬಾಕಿ ಮೊತ್ತವನ್ನು ಮನ್ನಾ ಮಾಡುವಂತೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಮಾಡಲಾಗಿದೆ.

ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದರಿಂದ ಭವನದ ಚಟುವಟಿಕೆಗಳಿಗೆ ತೊಂದರೆಯಾಗಿದ್ದು, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡ ನಿರ್ವಹಣೆಯಿಲ್ಲದೆ ಬಳಕೆಗೆ ಅಡಚಣೆಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಸಚಿವ ಕೆ.ಎಚ್. ಮುನಿಯಪ್ಪ ಕ್ಷೇತ್ರದಲ್ಲೇ ಈ ಘಟನೆ ನಡೆದಿರುವುದು ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಸರ್ಕಾರಿ ಕಟ್ಟಡಕ್ಕೆ ಬಾಕಿ ಉಳಿದಿರುವ ವಿದ್ಯುತ್ ಬಿಲ್ ಪಾವತಿಸಿ, ಶೀಘ್ರ ವಿದ್ಯುತ್ ಸಂಪರ್ಕ ನೀಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

**PUBLIC NOTICE**

It is hereby notified that, my clients have agreed to purchase the Schedule Property from its owner: Sri.Mohan A, S/o.Sri.Ashwathappa, residing at Kempathimmanahalli Village, Kundana Hobli, Devanahalli Taluk, Bangalore Rural District-562 110.

Apart from the said owner, if any other person/s have any manner of claim or interest or demand over the Schedule Property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within **10 days** from the date of publication of this notice. Objection/s received thereafter will not be binding on my clients.

**SCHEDULE**

**ITEM NO.I** All that piece and parcel of the agricultural land measuring 3.08 Guntas in Sy.No.74/2 situated at Kempathimmanahalli Village, Kundana Hobli, Devanahalli Taluk, Bangalore Rural District and bounded on:

East by : Road
West by : Land bearing Sy.No.13/1
North by : Land bearing Sy.No.74/8
South by : Land belongs to Sri.Pillanna and Sri.Munivenkatarangappa

**ITEM NO.II** All that piece and parcel of the agricultural land measuring 3.08 Guntas in Sy.No.74/8 situated at Kempathimmanahalli Village, Kundana Hobli, Devanahalli Taluk, Bangalore Rural District and bounded on:

East by : Road
West by : Land bearing Sy.No.13/1
North by : Road
South by : Land bearing Sy.No.74/2

Sd/- **S.F.Goutam Chand,**
Advocate
**Goutam Associates**
No.60, 2nd Floor, Kanakapura Road,
Basavanagudi, Bangalore-560004

## ಶಿವಮೊಗ್ಗ ಪಾಲಿಕೆಯಿಂದ ಫ್ಲೆಕ್ಸ್ ತೆರವು

ಶಿವಮೊಗ್ಗ, ಸೆ.30– ಶಿವಮೊಗ್ಗ ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಜನ ವಾಹನ ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ಅಳವಡಿಸಿದ್ದ ಫ್ಲೆಕ್ಸ್‌ಗಳನ್ನು, ತೆರವುಗೊಳಿಸುವ ಕಾರ್ಯಾಚರಣೆಯನ್ನು ಆರಂಭಿಸಿದೆ.

ಪಾಲಿಕೆ ಆಯುಕ್ತ ಮಾಯಣ್ಣಗೌಡರ ಸೂಚನೆಯಂತೆ, ಆರೋಗ್ಯ ವಿಭಾಗದ ಇನ್ಸ್‌ಪೆಕ್ಟರ್ ವಸಂತ್ ಕುಮಾರ್ ನೇತೃತ್ವದ ತಂಡವು ನಿನ್ನೆ ರಾತ್ರಿಯಿಂದಲೇ ನಗರದ ಹಲವೆಡೆ ಜನ ವಾಹನ ಸಂಚಾರಕ್ಕೆ ಅಡೆತಡೆ–ಯಾಗಿದ್ದ ಫ್ಲೆಕ್ಸ್– ಬಂಟಿಂಗ್ಸ್‌ಗಳ ತೆರವು ಕಾರ್ಯ ಆರಂಭಿಸಿದೆ. ಅಪಾಯಕಾರಿ ರೀತಿಯಲ್ಲಿ ಫ್ಲೆಕ್ಸ್ ಅಳವಡಿಸಿದ್ದ ಇಬ್ಬರಿಗೆ, ತಲಾ 2 ಸಾವಿರದಂತೆ ಒಟ್ಟಾರೆ 4 ಸಾವಿರ ರೂ. ದಂಡ ಕೂಡ ಹಾಕಲಾಗಿದೆ.

# ಪ್ರತಿ ಎಕರೆಗೆ 25 ಸಾವಿರ ಬಿಡುಗಡೆಗೆ ಅಶೋಕ್ ಆಗ್ರಹ

ಬೆಂಗಳೂರು.ಸೆ.30– ರಾಜ್ಯದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಪೀಡಿತವಾಗಿವೆ. ರೈತರು ಸಂಕಷ್ಟದಲ್ಲಿದ್ದು, ವಲಸೆ ಹೋಗುವ ಪರಿಸ್ಥಿತಿ ಎದುರಾಗಿದೆ. ಸರ್ಕಾರ ರೈತರಿಗೆ ಸೂಕ್ತ ಪರಿಹಾರ ನೀಡುತ್ತಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರ ಪರಿಹಾರವಾಗಿ ಪ್ರತಿ ಎಕರೆಗೆ 25 ಸಾವಿರ ನೀಡಬೇಕು ಎಂದು ವಿಧಾನಸಭೆಯಲ್ಲಿ ಒತ್ತಾಯಿಸಿದ್ದೆವು. ವಲಸೆ ಹೋಗುವುದನ್ನು ತಡೆಯಲು ಉದ್ಯೋಗ ಕಲ್ಪಿಸಬೇಕು ಎಂದು ಹೇಳಿದ್ದೆವು. ಆದರೆ ಸರ್ಕಾರ 2,500 ನೀಡಿ ಕೈತೊಳೆದುಕೊಳ್ಳುತ್ತಿದೆ ಎಂದು ಅಶೋಕ್ ಟೀಕಿಸಿದರು.

ಕಾವೇರಿ ಜಲಾಶಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದೆ. ಕುಡಿಯುವ ನೀರಿಗೆ ಅಗತ್ಯ ಹಣವನ್ನು ಸರ್ಕಾರ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ರೈತರ ಆತ್ಮಹತ್ಯೆ ಪ್ರಕರಣಗಳ ಕುರಿತು ಮಾತನಾಡಿದ ಅಶೋಕ್, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 3 ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದು ಆರೋಪಿಸಿದರು. ಅಲ್ಲದೆ, ಮಂಡ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳನ್ನೂ ಅವರು ಪ್ರಸ್ತಾಪಿಸಿದರು.

# ವಿಮಾನಕ್ಕೆ ಹೈಜಾಕ್ ಭೀತಿ



ತೆಲ್ ಅವೀವ್, ಸೆ. 30– ದುಬೈಯಿಂದ ತೆಲ್ ಅವೀವ್‌ಗೆ ತೆರಳುತ್ತಿದ್ದ ಫ್ಲೈದುಬೈ ವಿಮಾನವು ಇಂದು ಸೌದಿ ಅರೇಬಿಯಾ ವಾಯು ಪ್ರದೇಶದ ಮೇಲೆ ಹಾರಾಟ ನಡೆಸುತ್ತಿದ್ದ ವೇಳೆ ತುರ್ತು ಸಂಕೇತ ರವಾನಿಸಿದ ಬಳಿಕ ಮಾರ್ಗ ಬದಲಾಯಿಸಿದೆ.

ವಿಮಾನವು ಮೊದಲು ಅಂತರ ರಾಷ್ಟ್ರೀಯ ತುರ್ತು ಸಂಕೇತ 7700 ಅನ್ನು ಪ್ರಸಾರ ಮಾಡಿತು.. ಬಳಿಕ ಅಪಹರಣ ಅಥವಾ ಕಾನೂನುಬಾಹಿರ ಹಸ್ತಕ್ಷೇಪವನ್ನು ಸೂಚಿಸುವ 7500 ಸಂಕೇತವನ್ನು ಕಳುಹಿಸಿತು. ಇದಾದ ನಂತರ ಇಸ್ರೇಲಿ ವಾಯುಪಡೆಯ ಯುದ್ಧವಿಮಾನಗಳನ್ನು ವಿಮಾನದತ್ತ ಕಳುಹಿಸಲಾಯಿತು ಎಂದು ಭದ್ರತಾ ಮೂಲಗಳು ತಿಳಿಸಿವೆ.

ಈ ಘಟನೆಗೆ ಸಂಬಂಧಿಸಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ತುರ್ತು ಸಮಾಲೋಚನೆ ನಡೆಸಿದರು ಎಂದು ಇಸ್ರೇಲಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**IN THE COURT OF THE SUBORDINATE COURT AT KATPADI, Vellore Dist, T.N**
**I.A.No.2/2026 IN O.S.No.888/2022**

Sundariammal ...Petitioner/Plaintiff
**Versus**
A.Jeyalakshmi and others ...Respondents/Defendants

**NOTICE TO RESPONDENTS 16 & 17**

**R 16 & 17**
**1.G.Kandasamy, @G.K.Samy,** aged 45 years, S/o.Gnagadharan, Hindu, residing at 86, 2nd Cross Street, S.R.Puram, Bellamma Nagar, Bangalore-560021
**2.B.K.Devaraj,** aged 50 years, S/o.Kuppan, residing at Door No.72/4, 2nd Cross Street, S.R.Puram, Bellamma Nagar, Bangalore-560021

Sir,
Please take notice that the above named Petitioner filed **I.A.No. 2/2026 in O.S.No.888/2022** on the file of above named court to condone delay of 467 days in filing the Petition under order IX Rule 9 C.P.C and the same stands posted on **14/10/2026** for all of your appearance so all of you hereby informed to appear either in person or through pleader before the above named court on **14/10/2026 at 10:30 AM** failing which the case will be decided in your absence.

**V.RATHINA KUMAR**
Advocate for Pettioner,
VELLORE, T.N

**PUBLIC NOTICE**

It is hereby notified that, my clients have agreed to purchase the Schedule Property from its owners: (I) Smt.M.B.Padmini (ii) Sri.M.B.Santhosh Kumar (iii) Smt.Gayathri Magesh (iv)Smt.Shalini M.B (wife and children of Late Babunath M.B) all are residing at No.20, Gangadhara Chetty Road, Shivan Chetty Garden, Opp RBANMS Ground. Bangalore — 560 042.

Apart from the said owners, if any other person/s have any manner of claim or interest or demand over the Schedule Property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within **10 days** from the date of publication of this notice. Objection/s received thereafter will not be binding on my clients.

**SCHEDULE**

All that piece and parcel of the agricultural land measuring 11 Guntas in Sy.No.13/1 situated at Kempathimmanahalli Village, Kundana Hobli, Devanahalli Taluk, Bangalore Rural District and bounded on:

East by : Cart Road
West by : Land belongs to Sri. Narayanaswamappa
North by : Government Oni
South by : Land belongs to Sri.Pillanna

Sd/- **S.F.Goutam Chand,**
Advocate
**Goutam Associates**
No.60, 2nd Floor, Kanakapura Road,
Basavanagudi, Bangalore-560004

# ಜ್ಯೋತಿ, ಚಿಖಿತಾ, ಪೃಥಿಕಾ ಬಿಲ್ಲಿಗೆ ಚಿನ್ನದ ಬಲ

## ಚೀನಾಕ್ಕೆ ಆಘಾತ



ನಗೋಯಾ, ಸೆ.30: ಹಿಂದಿನ ಏಷ್ಯನ್ ಗೇಮ್ಸ್‌ನಲ್ಲಿ ಬಿಲ್ಲುಗಾರಿಕೆಯಲ್ಲಿ ಸಾಧಿಸಿದ್ದ ಪ್ರಾಬಲ್ಯವನ್ನು ಮುಂದುವರಿಸುವ ಉದ್ದೇಶದೊಂದಿಗೆ ಕಣಕ್ಕಿಳಿದ ಭಾರತ, ಮಹಿಳೆಯರ ಕಾಂಪೌಂಡ್ ತಂಡ ವಿಭಾಗದಲ್ಲಿ ಮತ್ತೊಮ್ಮೆ ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದೆ. ಜ್ಯೋತಿ ಸುರೇಖಾ ವೆನ್ನಂ, ಚಿಖಿತಾ ತನಿಪರ್ತಿ ಮತ್ತು ಪೃಥಿಕಾ ಪ್ರದೀಪ್ ಅವರ ಅದ್ಭುತ ಪ್ರದರ್ಶನದ ನೆರವಿನಿಂದ ಭಾರತ ಚೀನಾವನ್ನು ಮಣಿಸಿ ಪ್ರಶಸ್ತಿ ಉಳಿಸಿಕೊಂಡಿತು.

ಫೈನಲ್‌ನಲ್ಲಿ ಭಾರತ 234–233 ಅಂಕಗಳಿಂದ ಚೀನಾವನ್ನು ಸೋಲಿಸಿತು. ಆರಂಭದಿಂದಲೂ ಒತ್ತಡದ ಪಂದ್ಯವಾಗಿದ್ದರೂ, ಅಂತಿಮ ಹಂತದಲ್ಲಿ ಭಾರತದ ಬಿಲ್ಲುಗಾರ್ತಿಯರು ತೋರಿದ ನಿಖರತೆ ಚಿನ್ನದ ಪದಕವನ್ನು ಖಚಿತಪಡಿಸಿತು.

ಭಾರತದ ಅನುಭವಿ ಬಿಲ್ಲುಗಾರ್ತಿ ಜ್ಯೋತಿ ಸುರೇಖಾ ವೆನ್ನಂ ಅವರಿಗೆ ಈ ಚಿನ್ನ ವಿಶೇಷವಾಗಿತ್ತು. ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ದಕ್ಷಿಣ ಕೊರಿಯಾದ 14 ವರ್ಷದ ಕಾಂಗ್ ಯಿಯೋನ್–ಸಿಯೋ ವಿರುದ್ಧ ಸೋತು ತಮ್ಮ ವೈಯಕ್ತಿಕ ಪ್ರಶಸ್ತಿಯನ್ನು ಕಳೆದುಕೊಂಡಿದ್ದ ಜ್ಯೋತಿ, ತಂಡ ವಿಭಾಗದಲ್ಲಿ ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡುವ ಗುರಿಯೊಂದಿಗೆ ಕಣಕ್ಕಿಳಿದಿದ್ದರು.

ಈ ಹಿಂದೆ 2023ರ ಏಷ್ಯನ್ ಗೇಮ್ಸ್‌ನಲ್ಲಿ ಜ್ಯೋತಿ ವೈಯಕ್ತಿಕ, ಮಹಿಳಾ ತಂಡ ಹಾಗೂ ಮಿಶ್ರ ತಂಡ ವಿಭಾಗಗಳಲ್ಲಿ ಚಿನ್ನ ಗೆದ್ದು ಒಂದೇ ಆವೃತ್ತಿಯಲ್ಲಿ ಮೂರು ಚಿನ್ನ ಗೆದ್ದ ಮೊದಲ ಭಾರತೀಯ ಬಿಲ್ಲುಗಾರ್ತಿ ಎಂಬ ಅಪರೂಪದ ಸಾಧನೆ ಮಾಡಿದ್ದರು.

ಒಮ್ಮೆ ರಾಷ್ಟ್ರೀಯ ಮಟ್ಟದ ಈಜುಪಟುವಾಗಿದ್ದ ಜ್ಯೋತಿ ಬಳಿಕ ಬಿಲ್ಲುಗಾರಿಕೆಯತ್ತ ಆಕರ್ಷಿತರಾಗಿ, ಕಡಿಮೆ ಅವಧಿಯಲ್ಲೇ ವಿಶ್ವದ ಪ್ರಮುಖ ಕಾಂಪೌಂಡ್ ಬಿಲ್ಲುಗಾರ್ತಿಯರಲ್ಲಿ ಒಬ್ಬರಾಗಿ ಬೆಳೆದಿದ್ದಾರೆ.

ಕೃಷಿಕ ಕುಟುಂಬದಿಂದ ಬಂದ ಚಿಖಿತಾ ತನಿಪರ್ತಿಗೆ ಬಿಲ್ಲುಗಾರಿಕೆಯ ಪರಿಚಯವಾದದ್ದು ಆಕೆಯ ತಂದೆಯಿಂದ.

ಎರಡನೇ ತರಗತಿಯಲ್ಲಿ ಓದುತ್ತಿದ್ದಾಗ ಪತ್ರಿಕೆಯಲ್ಲಿ ಬಿಲ್ಲುಗಾರಿಕೆಯ ಕುರಿತು ಓದಿದ ಬಳಿಕ ತಂದೆಯ ಪ್ರೋತ್ಸಾಹದಿಂದ ಆಕೆ ಈ ಕ್ರೀಡೆಯತ್ತ ಹೆಜ್ಜೆ ಇಟ್ಟರು.2018ರಲ್ಲಿ ಅಧಿಕೃತ ತರಬೇತಿ ಆರಂಭಿಸಿದ ಚಿಖಿತಾ, 2025ರಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದರು. ವಿನ್ನಿಪೆಗ್‌ನಲ್ಲಿ ನಡೆದ 2025ರ ವಿಶ್ವ ಬಿಲ್ಲುಗಾರಿಕೆ ಯುವ ಚಾಂಪಿಯನ್‌ಶಿಪ್‌ನಲ್ಲಿ ಅಂಡರ್–21 ಮಹಿಳಾ ವೈಯಕ್ತಿಕ ಚಿನ್ನ ಗೆದ್ದು, ಆ ವಿಭಾಗದಲ್ಲಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಪೃಥಿಕಾ ಪ್ರದೀಪ್ ಐದನೇ ತರಗತಿಯಲ್ಲಿ ಬಿಲ್ಲುಗಾರಿಕೆಯನ್ನು ಕೇವಲ ಹವ್ಯಾಸವಾಗಿ ಆರಂಭಿಸಿದ್ದರು. ಹೊಸತನ ಮತ್ತು ಕುತೂಹಲ ಮೂಡಿಸಿದ ಈ ಕ್ರೀಡೆ ಕ್ರಮೇಣ ಗಂಭೀರ ಆಸಕ್ತಿಯಾಗಿ ಬದಲಾಯಿತು. ಆರನೇ ತರಗತಿಯಿಂದ ಪೋಷಕರು ಅವರಿಗೆ ವೃತ್ತಿಪರ ತರಬೇತಿ ಕೊಡಿಸಿದರು.

ಆ ಬಳಿಕ ಪೃಥಿಕಾ ಭಾರತದ ಬಿಲ್ಲುಗಾರಿಕಾ ತಂಡದ ಪ್ರಮುಖ ಸದಸ್ಯೆಯಾಗಿ ಬೆಳೆದಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಟ್ಟು ಏಳು ಪದಕಗಳನ್ನು ಗೆದ್ದಿದ್ದಾರೆ.

ಫೈನಲ್‌ಗೂ ಮುನ್ನ ಭಾರತಕ್ಕೆ ದಕ್ಷಿಣ ಕೊರಿಯಾ ದೊಡ್ಡ ಸವಾಲಾಗಿ ಎದುರಾಗಿತ್ತು. ಆರಂಭಿಕ ಹಂತದಲ್ಲಿ ಎರಡೂ ತಂಡಗಳ ನಡುವೆ ತೀವ್ರ ಪೈಪೋಟಿ ನಡೆಯಿತು.

ಮೊದಲ ಎಂಡ್‌ನಲ್ಲಿ ಎರಡೂ ತಂಡಗಳು 59–59ರಲ್ಲಿ ಸಮಬಲ ಸಾಧಿಸಿದವು. ಎರಡನೇ ಎಂಡ್‌ನಲ್ಲಿ ಜ್ಯೋತಿಯ ಅನುಭವ ಮತ್ತು ಚಿಖಿತಾ–ಪೃಥಿಕಾ ಅವರ ಯುವ ಉತ್ಸಾಹ ಭಾರತಕ್ಕೆ ಮುನ್ನಡೆ ತಂದುಕೊಟ್ಟಿತು. ಭಾರತ 59–56ರಿಂದ ಆ ಎಂಡ್ ಗೆದ್ದಿತು.

ಮೂರನೇ ಎಂಡ್‌ನಲ್ಲಿ ಭಾರತ 58 ಅಂಕ ಗಳಿಸಿದರೂ, ಈಗಾಗಲೇ ಪಡೆದಿದ್ದ ಮುನ್ನಡೆ ನೆರವಾಯಿತು. ಕೊನೆಯ ಎಂಡ್‌ನಲ್ಲಿ ಕೊರಿಯಾದ 58 ಅಂಕಗಳಿಗೆ ಭಾರತವೂ 58 ಅಂಕ ಗಳಿಸಿ, ಒಟ್ಟು 234–233ರಿಂದ ರೋಚಕ ಜಯ ಸಾಧಿಸಿ ಫೈನಲ್‌ಗೆ ಪ್ರವೇಶಿಸಿತು.

ಫೈನಲ್‌ನಲ್ಲಿ ಚೀನಾ ತೀವ್ರ ಪೈಪೋಟಿ ನೀಡಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಭಾರತದ ಬಿಲ್ಲುಗಾರ್ತಿಯರು ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿದರು.

ಮೊದಲ ಎಂಡ್‌ನಲ್ಲಿ ಭಾರತ 60–58ರಿಂದ ಮುನ್ನಡೆ ಪಡೆಯಿತು. ಎರಡನೇ ಎಂಡ್‌ನಲ್ಲೂ ಅದೇ ಅಂತರದಲ್ಲಿ 60–58ರಿಂದ ಭಾರತ ಮೇಲುಗೈ ಸಾಧಿಸಿತು. ಮೂರನೇ ಎಂಡ್ ಮುಗಿದಾಗ ಭಾರತದ ಒಟ್ಟು ಮುನ್ನಡೆ 178–176ಕ್ಕೆ ತಲುಪಿತ್ತು.

ಕೊನೆಯ ಎಂಡ್‌ನಲ್ಲಿ ಒತ್ತಡ ಹೆಚ್ಚಾದಾಗ ಚೀನಾ ಎರಡು ಬಾರಿ 9 ಅಂಕಗಳಿಗೆ ಸೀಮಿತವಾಯಿತು. ಭಾರತ ಮಾತ್ರ ಅದ್ಭುತ ನಿಖರತೆ ತೋರಿತು. ಕೊನೆಯ ಎಂಡ್‌ನಲ್ಲಿ ಭಾರತದ ಮೂವರು ಆರು ಪರಿಪೂರ್ಣ 10 ಅಂಕಗಳನ್ನು ದಾಖಲಿಸಿದರು.

ಪರಿಣಾಮ, ಚೀನಾಗೆ ಮರಳುವ ಅವಕಾಶವೇ ಸಿಗಲಿಲ್ಲ.ಈ ಗೆಲುವಿನೊಂದಿಗೆ ಭಾರತ ಮಹಿಳಾ ಕಾಂಪೌಂಡ್ ತಂಡದ ಚಿನ್ನವನ್ನು ಉಳಿಸಿಕೊಂಡಿದ್ದು ಮಾತ್ರವಲ್ಲದೆ, ಈ ಸಾಧನೆಯ ಮೂಲಕ ವಿಶ್ವ ದಾಖಲೆಯನ್ನೂ ಸರಿಗಟ್ಟಿತು.

ಚಿಖಿತಾ ಕೆಲವು 9 ಅಂಕಗಳನ್ನು ದಾಖಲಿಸಿದರೂ, ಜ್ಯೋತಿ ಮತ್ತು ಪೃಥಿಕಾ ನಿರಂತರವಾಗಿ 10 ಅಂಕಗಳನ್ನು ಗುರಿಯಾಗಿಸಿಕೊಂಡು ಬಿಲ್ಲು ಬಿಟ್ಟರು. ತರಬೇತುದಾರರ ಮುಖದಲ್ಲಿನ ಸಂತಸವೂ ಅಂತಿಮ ಕ್ಷಣಗಳ ಒತ್ತಡದ ನಡುವೆಯೇ ತಂಡದ ಆತ್ಮವಿಶ್ವಾಸವನ್ನು ಪ್ರತಿಬಿಂಬಿಸಿತು.




# ನೈಸ್ ವಿವಾದ: ಸಿಎಂ ಆಗಿದ್ದಾಗ ಏಕೆ ಮಾಡಲಿಲ್ಲ

## ಎಚ್‌ಡಿಕೆಗೆ ಪ್ರಿಯಾಂಕ್ ತಿರುಗೇಟು

ಬೆಂಗಳೂರು, ಸೆ. 30– ನೈಸ್ (NICE) ರಸ್ತೆ ವಿಚಾರದಲ್ಲಿ ಕುಮಾರಸ್ವಾಮಿ ಅವರು ಮಾಡಿರುವ ಆರೋಪಕ್ಕೆ ತಿರುಗೇಟು ನೀಡಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಮಾಜಿ ಸಿಎಂ ಮತ್ತು ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೆ ಎರಡು ದಶಕಗಳ ಕಾಲ ಅಧಿಕಾರ ಇತ್ತು. ಎರಡು ಬಾರಿ ಮುಖ್ಯಮಂತ್ರಿಯಾಗಿದ್ದರು. ಆಗ ಏಕೆ ಈ ಕೆಲಸ ಮಾಡಲಿಲ್ಲ ಎಂದು ಪ್ರಶ್ನಿಸಿದ್ದಾರೆ.



"ಅಸೂಯೆಗೆ, ಹೊಟ್ಟೆಕಿಚ್ಚಿಗೆ ಮದ್ದಿಲ್ಲ. ಕಳೆದ ಮೂರು ತಿಂಗಳಲ್ಲಿ ಕರ್ನಾಟಕದ ಬಗ್ಗೆ, ಡಿಕೆ ಶಿವಕುಮಾರ್ ಬಗ್ಗೆ ಎಷ್ಟು ಮಾತನಾಡಿದ್ದೀರಿ ಎಂದು ಯೋಚಿಸಿ" ಎಂದು ಖರ್ಗೆ ಹೇಳಿದ್ದಾರೆ.

ಕಾನೂನುಬಾಹಿರ ವಿಚಾರಗಳಿದ್ದರೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಅವರಿಗೆ ತಿಳಿಸಬೇಕು. ನೀವೇ ಕೇಂದ್ರ ಸಚಿವರಾಗಿದ್ದೀರಿ, ನಿಮಗೆ ಅಧಿಕಾರ ಕೊಟ್ಟಿದ್ದಾರೆಲ್ಲ ಎಂದು ಪ್ರಶ್ನಿಸಿದ್ದಾರೆ.

ಇದೇ ವೇಳೆ ಆಸ್ತಿ ವಿಚಾರದಲ್ಲಿ ವಿಶೇಷ ಅಧಿವೇಶನ ಕರೆಯುವ ಸವಾಲನ್ನೂ ಎಸೆದಿದ್ದಾರೆ. "ನಿಮ್ಮ ಸಂಬಂಧಿಕರ ಆಸ್ತಿ ಎಷ್ಟಿದೆ, ಡಿಕೆ ಅವರ ಆಸ್ತಿ, ನನ್ನ ಹಾಗೂ ನಿಮ್ಮ ಆಸ್ತಿ ಎಷ್ಟು, ಹೇಗೆ ಬಂತು ಎಂದು ಚರ್ಚೆ ಮಾಡೋಣ. ಜನರಿಗೆ ಗೊತ್ತಾಗಲಿ" ಎಂದು ಹೇಳಿದ್ದಾರೆ.

### ಸೌಜನ್ಯ ಪ್ರಕರಣ: ಎಸಿಪಿ ಪತ್ರ ವಿಚಾರದಲ್ಲಿ ಗೃಹ ಸಚಿವ ಸ್ಪಷ್ಟನೆ

ಸೌಜನ್ಯ ಪ್ರಕರಣದ ತನಿಖೆಯ ತಂಡದಿಂದ ಕೈಬಿಡುವಂತೆ ಎಸಿಪಿ ಪತ್ರ ಬರೆದಿರುವ ವಿಚಾರದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರತಿಕ್ರಿಯೆ ನೀಡಿ ಒಳ್ಳೆಯ ಉದ್ದೇಶದಿಂದ ಮಾಡಿರುತ್ತೇವೆ. ಯಾವುದರಲ್ಲೂ ವೈಯಕ್ತಿಕ ಆಸಕ್ತಿ ಇಲ್ಲ. ರಚನೆಯಾದ ಮೇಲೆ ಕೆಲವರು ಮತ್ತು ಕುಟುಂಬದವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಎಲ್ಲವನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ" ಎಂದು ಹೇಳಿದ್ದಾರೆ.

ಈ ಪ್ರಕರಣಕ್ಕೆ ಮುಕ್ತಾಯ ಸಿಗಬೇಕು. ಸತ್ಯಾಂಶ ಹೊರಗೆ ತಂದು ನ್ಯಾಯ ಕೊಡಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಸುಪ್ರೀಂ ಕೋರ್ಟ್ ಆದೇಶದಂತೆ ನಡೆಯುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ವಿಜೇಂದ್ರ ಗೆ ಟಾಂಗ್ ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಆರೋಪಕ್ಕೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ ನೀಡಿ "ಅವರು ಸಾಲ ಮಾಡಿ ತುಪ್ಪ ತಿಂದಿದ್ದಾರೆ. ಅವರು ಮಾಡಿದ ಸಾಲದ ಬಡ್ಡಿ ಮತ್ತು ಅಸಲು ನಾವು ಕಟ್ಟುತ್ತಿದ್ದೇವೆ" ಎಂದು ಹೇಳಿದ್ದಾರೆ. ಶ್ವೇತಪತ್ರ ಹೊರಡಿಸಲು ಸವಾಲು ಹಾಕಿದ್ದಾರೆ. ಯಡಿಯೂರಪ್ಪ ಮತ್ತು ಬೊಮ್ಮಾಯಿ ಅವರ ಕಾಲದಲ್ಲಿ ಅನುದಾನವಿಲ್ಲದೆ ಎಷ್ಟು ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದೀರಿ ಎಂದು ಪ್ರಶ್ನಿಸಿ ಎಂದು ಟಾಂಗ್ ನೀಡಿದರು

ಕೆಪಿಎಸ್ಸಿ ತನಿಖೆಯಲ್ಲಿ ಸಿಐಡಿ ತನಿಖೆ ಅಥವಾ ಎಸ್‌ಐಟಿ ತನಿಖೆ ಎಂಬ ಬಗ್ಗೆ ಯಾವುದೇ ಗೊಂದಲ ನಮ್ಮಲ್ಲಿ ಇಲ್ಲ. ಸಿಐಡಿ ಯವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ.

ಐಎಎಸ್ ಅಧಿಕಾರಿ, ಡ್ರೈವರ್, ಮಧ್ಯವರ್ತಿಯನ್ನು ಹಿಡಿದುಕೊಂಡು ಬಂದಿದ್ದು ನಾವು. ಮಾಹಿತಿ ಸಿಐಡಿ ತನಿಖೆಯಿಂದಲೇ ಬರುತ್ತಿದೆ ಹೊರತು ಐಟಿ, ಇಡಿ ತನಿಖೆಯಿಂದ ಅಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

ಕಲಬುರಗಿಯಲ್ಲಿ ಕುರುಬ ಸಮಾಜದ ಪ್ರತಿಭಟನೆ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು ಸಿದ್ದರಾಮಯ್ಯ ಹಾಗೂ ಯತೀಂದ್ರ ಈಗಾಗಲೇ ವಿಚಾರದ ಬಗ್ಗೆ ರಿಯಾಕ್ಟ್ ಮಾಡಿದ್ದಾರೆ.

ಕಾನೂನುಬಾಹಿರವಾಗಿ ಯಾರ ಪುತ್ಥಳಿ ಹಾಕಬಾರದು ಅಂತ ಇದೆ. ಖರ್ಗೆ ಅವರದ್ದು ಇರಬಹುದು, ಸಿದ್ದರಾಮಯ್ಯನವರದ್ದು ಇರಬಹುದು. ಯಾವ ವ್ಯಕ್ತಿ ಸುದೀರ್ಘವಾಗಿ ನಮ್ಮ ರಾಜ್ಯವನ್ನು ದಕ್ಷವಾಗಿ ಆಡಳಿತ ಮಾಡಿದ್ದಾರೆ ಯಾವ ವ್ಯಕ್ತಿ ಇಡೀ ರಾಜಕೀಯ ಬದುಕಿನಲ್ಲಿ ಸಂವಿಧಾನ ಅಂಬೇಡ್ಕರ್ ಸಿದ್ಧಾಂತ ತತ್ವವನ್ನು ನಂಬಿಕೊಂಡು ಹೋಗಿದ್ದಾರೆ ಅದೇ ಸಿದ್ಧಾಂತ ತತ್ವವನ್ನು ಉಲ್ಲಂಘನೆ ಆಗೋದಕ್ಕೆ ಯಾರು ಬಿಡಬಾರದು

### ಸಿದ್ದರಾಮಯ್ಯ ಸಾಹೇಬ್ರು ಕೂಡ ಅದಕ್ಕೆ ಒಪ್ಪೋದಿಲ್ಲ

ಪಾರ್ಕ್ ಮಾಡಬೇಕಾ, ಆಸ್ಪತ್ರೆ ಮಾಡಬೇಕಾ ಯಾವುದಾದರೂ ಹಿಂದುಳಿದ ಹಾಸ್ಟೆಲ್ ಮಾಡಬೇಕಾ ವಿಶ್ವವಿದ್ಯಾಲಯ ಮಾಡಬೇಕಾ ಮಾಡೋಣ ಕಾನೂನು ಬಾಹಿರವಾಗಿ ನಾನು ಹೋಗಿ ಬಾಬಾ ಸಾಹೇಬ್ ಪುತ್ಥಳಿ ಆಗಲೀ, ನೆಹರು ಪುತ್ತಳಿ, ಖರ್ಗೆ ಪುತ್ಥಳಿ ಹಾಕೋಕೆ ಆಗುತ್ತಾ? ನನ್ನದು ಒಂದೇ ವಿನಂತಿ ಇದರಿಂದ ಸಿದ್ದರಾಮಯ್ಯ ಸಾಹೇಬ್ರಿಗೆ ಕೆಟ್ಟ ಹೆಸರು ಬರುತ್ತೆ ಸಮುದಾಯಕ್ಕೆ ಕೆಟ್ಟ ಹೆಸರು ಬರುತ್ತೆ ಸರ್ಕಾರಕ್ಕೆ ಬರುತ್ತೆ ಎಂದರು

### ನನ್ನಂತೂ ಯಾರು ಬಂದು ಭೇಟಿ ಆಗಿಲ್ಲ

ಅವರು ಆಯುಕ್ತರಿಗೆ ಮನವಿ ಕೊಟ್ಟಿರಬಹುದು ಒಂದು ರಸ್ತೆಗೆ ಆಗಲೇ ಗಣ್ಯ ವ್ಯಕ್ತಿಯ ಹೆಸರು ಕೂಡ ಇದೆ ಈಗ ಅದೇ ರಸ್ತೆಗೆ ಹೆಸರಿಡಬೇಕು ಅಂತ ಹೇಳುತ್ತಿದ್ದಾರೆ, ಮುಂದೆ ನೋಡೋಣ ಎಂದರು

# ನಾಪತ್ತೆಯಾಗಿದ್ದ ಕೆಆರ್‌ಐಡಿಎಲ್ ಎಇಇ ಪರ್ವೇಜ್ ಭೋಪಾಲ್‌ನಲ್ಲಿ ಪತ್ತೆ

ಗದಗ,ಸೆ.30–ನಾಪತ್ತೆಯಾಗಿರುವ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್ ಐಡಿಎಲ್ ) ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಪರ್ವೇಜ್ ಅವರ ಪತೆ–ಗೆ ಸಂಬಂಧಿಸಿದಂತೆ ಪೊಲೀಸರಿಗೆ ಮಹತ್ವದ ಸುಳಿವು ಲಭ್ಯವಾಗಿದೆ. ಮಧ್ಯಪ್ರದೇಶದ ಭೋಪಾಲ್ ರೈಲ್ವೆ ನಿಲ್ದಾಣದ ಸಿಸಿಟಿವಿ ದೃಶ್ಯಗಳಲ್ಲಿ ಪರ್ವೇಜ್ ಕಾಣಿಸಿಕೊಂಡಿರುವುದು ತನಿಖೆಗೆ ಹೊಸ ತಿರುವು ನೀಡಿದೆ.



ಪರ್ವೇಜ್ ಗದಗದಿಂದ ಬೆಂಗಳೂರಿಗೆ ತೆರಳಿ, ಅಲ್ಲಿಂದ ಆಂಧ್ರಪ್ರದೇಶದ ವಿಜಯವಾಡ ಹಾಗೂ ಬಳಿಕ ಮಧ್ಯಪ್ರದೇಶದ ಭೋಪಾಲ್‌ಗೆ ಪ್ರಯಾಣಿಸಿರುವ ಮಾಹಿತಿ ಪೊಲೀಸರಿಗೆ ದೊರೆತಿದೆ. ಈ ಮೂಲಕ ಅವರು ಸುಮಾರು 1,200 ಕಿಲೋಮೀಟರ್‌ಗೂ ಹೆಚ್ಚು ದೂರ ಪ್ರಯಾಣಿಸಿರುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ವಿಜಯವಾಡ ತಲುಪಿದ ಬಳಿಕ ಪರ್ವೇಜ್ ಅವರ ಮೊಬೈಲ್ ಲೊಕೇಷನ್ ಪತ್ತೆಯಾಗಿಲ್ಲ. ಮೊಬೈಲ್ ಸ್ವಿಚ್ ಆಫ್ ಆಗಿರುವುದು ಹಾಗೂ ಅವರ ಎಟಿಎಂ ವಹಿವಾಟಿನ ಯಾವುದೇ ಮಾಹಿತಿ ಲಭ್ಯವಾಗದಿರುವುದು ಪತ್ತೆ ಕಾರ್ಯಕ್ಕೆ ಸವಾಲಾಗಿದೆ.

ಈ ನಡುವೆ ಭೋಪಾಲ್ ರೈಲ್ವೆ ನಿಲ್ದಾಣದ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದಾಗ ಪರ್ವೇಜ್ ಅಲ್ಲಿ ಕಾಣಿಸಿಕೊಂಡಿರುವುದು ದೃಢಪಟ್ಟಿದೆ.

# ಎಚ್‌ಡಿಕೆ ಬ್ಲಾಕ್‌ಮೇಲರ್ ಸಚಿವ ಬಾಲಕೃಷ್ಣ ಕಿಡಿ

ಬೆಂಗಳೂರು, ಸೆ.30– ನೈಸ್ ವಿಚಾರದಲ್ಲಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ವಿರುದ್ಧ ಆರೋಪ ಮಾಡಿರುವ ಕೇಂದ್ರ ಸಚಿವ ಕುಮಾರಸ್ವಾಮಿ ವಿರುದ್ಧ ಕಿಡಿ ಕಾರಿರುವ ಪೌರಾಡಳಿತ ಸಚಿವ ಬಾಲಕೃಷ್ಣ ಅವರು ಕುಮಾರಸ್ವಾಮಿ ಅವರನ್ನು 'ಬ್ಲಾಕ್ ಮೇಲರ್', 'ಬ್ಲಾಕ್ ಸ್ಟಾಬರ್', 'ಬ್ಲಾಕ್ ಮ್ಯಾಜಿಕ್' ಮಾಡುವವರು ವಾಗ್ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಕುಮಾರಸ್ವಾಮಿ ಅವರು ತಮ್ಮ ಆರೋಪಗಳನ್ನು ಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧ ಮಾಡುತ್ತಿದ್ದಾರೆ. ಸಿಎಂ ಅವರು ತಮ್ಮ ಚುನಾವಣಾ ಅಫಿಡವಿಟ್‌ನಲ್ಲಿ ಎಲ್ಲಾ ಮಾಹಿತಿ ನೀಡಿದ್ದಾರೆ. ಇದು ಹೊಸ ವಿಷಯವಲ್ಲ. ಎಂದಿದ್ದಾರೆ ಕುಮಾರಸ್ವಾಮಿ ಅವರು ಬಿಎಸ್ ಯಡಿಯೂರಪ್ಪ ಅವರು ಧರ್ಮಸಿಂಗ್ ಅವರಿಗೆ ಬ್ಯಾಕ್ ಸ್ಟಾಬ್ ಮಾಡಿದ ಉಲ್ಲೇಖ ಮಾಡಿದ್ದು, ಪ್ರತಿದಿನ ಬ್ಲಾಕ್ ಮೇಲ್ ಮತ್ತು ಬ್ಲಾಕ್ ಮ್ಯಾಜಿಕ್ ಮೂಲಕ ಜನರನ್ನು ದಾರಿ ತಪ್ಪಿಸುತ್ತಾರೆ. ಇಂದು ಹರಿಹಾಯಿದರು ಕುಮಾರಸ್ವಾಮಿ ಅವರು 2007 ಮತ್ತು 2018 ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಏನು ಮಾಡಿದ್ದು ಅವರಿಗೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ.

ಡಿ.ಕೆ. ಶಿವಕುಮಾರ್ ಸಿಎಂ ಆಗಿರುವುದರಿಂದ ಕುಮಾರಸ್ವಾಮಿ ಅವರಿಗೆ ನಿದ್ರೆ ಬರುತ್ತಿಲ್ಲವಂತೆ. ಅದಕ್ಕಾಗಿ ಅವರು ಡಿಕೆಶಿ ವಿರುದ್ಧ ಅಸಂಬದ್ಧ ಆರೋಪ ಮಾಡುತ್ತಿದ್ದಾರೆ. ಎಂದರು

ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾಗ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸದೆ, ಈಗ ಸುಮ್ಮನೆ ಆರೋಪ ಮಾಡುತ್ತಿದ್ದಾರೆ.

ಸಚಿವ ಬಾಲಕೃಷ್ಣ ಅವರು ಕುಮಾರಸ್ವಾಮಿಯವರ ಅಣ್ಣ ಬಾಲಕೃಷ್ಣ ಗೌಡ ಅವರ ಆಸ್ತಿ ಒಂದು ವರ್ಷದಲ್ಲಿ 1000 ಕೋಟಿ ಆಗಿರುವ ಬಗ್ಗೆ ತನಿಖೆ ನಡೆಯಬೇಕೆಂದು ಸವಾಲು ಹಾಕಿದ್ದಾರೆ. ಕುಮಾರಸ್ವಾಮಿ ಹಫ್ತ ವಸೂಲಿ ಗಿರಾಕಿ ಯಾವಾಗ ಹಫ್ತ ವಸೂಲಿ ಮಾಡಿದ್ದಾರೆ ಹೇಳಲಾ.

ನಮ್ಮದು ದಾಖಲೆ ಇದೆ ಬಿಡುಗಡೆ ಮಾಡ್ತೀವಿ ಕೆಜಿಎಫ್ 2–3 ನಮ್ಮ ಬಳಿಯು ಇದೆ..

ಹಸಿರು ವಲಯದ್ದು ಮಾತಾಡ್ತೀನಿ ಅಂದರು ರಾತ್ರಿ ಸೂಟ್‌ಕೇಸ್ ಬಂತು ಬೆಳಿಗ್ಗೆ ಕೇಳಿದರೆ ಮುಂದೆ ಮಾತಾಡ್ತೀನಿ ಅಂದರು ಎಂದು ಟೀಕಿಸಿದರು.

ದರಿದ್ರ ಸರ್ಕಾರ ಅಂತಿಯ ಕೇಂದ್ರದಿಂದ ಎಕರೆಗೆ 50 ಸಾವಿರ ಕೊಡಿಸಪ್ಪ ನೀನು ಕೇಂದ್ರ ಸಚಿವ ಅಲ್ವಾ..?ಇಲ್ಲ ಅಂದ್ರೆ ನಿನಗೂ ಮುಖಕ್ಕೆ ಉಗಿತಿವಿ ಥೂ ದರಿದ್ರ ಸಚಿವ ಅಂತ ಎಂದು ಕಟುವಾಗಿ ಹೇಳಿದರು .

ಚನ್ನಮ್ಮ ಅವರಿಗೆ ಐಟಿ ಅವರು ನೋಟಿಸ್ ಕೊಟ್ಟಿದ್ದರು ಇವರು ಹೋಗಿ ಮೋದಿ ಅಮಿತ್ ಶಾ ಕೈ ಕಾಲು ಹಿಡಿದುಕೊಂಡರುನಿಮ್ಮ ಕೈ ಮುಗಿತಿವಿ ನಿಮ್ಮ ಜೊತೆ ಇರ್ತಿವಿ ನಮ್ಮದು ಆಚೆ ತರಬೇಡಿ ಅಂತ ಕಾಲು ಹಿಡಿದುಕೊಂಡ್ರು

ಚನ್ನಮ್ಮ ಅವರಿಗೆ ನೋಟಿಸ್ ಕೊಟ್ಟ ಕೂಡಲೆ ಮೈತ್ರಿ ಮಾಡಿಕೊಂಡರು.ಅವರ ಅಣ್ಣ ಬಾಲಕೃಷ್ಣ ಗೌಡರ ಆಸ್ತಿ ಒಂದು ವರ್ಷದಲ್ಲಿ 1 ಸಾವಿರ ಕೋಟಿ ಆಯ್ತುಅದು ಹೇಗೆ ಆಯ್ತು ಅದರ ತನಿಖೆ ನಡೆಯಲಿ ಮೊದಲುಇವರು ಸಿಎಂ ಆಗಿದ್ದಾಗಲೆ ಅವರ ಅಣ್ಣನ ಆಸ್ತಿ 1 ಸಾವಿರ ಕೋಟಿ ಹೇಗೆ ಜಾಸ್ತಿ ಆಯ್ತು ಎಂದು ಪ್ರಶ್ನಿಸಿದರು

2018 ರಲ್ಲಿ ಮುಖ್ಯಮಂತ್ರಿ ಆದಾಗ ಅವಾಗ ಸರಿ ಮಾಡದೆ ಇದ್ದವರು , ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಯಾಕೆ ಮಾತನಾಡಲಿಲ್ಲ

ಇವಾಗ ಡಿಕೆ ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡ್ತಾ ಇರೋದು ಯಾಕೆ ಗುಡ್ಡ ಅಗೆದು ಇಲಿ ಹಿಡಿದ್ದಿದ್ದಾರೆಕುಮಾರ್ ಸ್ವಾಮಿ ಅವರಿಗೆ ಬೇರೆ ಏನು ಕೆಲಸ ಇಲ್ಲ ಅನಿಸುತ್ತೆ ಕೇಂದ್ರದವರು ಕುಮಾರ್ ಸ್ವಾಮಿಗೆ ಸುಪಾರಿ ಕೊಟ್ಟಿದ್ದಾರೆನಮ್ಮವರು ಅಂತ ಹೇಳಿಕೊಳ್ಳೋದಕ್ಕೆ ಅಸಹ್ಯ ಆಗುತ್ತೆ ಕೇಂದ್ರ ಮಂತ್ರಿ ಆಗಿದಿಯಲ್ಲ ಕೊಡ್ಸು ಮೇಕೆದಾಟು ಯೋಜನೆಗೆ ಅನುಮತಿ ಕೊಡ್ಸು ಎಂದು ಸವಾಲು ಹಾಕಿದರು

ಕೇಂದ್ರದಲ್ಲಿ ಮಂತ್ರಿಯಾಗಿ ಕೆಲಸ ಮಾಡೋದಕ್ಕೆ ಹೇಳಿಅದು ಬಿಟ್ಟು ಬ್ಲಾಕ್ ಮೇಲ್ ಮಾಡ್ಕೊಂಡು ಕೂತಿದ್ರೆ ಹೇಗೆಟೋಲ್ ಕಟ್ಟ ಬೇಡಿ ಅನ್ನುವ ಇವರು ಕಟ್ಟದಿದ್ರೆ, ಅಲ್ಲೆ ಹೋಗಿ ರೋಡ್ ಗೆ ಮಲಗಿ ಕೊಳ್ಳಲಿ ಎಂದು ಲೇವಡಿ ಮಾಡಿದರು

# ಯುವಕರಿಬ್ಬರು ನೀರು ಪಾಲು

ಉಡುಪಿ,ಸೆ.30– ಸ್ನೇಹಿತರೊಂದಿಗೆ ಈಜಲು ತೆರಳಿದ್ದ ಇಬ್ಬರು ಯುವಕರು ಸುವರ್ಣ ನದಿಯಲ್ಲಿ ಮುಳುಗಿ ಮೃತಪಟ್ಟ ಘಟನೆ ಬೈಂದೂರಿನ ಹಿರ್ಗಾನ ಗ್ರಾಮದ ಹೆರ್ಮುಂಡೆ ಬಳಿ ನಡೆದಿದೆ. ಹಿರ್ಗಾನದ ಭರತ್ ಪೂಜಾರಿ (29) ಹಾಗೂ ಹರ್ಷನ್ ಆಚಾರ್ಯ (23) ಮೃತಪಟ್ಟವರು. ಕೆಲಸಕ್ಕೆ ರಜೆ ಇದ್ದ ಹಿನ್ನೆಲೆಯಲ್ಲಿ ಐವರು ಸ್ನೇಹಿತರು ಮಂಗಿಲಾರು ಮೂಲಕ ಸುಮಾರು ಎರಡು ಕಿ.ಮೀ. ದುರ್ಗಮ ದಾರಿಯಲ್ಲಿ ನಡೆದು ಸುವರ್ಣ ನದಿಗೆ ತೆರಳಿದ್ದರು.

ಈ ವೇಳೆ, ಆಳವಾದ ನೀರಿಗೆ ತೆರಳಿದ ಭರತ್ ಹಾಗೂ ಹರ್ಷನ್ ನೀರಿನಲ್ಲಿ ಮುಳುಗಿದ್ದಾರೆ ಎನ್ನಲಾಗಿದೆ.



# 526 ಕೆ.ಜಿ. ಡ್ರಗ್ಸ್ ವಶ: ಐವರು ಪಾಕ್ ಪ್ರಜೆಗಳ ಸೆರೆ

ಮುಂಬೈ, ಸೆ.30: ಅರಬ್ಬಿ ಸಮುದ್ರದಲ್ಲಿ ಮಾದಕ ವಸ್ತುಗಳ ಅಕ್ರಮ ಸಾಗಾಟಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಭಾರತೀಯ ತಟರಕ್ಷಕ ಪಡೆ (ಐಸಿಜಿ) ಮತ್ತು ಗುಜರಾತ್ ಭಯೋತ್ಪಾದನೆ ನಿಗ್ರಹ ದಳ (ಎಟಿಎಸ್) ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಐವರು ಪಾಕಿಸ್ತಾನಿ ಪ್ರಜೆಗಳನ್ನು ಬಂಧಿಸಿ, ಸುಮಾರು 526 ಕೆ.ಜಿ. ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಲಕ್ಷದ್ವೀಪದ ಪಶ್ಚಿಮ ಭಾಗದ ಅರಬ್ಬಿ ಸಮುದ್ರದಲ್ಲಿ ಸೆ.25ರಂದು ಈ ಕಾರ್ಯಾಚರಣೆ ನಡೆದಿದೆ. ಗುಪ್ತಚರ ಮಾಹಿತಿಯ ಆಧಾರದ ಮೇಲೆ ಸಮುದ್ರ– ವಾಯು ಕಣ್ಗಾವಲು ವ್ಯವಸ್ಥೆ ಮೂಲಕ ಅನುಮಾನಾಸ್ಪದ ಇರಾನ್ ಮೂಲದ 'ಧೋ' (ದೋಣಿ)ಯ ಚಲನವಲನವನ್ನು ತಟರಕ್ಷಕ ಪಡೆ ಪತ್ತೆಹಚ್ಚಿತ್ತು. ಬಳಿಕ ದೋಣಿಯನ್ನು ಹಿಂಬಾಲಿಸಿ ತಡೆದು ಪರಿಶೀಲನೆ ನಡೆಸಲಾಯಿತು.

ತಪಾಸಣೆ ವೇಳೆ ದೋಣಿಯಲ್ಲಿ ಸುಮಾರು 526 ಕೆ.ಜಿ.ಯಷ್ಟು ಉನ್ನತ ಗುಣಮಟ್ಟದ ಮಾದಕ ವಸ್ತುಗಳು ಪತ್ತೆಯಾಗಿವೆ. ಇದರಲ್ಲಿ ಹೆರಾಯಿನ್ ಮತ್ತು ಮೆಥಾಂಫೆಟಮೈನ್ ಸೇರಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರ ಅಂದಾಜು ಮೌಲ್ಯ 3,000 ಕೋಟಿಗೂ ಅಧಿಕ ಎಂದು ವರದಿಯಾಗಿದೆ.ಬಂಧಿತ ಐವರು ಪಾಕಿಸ್ತಾನಿ ಪ್ರಜೆಗಳು, ವಶಪಡಿಸಿಕೊಂಡ ಮಾದಕ ವಸ್ತುಗಳು ಮತ್ತು ದೋಣಿಯನ್ನು ಶಸ್ತ್ರಸಜ್ಜಿತ ಭದ್ರತೆಯೊಂದಿಗೆ ಮುಂಬೈ ಬಂದರಿಗೆ ಕರೆತರಲಾಗಿದೆ. ಇಲ್ಲಿ ವಿವಿಧ ತನಿಖಾ ಸಂಸ್ಥೆಗಳು ಜಂಟಿಯಾಗಿ ವಿಚಾರಣೆ ನಡೆಸಲಿದ್ದು, ಮಾದಕ ವಸ್ತುಗಳ ಸಾಗಾಟದ ಹಿಂದೆ ಇರುವ ಜಾಲ, ಹಣಕಾಸು ವ್ಯವಸ್ಥೆ ಹಾಗೂ ಇತರ ಸಂಪರ್ಕಗಳ ಬಗ್ಗೆ ತನಿಖೆ ನಡೆಯಲಿದೆ.

ಸಮುದ್ರ ಮಾರ್ಗದ ಮೂಲಕ ಭಾರತಕ್ಕೆ ಮಾದಕ ವಸ್ತುಗಳನ್ನು ತಲುಪಿಸುವ ಪ್ರಯತ್ನವನ್ನು ತಡೆದಿರುವ ಈ ಕಾರ್ಯಾಚರಣೆ, ಕರಾವಳಿ ಪ್ರದೇಶಗಳಲ್ಲಿನ ಕಣ್ಗಾವಲು ಮತ್ತು ವಿವಿಧ ಭದ್ರತಾ ಸಂಸ್ಥೆಗಳ ನಡುವಿನ ಸಮನ್ವಯದ ಮಹತ್ವವನ್ನು ಮತ್ತೊಮ್ಮೆ ತೋರಿಸಿದೆ. ಭಾರತೀಯ ತಟರಕ್ಷಕ ಪಡೆ ಈ ಹಿಂದೆ ಗುಜರಾತ್ ಎಟಿಎಸ್ ಜೊತೆ ಹಲವು ಮಾದಕವಸ್ತು ವಿರೋಧಿ ಕಾರ್ಯಾಚರಣೆಗಳನ್ನು ನಡೆಸಿದೆ.

ಇದೇ ವರ್ಷ ಮೇ 25 ಮತ್ತು 26ರಂದು ಗುಜರಾತ್‌ನ ಮುಂದ್ರಾ ಕರಾವಳಿಯಲ್ಲಿ ತಟರಕ್ಷಕ ಪಡೆ ಮತ್ತು ಗುಜರಾತ್ ಎಟಿಎಸ್ ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯಲ್ಲಿ ಸುಮಾರು 115 ಕೆ.ಜಿ. ಕೊಕೇನ್ ವಶಪಡಿಸಿಕೊಳ್ಳಲಾಗಿತ್ತು. ಇದರ ಅಂತಾರಾಷ್ಟ್ರೀಯ ಮಾರುಕಟ್ಟೆ ಮೌಲ್ಯ ಸುಮಾರು 1,150 ಕೋಟಿ ಎಂದು ಅಂದಾಜಿಸಲಾಗಿತ್ತು.

ಎಟಿಎಸ್ ನೀಡಿದ ನಿರ್ದಿಷ್ಟ ಗುಪ್ತಚರ ಮಾಹಿತಿಯ ಆಧಾರದ ಮೇಲೆ ತಟರಕ್ಷಕ ಪಡೆಯ ಇಂಟರ್‌ಸೆಪ್ಟರ್ ಬೋಟ್‌ಗಳು ಮುಂದ್ರಾ ಲಂಗರು ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದವು. ಈ ವೇಳೆ ಕಂಟೇನರ್ ಹಡಗಿನಲ್ಲಿ ಅನುಮಾನಾಸ್ಪದ ಚಟುವಟಿಕೆ ಕಂಡುಬಂದಿತ್ತು.

ಸಮುದ್ರದಲ್ಲಿ ಪತ್ತೆಯಾದ ಐದು ಚೀಲಗಳನ್ನು ವಶಪಡಿಸಿಕೊಂಡು ಪರಿಶೀಲಿಸಿದಾಗ ಅವುಗಳಲ್ಲಿ ಬಿಳಿ ಪುಡಿಯಿದ್ದ ಪ್ಯಾಕೆಟ್‌ಗಳು ಪತ್ತೆಯಾಗಿದ್ದವು. ಪರೀಕ್ಷೆಯಲ್ಲಿ ಅವು ಕೊಕೇನ್ ಎಂಬುದು ದೃಢಪಟ್ಟಿತ್ತು. ಒಟ್ಟು 115 ಪ್ಯಾಕೆಟ್‌ಗಳಲ್ಲಿ ತಲಾ ಸುಮಾರು ಒಂದು ಕೆ.ಜಿ. ತೂಕದಂತೆ ಒಟ್ಟು 115 ಕೆ.ಜಿ. ಕೊಕೇನ್ ಇತ್ತು. ಬಳಿಕ ಹಡಗನ್ನು ಹೆಚ್ಚಿನ ತನಿಖೆಗಾಗಿ ಬಂದರಿಗೆ ತರಲಾಗಿತ್ತು.

ಈ ಕಾರ್ಯಾಚರಣೆಯು ಕಳೆದ ಐದು ವರ್ಷಗಳಲ್ಲಿ ಭಾರತೀಯ ತಟರಕ್ಷಕ ಪಡೆ ಮತ್ತು ಗುಜರಾತ್ ಎಟಿಎಸ್ ಜಂಟಿಯಾಗಿ ನಡೆಸಿದ 15ನೇ ಯಶಸ್ವಿ ಮಾದಕವಸ್ತು ವಿರೋಧಿ ಕಾರ್ಯಾಚರಣೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

# ನಕಲಿ ಔಷಧ ದಂಧೆ: ಪ್ರಶಾಂತ್ ಪಾಲುದಾರನ ಬಂಧನ

ಬೆಂಗಳೂರು,ಸೆ.30– ನಕಲಿ ಔಷಧ ಜಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಪ್ರಮುಖ ಆರೋಪಿಯನ್ನು ವಿಶೇಷ ತನಿಖಾ ದಳ (ಎಸ್ ಐಟಿ) ಅಧಿಕಾರಿಗಳು ಚೆನ್ನೈನಲ್ಲಿ ಬಂಧಿಸಿದ್ದಾರೆ.

ಕಿಂಗ್‌ಪಿನ್ ಪ್ರಶಾಂತ್ ಬಂಧನದ ಬೆನ್ನಲ್ಲೇ ಮಾಹಿತಿ ಕಲೆಹಾಕಿದ ಎಸ್ ಐಟಿ ಅಧಿಕಾರಿಗಳು ಚೆನ್ನೈ ಮೂಲದ ಫಾರ್ಮಾ ಪಾಲುದಾರ ಬಾಲಸುಬ್ರಮಣಿಯನ್ ಬಂಧಿಸಿ ತೀವ್ರ ವಿಚಾರಣೆ ಕೈಗೊಂಡಿದ್ದಾರೆ.

ತನಿಖೆ ವೇಳೆ ಲಭ್ಯವಾದ ಸುಳಿವುಗಳ ಆಧಾರದ ಮೇಲೆ ಎಸ್‌ಐಟಿ ಅಧಿಕಾರಿಗಳು ಬಾಲಸುಬ್ರಮಣಿಯನ್ ಅವರನ್ನು ಬಂಧಿಸಿದ್ದಾರೆ. ಬಳಿಕ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಹೆಚ್ಚಿನ ವಿಚಾರಣೆಗಾಗಿ ಏಳು ದಿನಗಳ ಕಾಲ ಎಸ್‌ಐಟಿ ಕಸ್ಟಡಿಗೆ ಒಪ್ಪಿಸಲಾಗಿದೆ.

ಬಾಲಸುಬ್ರಮಣಿಯನ್ ಅವರು ಡಿಎಂ ಫಾರ್ಮಾ ಔಷಧ ಕಂಪನಿಯಲ್ಲಿ ಕಿಂಗ್‌ಪಿನ್ ಪ್ರಶಾಂತ್ ಅವರೊಂದಿಗೆ ಪಾಲುದಾರರಾಗಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ.

ನಕಲಿ ಔಷಧಿಗಳ ತಯಾರಿಕೆ ಹಾಗೂ ವಿತರಣೆಯಲ್ಲಿ ಬಾಲಸುಬ್ರಮಣಿಯನ್ ಅವರ ಪಾತ್ರವಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ.

ಈ ಪ್ರಕರಣದಲ್ಲಿ ಇದುವರೆಗೆ ಬಂಧಿತರ ಸಂಖ್ಯೆ ಏಳಕ್ಕೆ ಏರಿ–ಕೆಯಾಗಿದೆ. ನಕಲಿ ಔಷಧಿಗಳ ಉತ್ಪಾದನೆ ಮತ್ತು ಮಾರಾಟದ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ಸಂಪೂರ್ಣ ಜಾಲವನ್ನು ಪತ್ತೆಹಚ್ಚಲು ಎಸ್‌ಐಟಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ಬಂಧಿತ ಆರೋಪಿಯಿಂದ ಜಾಲದ ಇತ–ರೆ ಸದಸ್ಯರು ಹಾಗೂ ದಂಧೆಯ ಕಾರ್ಯವಿಧಾನದ ಕುರಿತು ಮಹತ್ವದ ಮಾಹಿತಿ ಲಭ್ಯವಾಗುವ ನಿರೀಕ್ಷೆಯಿದೆ.